# ಹುಬ್ಬಳ್ಳಿಯ ಸಿದ್ಧಪುರುಷ

(ಶ್ರೀ ಸಿದ್ಧಾರೂಢಸ್ವಾಮಿಗಳ ಸಂಕ್ಷಿಪ್ತ ಚರಿತ್ರೆ)



ಶ್ರೀ ಸಿದ್ಧಾರೂಢ ಮಿಷನ್

ಬೆಂಗಳೂರು

# ಹುಬ್ಬಳ್ಳಿಯ ಸಿದ್ಧಪುರುಷ

(ಶ್ರೀ ಸಿದ್ಧಾರೂಢಸ್ವಾಮಿಗಳ ಸಂಕ್ಷಿಪ್ತ ಚರಿತ್ರೆ)

ವಿದ್ವಾನ್ ಎನ್. ರಂಗನಾಥಶರ್ಮಾ

SRI SIDDHARUDHA MISSION

ಶ್ರೀ ಸಿದ್ಧಾರೂಢ ಉತ್ಸವ ಸಮಿತಿ
ಶ್ರೀ ಸಿದ್ಧಾರೂಢ ಮಿಷನ್
ಬೆಂಗಳೂರು

ಹುಬ್ಬಳ್ಳಿಯ ಸಿದ್ಧಪುರುಷ (ಶ್ರೀ ಸಿದ್ಧಾರೂಢಸ್ವಾಮಿಗಳ ಸಂಕ್ಷಿಪ್ತ ಜೀವನ ಚರಿತ್ರೆ)


ಲೇಖಕರು : ವಿದ್ವಾನ್ ಎನ್. ರಂಗನಾಥಶರ್ಮಾ

ಪ್ರಕಾಶಕರು : ಶ್ರೀ ಸಿದ್ಧಾರೂಢ ಮಿಷನ್
೭೦೨, ಎ೨, ಶರಾವತಿ ಬ್ಲಾಕ್,
ರಾಷ್ಟ್ರೀಯ ಕ್ರೀಡಾ ಗ್ರಾಮ,
ಕೋರಮಂಗಲ, ಬೆಂಗಳೂರು - ೪೭,
ದೂರವಾಣಿ : ೦೮೦ - ೫೭೧ ೭೧೩೬



© ಪ್ರಕಾಶಕರ ಅಧೀನ



ಪ್ರಥಮ ಮುದ್ರಣ - ಫೆಬ್ರವರಿ ೧೧, ೨೦೦೧ - ೨೦೦೦ ಪ್ರತಿಗಳು

ಬೆಲೆ : **30/-** ರೂ.

ಹುಬ್ಬಳ್ಳಿಯಲ್ಲಿ ಪ್ರತಿಗಳು ಸಿಗುವ ಸ್ಥಳ :
ಶ್ರೀ ಸಿದ್ಧಪ್ಪ ಅಬ್ಬೀಗೇರಿ ಅಂಗಡಿ,
ಶ್ರೀ ಸಿದ್ಧಾರೂಢ ಮಠ, ಹುಬ್ಬಳ್ಳಿ.

ಅಕ್ಷರ ಜೋಡಣೆ : ಮಲ್ಲಿಕಾರ್ಜುನ ಆರ್. ನಾಡಗೌಡ.


ಮುದ್ರಣ : ಶ್ರೀನಿವಾಸ ಪ್ರಿಂಟಿಂಗ್ ಪ್ರೆಸ್
ರಾಜಾಜಿನಗರ, ಬೆಂಗಳೂರು - ೧೦.
ದೂರವಾಣಿ : 330 0721



ಶ್ರೀ ಸಿದ್ಧಾರೂಢ ಸ್ವಾಮಿಗಳು



ಶ್ರೀ ಗುರುನಾಥಾರೂಢ ಸ್ವಾಮಿಗಳು




*ದಾನಿಗಳು :*

**ಶ್ರೀ ಟಿ. ಗಂಗಾಧರ ಮತ್ತು ಸಹೋದರರು**

ಪ್ರಸನ್ನ ಮತ್ತು ಪ್ರಮೋದ ಚಿತ್ರಮಂದಿರದ ಮಾಲೀಕರು

ರಾಜಾಜಿನಗರ, ಬೆಂಗಳೂರು



**ಶ್ರೀ ಆರ್. ವಿ. ಹರೀಶ್**

ಅಧ್ಯಕ್ಷರು, ಬೆಂಗಳೂರು ನಗರ ಜನತಾದಳ (ಯು)

ರಾಜಾಜಿನಗರ, ಬೆಂಗಳೂರು

"ರಾಮದಾಸನ ಗುರುಗಳು ಅನೇಕರು. ರಾಮನಾಮ ಮಂತ್ರೋಪದೇಶಮಾಡಿದ ಆತನ ಸ್ವತಃ ತಂದೆ ಆತನ ಮೊದಲಗುರು. ನಂತರ ಅವನು ರಮಣಮಹರ್ಷಿಗಳನ್ನು ಸಂದರ್ಶಿಸಿದನು. ರಮಣರು ಆತನ ಮೇಲೆ ದಿವ್ಯ ಬೆಳಕನ್ನು ಚಲ್ಲಿದರಲ್ಲದೇ ಎಲ್ಲಡೆಯಲ್ಲಿಯೂ ದೇವರನ್ನು ಕಾಣುವ ದಿವ್ಯದೃಷ್ಟಿಯನ್ನು ನೀಡಿದರು. ಅನಂತರ ಆತನು ಹುಬ್ಬಳ್ಳಿಯ ಸಿದ್ಧಾರೂಢಸ್ವಾಮಿಗಳ ದರ್ಶನ ಪಡೆದನು. ಅವರಿಂದ ಆತನು ಅನೇಕ ವಿಷಯಗಳನ್ನು ತಿಳಿದುಕೊಂಡನು. ಆ ಪೈಕಿ, ನಿಜವಾಗಿಯೂ ಮಗುವಿನಂತಿರುವುದು ಹೇಗೆ ಎಂಬುದನ್ನು ಅರಿತುಕೊಂಡದ್ದು ಅತಿಮುಖ್ಯ. ಏಕೆಂದರೆ ಮಗುವಿನಂತಾಗುವುದೆಂದರೆ ದೇವರನ್ನು ಸಾಕ್ಷಾತ್ಕರಿಸಿಕೊಂಡಂತೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಸ್ವತಃ ದೇವರೇ ಆದಂತೆ. ಆತನು ರಾಮಕೃಷ್ಣಪರಮಹಂಸರ ಜೀವನದಿಂದಲೂ ಅನೇಕ ವಿಷಯಗಳನ್ನು ತಿಳಿದುಕೊಂಡನು. ಈ ಇಲ್ಲ ಶ್ರೇಷ್ಠ ಗುರುಗಳು ಈಗ ಆತನು ನೆಲೆನಿಂತಿರುವ ಸ್ಥಿತಿಯನ್ನು ತಲುಪುವಲ್ಲಿ ಸಹಕರಿಸಿದ್ದಾರೆ."

ಸ್ವಾಮಿರಾಮದಾಸ

ಆನಂದಾಶ್ರಮ, ಕಾಂಞಂಗಾಡ್, ಕೇರಳ

# ಮುನ್ನುಡಿ

ಪರಮೇಶ್ವರನು ಶ್ರೇಯೋರೂಪವಾದ ಧರ್ಮವನ್ನು ಜಗತ್ತಿನ ನಿಯಾಮಕಶಕ್ತಿಯಾಗಿ ಸೃಜಿಸಿದನೆಂದು ಉಪನಿಷತ್ತು ಹೇಳುತ್ತದೆ. ಈ ಧರ್ಮವು ಕುಂಠಿತವಾದಾಗಲೆಲ್ಲ ಪರಮೇಶ್ವರನು ತಾನೇ ಅವತರಿಸಿ ಅಥವಾ ತನ್ನ ವಿಶೇಷ ಪ್ರತಿನಿಧಿಗಳನ್ನು ಇಹಲೋಕಕ್ಕೆ ಕಳಿಸಿ ಪುನಃ ಅದನ್ನು ಪ್ರತಿಷ್ಠಾಪಿಸುತ್ತಾನೆ. ಮಾನವ ಚರಿತ್ರೆಯಲ್ಲಿ, ಹೀಗೆ ಇದಕ್ಕಾಗಿ ಅವತರಿಸಿದ ನೂರಾರು ಸಂತಮಹಾತ್ಮರ ಪರಂಪರೆಗೆ ಸೇರಿದವರು ಸಿದ್ಧಾರೂಢ ಸ್ವಾಮಿಗಳು. ಇವರ, ಇಂಥವರ, ಚರಿತ್ರೆಯನ್ನು ಬರೆಯುವುದು ಕಷ್ಟದ ಕೆಲಸ; ಏಕೆಂದರೆ, ಸಾಗರದಲ್ಲಿ ಮುಳುಗಿ ತೇಲುತ್ತಿರುವ ಮಂಜುಗಡ್ಡೆಯ ಬೃಹತ್ ಪರ್ವತದಂತೆ, ಬಾಹ್ಯದೃಷ್ಟಿಗೆ ಗೋಚರವಾಗುವ ಅವರ ಜೀವನ, ಮಹತ್ತ್ವ ಅತ್ಯಲ್ಪ. ಆಂತರ್ಯದ ಬ್ರಹ್ಮಾನುಭವದ ಜೀವನ ಪ್ರವಾಹವೇ ಅತ್ಯಧಿಕ.

ಹಾಗಿದ್ದರೂ, ಲೋಕಸಂಗ್ರಹಕ್ಕಾಗಿಯೇ ಅವರ ಅವತಾರವಾದುದರಿಂದ, ಅವರ ಜೀವನ ವ್ಯಕ್ತಿತ್ವ ಉಪದೇಶಗಳನ್ನೂ ಅದೇ ದೃಷ್ಟಿಕೋನದಿಂದ ಜನಸಾಮಾನ್ಯರ ಮುಂದಿಡುವುದು ಬಲ್ಲಿದರ ಕರ್ತವ್ಯ. ಈ ಪವಿತ್ರಕರ್ತವ್ಯವನ್ನು ವಿದ್ವಾನ್ ಎನ್. ರಂಗನಾಥಶರ್ಮಾ ಅವರು ಬಹು ಸಮರ್ಪಕವಾಗಿ ನೆರವೇರಿಸಿದ್ದಾರೆ. ತಮಗೆ ದೊರಕಿದ ಅತ್ಯಲ್ಪ ಗ್ರಂಥಸಾಮಗ್ರಿಯನ್ನು ಚಾಕಚಕ್ಯತೆಯಿಂದ ಉಪಯೋಗಿಸಿಕೊಂಡು–ಕೇವಲ ಎರಡು ಮೂರು ಬಣ್ಣಗಳ ನೂಲಿನಿಂದಲೇ, ನುರಿತ ನೇಕಾರನೊಬ್ಬನು ಅತಿ ಸುಂದರವಾದ ವಸ್ತ್ರವನ್ನು ನೇಯುವಂತೆ–ಸುಂದರವಾದ, ಓದುಗರಿಗೆ ತೃಪ್ತಿಯನ್ನು ತರಿಸುವಂತೆ ಆಧ್ಯಾತ್ಮಪಿಪಾಸೆಯನ್ನೂ ಹೆಚ್ಚಿಸುವ, ಈ ಕಿರುಹೊತ್ತಿಗೆಯನ್ನು ರಚಿಸಿದ್ದಾರೆ. ಸಿದ್ಧಾರೂಢರ ಜೀವನ, ಘಟನೆಗಳು, ಉಪದೇಶ, ಶಿಷ್ಯವರ್ಗ, ಮಠದ ಚರಿತ್ರೆ ಮೊದಲಾದ ಹತ್ತು ಹಲವು ವಿಷಯಗಳನ್ನು ಸಂಗ್ರಹವಾಗಿ ಸ್ವಾರಸ್ಯಕರವಾಗಿ ನಿರೂಪಿಸಿದ್ದಾರೆ. ಇಂತಹ ಗ್ರಂಥರತ್ನವೊಂದನ್ನು ತುಂಬ ಶ್ರಮವಹಿಸಿ ಶ್ರೀ ಸಿದ್ಧಾರೂಢ ಮಿಷನ್ ಹೊರತರುತ್ತಿದೆ. ಅವರಿಬ್ಬರಿಗೂ ನಮ್ಮ ಹಾರ್ದಿಕ ಅಭಿನಂದನೆಗಳು. ಈ ಗ್ರಂಥವು ಮುಮುಕ್ಷುಗಳಿಗೆ ಇತರರಿಗೂ ಸ್ಫೂರ್ತಿಯನ್ನು ತರಿಸಲಿ ಎಂದು ಹಾರೈಸುತ್ತೇವೆ.

೬–೨–೧೯೮೬

ಸ್ವಾಮಿ ಹರ್ಷಾನಂದ
ಅಧ್ಯಕ್ಷರು, ರಾಮಕೃಷ್ಣ ಮಠ
ಬೆಂಗಳೂರು

# ಹಾರೈಕೆ
## (ದ್ವಿತೀಯ ಮುದ್ರಣಕ್ಕೆ)

ಇದು ಚಿಕ್ಕ ಹೊತ್ತಿಗೆ. ಇದರಲ್ಲಿ ಹಲವು ಅಧ್ಯಾಯಗಳು. ಪ್ರತಿ ಅಧ್ಯಾಯಕ್ಕೂ ಸಂಸ್ಕೃತದಲ್ಲಿ ಸಾರ ಸೂಚಕ ಶಿರ್ಷಿಕೆ. ಸಮಯ–ಸಂದರ್ಭಕ್ಕೆ ತಕ್ಕ ಸುಭಾಷಿತಗಳು. ಬರಹದಲ್ಲಿ ಸಹಜತೆ. ವರ್ಣನೆಯಲ್ಲಿ ಔಚಿತ್ಯ. ಓದುಗನ ಮನಸೆಳೆವ ಕಥಾನಕಶೈಲಿ.

ಈ ಹೊತ್ತಿಗೆಯಲ್ಲಿ ಮೂಡಿದ ಚರಿತೆ ಪೂಜನೀಯ ಆರೂಢರದು. ಅವರ ಸುತ್ತಮುತ್ತ ಜ್ಞಾನ ಸುಗಂಧ ಹರಡಿತ್ತು. ಬಾಲ್ಯದಿಂದ ದೇಹಾವಸಾನದವರೆಗೆ ನಿರ್ಲಿಪ್ತತೆ ಹಾಗೂ ನಿರಾಮಯತೆ ಏಕಪ್ರಕಾರವಾಗಿ ಪ್ರವಹಿಸಿವೆ. ಅವರ ಹೊರಜೀವನ ಎಷ್ಟು ರಮ್ಯವೋ, ಅವರ ಒಳಜೀವನ ಅಷ್ಟೇ ಭವ್ಯ!

ಆ ಅಪರೂಪದ ಬದುಕನ್ನು ರೇಖಿಸುವ ಸೌಭಾಗ್ಯ ಶ್ರೀ ರಂಗನಾಥಶರ್ಮಾ ಅವರದು. ಅವರು ವೃದ್ಧರು. ಅರ್ಧಶತಕ ಗ್ರಂಥಗಳ ಕರ್ತೃಗಳು. ವೇದಾಂತ, ವ್ಯಾಕರಣ, ಅಲಂಕಾರಗಳಲ್ಲಿ ಗಣನೀಯ ಪಾಂಡಿತ್ಯ, ವಿಮರ್ಶಾತ್ಮಕ ಮನೋಭಾವ. ಸಾಹಿತ್ಯಕ್ಷೇತ್ರದ ಆರಾಧಕರೊಬ್ಬರು ಆಧ್ಯಾತ್ಮಕ ಕ್ಷೇತ್ರದ ಆರೂಢರ ಶಬ್ದ ಚಿತ್ರವೀಯುತ್ತಿರುವದೊಂದು ವಿಶೇಷ !

ಈ ಕೃತಿ ಓದುಗರಿಗೆ ಸಾತ್ವಿಕ ಸಂತಸವು ನೀಡುತ್ತಿರಲಿ ಎಂದು ಹಾರೈಸುವೆ.

ಶ್ರೀ ಸಿದ್ಧೇಶ್ವರ ಸ್ವಾಮಿಗಳು,
ಜ್ಞಾನಯೋಗಾಶ್ರಮ, ವಿಜಾಪುರ.

# ಪರಿವಿಡಿ


| ವಿಷಯ | | ಪುಟಸಂಖ್ಯೆ |
|---|---|---|
| | ಮುನ್ನುಡಿ | iv |
| | ಹಾರೈಕೆ | v |
| | ನಿವೇದನೆ | vii |
| | ಪ್ರಕಾಶಕರ ಅರಿಕೆ | xii |
| ೧. | ನ ಪ್ರಭಾತರಲಂ ಜ್ಯೋತಿ..... | 1 |
| ೨. | ಯದಹರೇವ ವಿರಜೇತ್....... | 10 |
| ೩. | ಗುರುಶುಶ್ರೂಷಯಾವಿದ್ಯಾ..... | 17 |
| ೪. | ಯದ್ಯದಾಚರತಿ..... | 21 |
| ೫. | ಏಕಏವ ಚರೇನ್ನಿತ್ಯಂ..... | 26 |
| ೬. | ವಾಗ್ವೈಖರೀ ಶಬ್ದಝರೀ..... | 34 |
| ೭. | ಪ್ರಾರಬ್ಧಂತ್ವಿಹ..... | 43 |
| ೮. | ನ ರತ್ನಮನ್ವಿಷ್ಯತಿ..... | 51 |
| ೯. | ಬ್ರಹ್ಮ ಸತ್ಯಂ ಜಗನ್ಮಿಥ್ಯಾ..... | 65 |
| ೧೦. | ಅರ್ಥಮನರ್ಥಂ...... | 72 |
| ೧೧. | ಸಿಂಹಾವಲೋಕನ | 76 |

# ನಿವೇದನೆ

## (ಪ್ರಥಮ ಮುದ್ರಣಕ್ಕೆ)

ಸೊರಬ ತಾಲ್ಲೂಕಿನಲ್ಲಿರುವ ನಡಹಳ್ಳಿ ಎಂಬ ಗ್ರಾಮ ನನ್ನ ಜನ್ಮಸ್ಥಳ. ನನ್ನ ತಂದೆಯವರಿಗೆ ವೇದಾಂತದಲ್ಲಿ ಬಹಳ ಆಸಕ್ತಿ ಇತ್ತು. ಸಂಸ್ಕೃತದ ಪರಿಚಯವಿರಲಿಲ್ಲವಾದ ಕಾರಣ, ಕನ್ನಡದಲ್ಲಿರುವ ವೇದಾಂತ ಗ್ರಂಥಗಳನ್ನು ಓದಿಕೊಳ್ಳುತ್ತಿದ್ದರು. ಲೋಕಮಾನ್ಯತಿಲಕರ ಗೀತಾರಹಸ್ಯ, ನಿಜಗುಣ ಶಿವಯೋಗಿಗಳ ಕೈವಲ್ಯಪದ್ಧತಿ ಮೊದಲಾದ ಗ್ರಂಥಗಳು ಅವರಿಗೆ ಪ್ರಿಯವಾಗಿದ್ದವು. ಮನೆಗೆ ಬಂದವರೊಡನೆ ವೇದಾಂತದ ವಿಚಾರದಲ್ಲಿ ಚರ್ಚೆ ಮಾಡುತ್ತಿದ್ದರು. ಹಾಗೆ ಚರ್ಚಿಸುವಾಗ " ಈಗ ಜ್ಞಾನಿಗಳೆಲ್ಲಿದ್ದಾರೆ? ಹುಬ್ಬಳ್ಳಿಯ ಸಿದ್ಧಾರೂಢರೊಬ್ಬರಿದ್ದಾರೆ" ಎಂದು ಅನೇಕ ಸಲ ಹೇಳಿರುವುದು ನನಗೆ ಸರಿಯಾಗಿ ಸ್ಮರಣೆಯಲ್ಲಿದೆ. ನನಗೆ ಆಗ ಹತ್ತು-ಹನ್ನೆರಡು ವರ್ಷ ವಯಸ್ಸಾಗಿರಬಹುದು. ಇದು ಸುಮಾರು ೧೯೨೬-೨೮ ನೆಯ ಇಸವಿಗಳ ನಡುವೆ ಇರಬೇಕು.

ನನಗಿಂತ ಸ್ವಲ್ಪ ಹಿರಿಯರಾದ ಇಬ್ಬರು ಸ್ನೇಹಿತರು ಒಂದು ದಿನ ಮನೆಯಿಂದ ಕಣ್ಮರೆಯಾದರು. ಅವರ ತಂದೆ ತಾಯಿಗಳು ಸುತ್ತಮುತ್ತಲಿನ ಹಳ್ಳಿಗಳಿಗೆ ಹೋಗಿ ವಿಚಾರಿಸಿದರೂ ಪತ್ತೆಯಾಗಲಿಲ್ಲ. ೧೦-೧೨ ದಿನಗಳ ಮೇಲೆ ಕಣ್ಮರೆಯಾಗಿದ್ದವರು ಮನೆಗೆ ಬಂದರು. ವಿಚಾರಿಸಿದಾಗ ಅವರಿಬ್ಬರೂ ಹುಬ್ಬಳ್ಳಿಯ ಸಿದ್ಧಾರೂಢರ ಮಠಕ್ಕೆ ಹೋಗಿದ್ದುದಾಗಿ ತಿಳಿಯಿತು. ಬಹುಶಃ ಆರೂಢರ ಶಿಷ್ಯರಾಗಿ ಸೇರಿಕೊಳ್ಳಬೇಕೆಂಬುದು ಅವರ ಉದ್ದೇಶವಾಗಿತ್ತೆಂದು ತೋರುತ್ತದೆ. ಉದ್ದೇಶವೇನೆಂಬುದನ್ನಾಗಲಿ, ಅಲ್ಲಿಂದ ವಾಪಸಾದ್ದಕ್ಕೆ ಕಾರಣವನ್ನಾಗಲಿ ಅವರು ಹೇಳಲೇ ಇಲ್ಲ.

ಹುಬ್ಬಳ್ಳಿಯ ಸಿದ್ಧಾರೂಢರು ದೇಹತ್ಯಾಗ ಮಾಡಿದರೆಂಬ ಸುದ್ದಿ ಒಂದು ದಿನ ನನ್ನ ತಂದೆಯವರಿಗೆ ಮುಟ್ಟಿತು. ಆ ದಿನ ಆರೂಢರ ವಿಷಯವನ್ನೇ ಹೇಳುತ್ತ ಅವರು ವಿಷಣ್ಣರಾಗಿದ್ದರು. ಇದನ್ನಿಲ್ಲಿ ಬರೆಯುವ ಉದ್ದೇಶವೇನೆಂದರೆ, ಸಿದ್ಧಾರೂಢರ ಕೀರ್ತಿ ಎಷ್ಟು ವಿಶಾಲವಾಗಿ

ಹರಡಿತ್ತೆಂಬುದನ್ನು ಸೂಚಿಸುವುದಕ್ಕಾಗಿ. ಅಂತೂ ಸಿದ್ಧಾರೂಢರು ತತ್ತ್ವಜ್ಞಾನಿಗಳು ಎಂಬ ಒಂದು ವಿಚಾರ ನನ್ನ ಹೃದಯದಲ್ಲಿ ಉಳಿಯಿತು. ಈಗ ಕೆಲವು ವರ್ಷಗಳ ಹಿಂದೆ ಬೆಂಗಳೂರು ಸಂಸ್ಕೃತ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಚಿ. ಪ್ರಭುಲಿಂಗ ಎಂಬ ವಿದ್ಯಾರ್ಥಿ ನನ್ನ ಬಳಿಗೆ ಬಂದು, ವ್ಯಾಕರಣಶಾಸ್ತ್ರದ ಒಂದೆರಡು ಪ್ರೌಢ ಗ್ರಂಥಗಳನ್ನು ಹೇಳಿಕೊಡಬೇಕೆಂದು ನನ್ನನ್ನು ಕೇಳಿದನು. ಆತನು ಬುದ್ಧಿಶಾಲಿಯೆಂದೂ, ಗ್ರಹಣಶಕ್ತಿ ಚೆನ್ನಾಗಿದೆಯೆಂದೂ, ಅನ್ನಿಸಿದ್ದರಿಂದ ಒಪ್ಪಿದೆ. ಒಂದು ದಿನ ಪ್ರಾಸಂಗಿಕವಾಗಿ ಸಿದ್ಧಾರೂಢರ ವಿಷಯ ಬಂದಿತು. ಈತನು ಮಠದ ಶಿಷ್ಯಪಂಕ್ತಿಯಲ್ಲಿ ಸೇರಿದವನೆಂಬುದು ಆಗ ನನಗೆ ತಿಳಿಯಿತು. ಆರೂಢರ ವಿಷಯವಾಗಿ ವಿಶೇಷ ಸಂಗತಿಯನ್ನು ತಿಳಿದುಕೊಳ್ಳಬೇಕೆಂಬ ಇಚ್ಛೆ ನನ್ನಲ್ಲಿ ಅಂಕುರಿಸಿತು. ಈ ಶಿಷ್ಯನು ಎರಡು ಪುಸ್ತಕಗಳನ್ನು ತಂದು ಕೊಟ್ಟನು. ಹಳೆಯ ಕಾಲದ ಬರವಣಿಗೆ, ಚಾರಿತ್ರಿಕ ಸಾಮಗ್ರಿ ಅತ್ಯಲ್ಪವಾಗಿದೆ ಎನ್ನಿಸಿತು. ಅನಂತರ ಇನ್ನೂ ಕೆಲವು ಪುಸ್ತಕಗಳನ್ನು ಈತನು ತಂದುಕೊಟ್ಟನು. ಅವುಗಳಲ್ಲಿ ಚಾರಿತ್ರಿಕ ಸಾಮಗ್ರಿ ತಕ್ಕಮಟ್ಟಿಗೆ ದೊರೆಯಿತು. ಆರೂಢರು ಜನರಿಗೆ ಬೋಧಿಸುತ್ತಿದ್ದ ಉಪದೇಶ, ವಿಚಾರ ಸರಣಿ–ಇವು ಅಲ್ಪವಾಗಿದ್ದವು. ಪವಾಡಗಳ ನಿರೂಪಣೆ ಅದಿಕವಾಗಿತ್ತು. ದೊಡ್ಡ ದೊಡ್ಡ ಮಾತುಗಳನ್ನು ಬಳಸಿ ಹೊಗಳುವುದರಿಂದ ಒಬ್ಬರು ಮಹಾತ್ಮರಾಗಿ ಬಿಡುವುದಿಲ್ಲ.

ಸಿದ್ಧಾರೂಢರ ವಿಷಯುವಾಗಿ ನಾನು ಒಂದು ಗ್ರಂಥವನ್ನು ಬರೆದುಕೊಡಬೇಕೆಂದು ಪ್ರಭುಲಿಂಗನು ಹೇಳತೊಡಗಿದನು. 'ಆಗಲಿ; ನೋಡೋಣ' ಎಂದು ಹೇಳಿದೆ. ಬಹಳ ದಿನಗಳು ಕಳೆದು ಹೋದವು. ಅಷ್ಟರಲ್ಲಿ ಈ ಶಿಷ್ಯನು ವ್ಯಾಕರಣ ವಿದ್ವಾನ್ ಆಗಿ, ಎಂ.ಎ., ಪರೀಕ್ಷೆಯನ್ನೂ ಮಾಡಿಕೊಂಡನು! ಕಾರ್ಯಾಂತರದಲ್ಲಿ ವ್ಯಾಪೃತನಾಗಿದ್ದ ನಾನು, ಇನ್ನು ಕಾಲಾತ್ಯಯ ಮಾಡಬಾರದೆಂದು, ಈ ಪುಸ್ತಕವನ್ನು ಬರೆದು ಮುಗಿಸಿದೆ. 'ಹುಬ್ಬಳ್ಳಿಯ ಸಿದ್ಧಪುರುಷ' ಎಂಬ ಹೆಸರಿನ ಈ ಹೊತ್ತಿಗೆ

ಸಿದ್ಧವಾಯಿತು. ಇದರಲ್ಲಿರುವುದು ಸಿದ್ಧಾರೂಢರ ಸಂಕ್ಷಿಪ್ತ ಜೀವನ ಚರಿತೆ. ಐತಿಹಾಸಿಕ ವಿಷಯವೂ ಸಾಲದು. ಆರೂಢರ ತತ್ತ್ವಜಿಜ್ಞಾಸಾ ವಿಧಾನ ಸರಣಿಯೂ ಸಾಲದು. ನನಗೆ ಸಾಕಷ್ಟು ಸಾಮಗ್ರಿ ಈಗ ಪ್ರಕಟಿತವಾದ ಗ್ರಂಥಗಳಿಂದ ದೊರೆಯಲಿಲ್ಲ. ಆ ಗ್ರಂಥಕರ್ತರಿಗೂ ಇದೇ ಪರಿಸ್ಥಿತಿ ಉಂಟಾಗಿರಬೇಕು. ಆದರೂ ಅನೇಕ ವಿಷಯಗಳಿಗೆ ಅವರಿಂದ ಉಪಕೃತನಾಗಿದ್ದೇನೆ. ಅವರೆಲ್ಲರಿಗೂ ಕೃತಜ್ಞತೆಯಿಂದ ವಂದನೆಗಳನ್ನರ್ಪಿಸುತ್ತೇನೆ.

ಶ್ರೀ ರಾಮಕೃಷ್ಣಪರಮಹಂಸರ ಉಪದೇಶಾಮೃತವನ್ನು ಮಾಸ್ಟರ್ ಮಹಾಶಯನೆಂದು ಖ್ಯಾತರಾದ ಒಬ್ಬ ಪುಣ್ಯಾತ್ಮರು, ಕ್ರಮವಾಗಿ ಬರೆದಿಟ್ಟುಕೊಂಡು, ಬಹು ದೊಡ್ಡ ಉಪಕಾರವನ್ನು ಮಾಡಿದರು. ಪ್ರತಿದಿನ ಪರಮಹಂಸರ ಬಳಿಗೆ ಹೋಗಿ, ಅಲ್ಲಿ ನಡೆದಿದ್ದನ್ನೆಲ್ಲ ಬರೆದಿಟ್ಟುಕೊಳ್ಳುತ್ತಿದ್ದರು. ತಿರುವಣ್ಣಾಮಲೆಯ ಶ್ರೀರಮಣಮಹರ್ಷಿಗಳ ಉಪದೇಶಗಳೂ ಭಕ್ತ ಜನರಿಂದ ಲಿಖಿತವಾಗಿ ಬಂದವು. ಹಾಗೆ ಸಿದ್ಧಾರೂಢರ ಉಪದೇಶಗಳನ್ನು ಯಾರೂ ಬರೆದಿಡಲಿಲ್ಲ. ಅವರ ಬಳಿಗೆ ಎಷ್ಟೋ ಜನ ವಿದ್ಯಾವಂತರು ಬರುತ್ತಿದ್ದರು. ಅದೇನು ಕಾರಣವೋ, ಅವರಿಗೆ ಕ್ರಮವರಿತು ಬರೆದಿಡುವ ಪ್ರವೃತ್ತಿಯುಂಟಾಗಲಿಲ್ಲ. ಕನ್ನಡನಾಡು ಒಬ್ಬ ಮಹಾತ್ಮನನ್ನು ಈ ಕಾಲದಲ್ಲಿ ಪಡೆದಿದ್ದರೂ ವಂಚಿತವಾಯಿತು. ಆರೂಢರ ಶಿಷ್ಯರು ಒಂದೆರಡು ಪುಸ್ತಕಗಳನ್ನು ಬರೆದದ್ದುಂಟು. ಅವುಗಳಲ್ಲಿ ಪ್ರತಿದಿನದ ವರದಿಗಳಿಲ್ಲ-ಬೇರೆ ಸಮಯದಲ್ಲಿ ಸ್ವತಂತ್ರವಾಗಿ ಬರೆದವು.

ಆರೂಢರ ಮಠಕ್ಕೆ ಬರುತ್ತಿದ್ದವರಲ್ಲಿ ಲೌಕಿಕ ಫಲಾಪೇಕ್ಷೆಯಿಂದ ಬರುತ್ತಿದ್ದ ಮೂಢಭಕ್ತರೇ ಅಧಿಕ. ಮಠಕ್ಕೆ ಹೋಗಿ ಆರೂಢರ ದರ್ಶನವನ್ನು ಮಾಡಿದರೆ ಸಾಕು, ನಮ್ಮ ಇಷ್ಟಾರ್ಥಗಳೆಲ್ಲವೂ ಕೈಗೂಡುತ್ತವೆಯೆಂದು ಅವರ ಭಾವನೆ. ಆ ಜನರು ತತ್ತ್ವಜಿಜ್ಞಾಸುಗಳಲ್ಲ.

ಅಲ್ಲದೆ 'ಆರೂಢರು ಲಿಂಗಾಯತರು. ಇದು ಲಿಂಗಾಯತರ ಮಠ' ಎಂಬ ಪ್ರತೀತಿ ಈ ಜನರಿಂದ ಪ್ರಾಪ್ತವಾಯಿತು. ತತ್ತ್ವವಿಚಾರಕ್ಕೆ ಮತದ ಗಂಟು ಬಿದ್ದಿತೆಂದರೆ, ತತ್ತ್ವ ದರ್ಶನವು ಮೂಲೆಗೆ ಸರಿಯುತ್ತದೆ.

ಸಿದ್ಧಾರೂಢರು ಲಿಂಗಧಾರಿಗಳಾಗಿರಲಿಲ್ಲ. ಲಿಂಗಧಾರಣೆ ಬೇಡವೆಂದು ಅವರು ಯಾರಿಗೂ ಹೇಳಲಿಲ್ಲ. ವರ್ಣಾಶ್ರಮ ಧರ್ಮಗಳನ್ನು ನಿಂದಿಸಲೂ ಇಲ್ಲ. ಸಾಧಕರ ಆಚಾರವೇ ಬೇರೆ. ಸಿದ್ಧಪುರುಷರ ಆಚಾರ ವ್ಯವಹಾರಗಳೇ ಬೇರೆ. "ನಿಸ್ತ್ರೈಗುಣ್ಯೇ ಪಥಿ ವಿಹರತಾಂ ಕೋವಿಧಿಃ ಕೋನಿಷೇಧಃ = ತ್ರಿಗುಣಾತೀತವಾದ ಯೋಗಸಿದ್ಧಿಯ ಸ್ಥಿತಿಯಲ್ಲಿ ಆತ್ಮಾರಾಮರಾಗಿರತಕ್ಕವರಿಗೆ ವಿಧಿ ಯಾವುದು? ನಿಷೇಧ ಯಾವುದು?" ಎಂದು ಶ್ರೀಶಂಕರಾಚಾರ್ಯರೇ ತಿಳಿಸಿದ್ದಾರೆ. ಅವರ ನಡೆ ನಮಗೆ ಅನುಕರಣೀಯವಲ್ಲ; ನುಡಿ ಅನುಕರಣೀಯ. ಸಾಧಕರಾದವರಿಗೆ ವಿಧಿಯೂ ಉಂಟು. ನಿಷೇಧವೂ ಉಂಟು. ನಡೆಯೂ ಅನುಕರಣೀಯವೆನ್ನತಕ್ಕವರು, ಸಿದ್ಧಾರೂಢರಂತೆ ಕೌಪೀನವನ್ನುಟ್ಟು ಮನೆಯಿಂದ ಹೊರಡಬೇಕಾದೀತು.

ಈ ಎರಡು ಶಂಕೆಗಳಿಗೆ ಸಮಾಧಾನವು ನನಗೆ ಯಾವ ಪುಸ್ತಕದಲ್ಲಿಯೂ ದೊರೆಯಲಿಲ್ಲ. ಯಾವುವೆಂದರೆ–

೧. ಸಿದ್ಧಾರೂಢರು ಹುಬ್ಬಳ್ಳಿಗೆ ಬಂದು ನೆಲಸಿದ ಮೇಲೆ, ಅವರನ್ನು ಹಡೆದ ತಂದೆ ತಾಯಿಗಳಿಗೆ ಈ ವಿಚಾರವು ತಿಳಿದೇ ಇರಬೇಕು. ಅವರು ವಿಖ್ಯಾತನಾದ ತಮ್ಮ ಪುತ್ರನನ್ನು ನೋಡಲು ಬಂದರೆ? ಇಲ್ಲವೆ? ಬಂದರೆ ಅವರ ವಿವರಬೇಕು. ಬಾರದಿದ್ದರೆ ಕಾರಣಬೇಕು. ಅವರಿಬ್ಬರೂ ಆ ಸಮಯದಲ್ಲಿ ಗತಿಸಿಹೋಗಿದ್ದರೆ, ಆರೂಢರ ಸಹೋದರರು, ಗ್ರಾಮಸ್ಥರು, ಬಂಧುಗಳು–ಮೊದಲಾದವರು ಕುತೂಹಲದಿಂದ ನೋಡುವುದಕ್ಕಾದರೂ ಬಂದಿರಲೇಬೇಕು.

೨. ಆರೂಢರು ಹುಬ್ಬಳ್ಳಿಗೆ ಬಂದು ಚಿದ್ಘನಾನಂದಸ್ವಾಮಿಗಳ

ಸಮಾಧಿಯ ಕಟ್ಟೆಯ ಮೇಲೆ ಕುಳಿತಿರುತ್ತಿದ್ದರಷ್ಟೆ. ಅದು ಸಹಜವೆನ್ನೋಣ. ಆದರೆ ಆ ಸಮಾಧಿಯನ್ನೇ ತಮ್ಮ ಶಯನ ಮಂದಿರಕ್ಕೆ ಸೇರಿಸಿ ಕಟ್ಟಿಸಿದ್ದರು. ಶಯನ ಮಂದಿರದಲ್ಲಿ ಸಮಾಧಿಯಿತ್ತು. ಇದರಿಂದ ಅವರು ಚಿದ್ಘನಾನಂದಸ್ವಾಮಿಗಳ ವಿಷಯದಲ್ಲಿ ಪೂಜ್ಯ ಭಾವವನ್ನು ತಳೆದಿದ್ದರೆಂಬುದು ಸ್ಪಷ್ಟವಾಗುತ್ತದೆ. ಸಮಾಧಿಸ್ಥರಾದ ಆ ಸ್ವಾಮಿಗಳು ಯಾರು? ಅವರ ಮಹಿಮೆಯೇನು?

ಸಿದ್ಧಾರೂಢರ ಚರಿತೆಯನ್ನು ಆಳವಾಗಿ ಅಭ್ಯಾಸ ಮಾಡಿ ಬರೆದ ಒಂದು ಸಂಪೂರ್ಣ ಕೃತಿಯ ಅವಶ್ಯಕತೆ ಇದೆ. ಅದರಲ್ಲಿ ಆರೂಢರ ಸಾಧನ ಬೋಧನಗಳಿಗೆ ಪ್ರಾಶಸ್ತ್ಯವಿರಬೇಕು. ಗ್ರಂಥರಚನಾ ವಿಧಾನದಲ್ಲಿ ಅಧಿಕ ಪರಿಶ್ರಮವನ್ನು ಮಾಡಿದ ವಿದ್ವಾಂಸರು ಪ್ರಯತ್ನಿಸಿದರೆ ಇದು ಸಾಧ್ಯವಾಗುತ್ತದೆ.

ಈ ಪುಸ್ತಕವನ್ನು ಬರೆಯಲು ಪ್ರೇರಿಸಿ, ಸಿದ್ಧಾರೂಢರ ಪಾದಗಳಿಗೆ ಒಂದು ಪುಷ್ಪವನ್ನರ್ಪಿಸಲು ಸಹಕರಿಸಿದ್ ಚಿ. ವಿದ್ವಾನ್ ಎಸ್.ಪ್ರಭುಲಿಂಗ ಎಂ.ಎ., ಅವರ ಮೇಲೆ ಸಿದ್ಧಾರೂಢರ ಪರಮಾನುಗ್ರಹವಿರಲೆಂದು ಹಾರೈಸುತ್ತೇನೆ. ಶ್ರೀ ಸಿದ್ಧಾರೂಢರ ಜನ್ಮತಿಥಿ ಕ್ರಿ.ಶ. ಯಾವ ಇಸವಿ, ತಾರೀಖಿನಲ್ಲಿ ಆಗುತ್ತದೆಂಬುದನ್ನು ಪ್ರಸಿದ್ಧ ಜ್ಯೋತಿಶ್ಶಾಸ್ತ್ರಜ್ಞರಾದ ಡಾ॥ ಬಿ. ವಿ. ರಾಮನ್ ಅವರು ಕೃಪೆಯಿಟ್ಟು ತಿಳಿಸಿಕೊಟ್ಟಿದ್ದಾರೆ. ಅವರಿಂದ ನಾನು ಉಪಕೃತನಾಗಿದ್ದೇನೆ.

ಬೆಂಗಳೂರು, ಎನ್. ರಂಗನಾಥಶರ್ಮಾ

ತಾರೀಖು: ೧೮-೦೧-೧೯೬೬.

## ಪ್ರಕಾಶಕರ ಅರಿಕೆ

೧೯ ಹಾಗೂ ೨೦ ನೇ ಶತಮಾನಗಳ ಮಧ್ಯಭಾಗದಲ್ಲಿ ಭಾರತವು ಕಂಡ ಅಪರೂಪದ ಸಂತಶ್ರೇಷ್ಠರಲ್ಲಿ ಸಿದ್ಧಾರೂಢರೂ ಒಬ್ಬರು. ಎಳೆತನದಲ್ಲಿಯೇ ಅವರಿಗಿದ್ದ ಸಾಮರ್ಥ್ಯ, ಪ್ರವೃತ್ತಿಗಳು ಆಚಾರ್ಯ ಶಂಕರರನ್ನು ಜ್ಞಾಪಿಸಿಕೊಡುತ್ತವೆ. ಅವರಿನ್ನೂ ಐದುವರ್ಷದವರಿದ್ದಾಗಲೇ ಶಾಲಾಶಿಕ್ಷಕರಿಗೆ ಓಂಕಾರದ ಅರ್ಥವನ್ನು ಬೋಧಿಸಿದರೆಂಬುದನ್ನು ಚರಿತ್ರೆಯಿಂದ ತಿಳಿಯುತ್ತೇವೆ. ಇದು ನಮಗೆ ಪವಾಡವೆನಿಸಬಹುದು. ಕೆಲವರಿಗೆ ಅಸಂಭವವೂ ಎನಿಸಬಹುದು. ಆದರೆ ಯೋಗಭ್ರಷ್ಟಜ್ಞಾನಿಗಳಿಗೆ ಸಹಜವೇ. ಸಿದ್ಧರದು ಯೋಗಭ್ರಷ್ಟಶರೀರ. ಆದರೆ ಆತ್ಮಜ್ಞಾನದ ಎದುರಿಗೆ ಪವಾಡಗಳು ತುಂಬ ಸಣ್ಣವುಗಳು.

ಸಿದ್ಧಾರೂಢರೊಮ್ಮೆ ವೇಗವಾಗಿ ನಡೆಯುತ್ತಿರುವುದನ್ನು ಕಂಡ ಒಬ್ಬ– "ನೀನಾರ ಮಗ?" ಎಂದು ಕೇಳಿದನಂತೆ. ಅದಕ್ಕೆ ಸಿದ್ಧರ ಉತ್ತರ ಹೀಗಿತ್ತು– " ನಾನು ನನ್ನ ಮಗ" ಎಂದು. ನಮಗೆ ಆಶ್ಚರ್ಯವೆನಿಸಬಹುದು– "ಇದೆಂಥ ಉತ್ತರ?" ಎಂದು. ಆದರೆ ಸಿದ್ಧರು ಅದನ್ನು ಬಿಡಿಸಿ ಹೇಳಿದ ಪರಿಯನ್ನು ಗಮನಿಸಿದಾಗ ನಮಗನ್ನಿಸದಿರದು "ನಿಜಕ್ಕೂ ಅದು ಸೊಗಸಾದ ಉತ್ತರ" ಎಂದು. ಅವರು ತಸ್ಮಾದ್ವಾ ಏತಸ್ಮಾದ್ವಾ ಆತ್ಮನ ಆಕಾಶಃ ಸಂಭೂತಃ ಎಂಬಿತ್ಯಾದಿ (ಆ ಈ ಆತ್ಮನಿಂದ ಆಕಾಶ ಹುಟ್ಟಿತು.) ತೈತ್ತಿರೀಯ ಉಪನಿಷತ್ತನ್ನು ದೃಷ್ಟಿಯಲ್ಲಿಟ್ಟುಕೊಂಡು ಆ ಉತ್ತರವನ್ನು ಕೊಟ್ಟಿದ್ದರು. ಅದನ್ನು ಅವರು ಎಳೆ ಎಳೆಯಾಗಿ ಬಿಡಿಸಿಟ್ಟರು. ಇದು ಸಿದ್ಧಾರೂಢರ ವೇದಾಂತಜ್ಞಾನದ ಆಳವನ್ನು ತೋರಿಸುತ್ತದೆ.

ಹುಬ್ಬಳ್ಳಿಯಲ್ಲಿ ಮಠದ ಉತ್ಸವದಲ್ಲೊಮ್ಮೆ, ಒಬ್ಬ ಬಡಭಕ್ತೆ, ಸಿದ್ಧರಿಗೆ ಒಂದು ದುಡ್ಡನ್ನು ಕೊಟ್ಟು, ಇದು "ಎಲ್ಲ ಭಕ್ತರಿಗೂ ತಲುಪಬೇಕು" ಎಂದಳಂತೆ. ಸಿದ್ಧರು "ಆಗಲಮ್ಮ" ಎಂದು ಕೊತ್ತಂಬರಿಯನ್ನು ತರಿಸಿ ಸಾರಿಗೆ ಹಾಕಿಸಿದರು. ಯಾವ ಕೊರತೆಯೂ ಇಲ್ಲದಿದ್ದರೂ ಅಲ್ಲಲ್ಲಿ ಬಿದ್ದಿರುತ್ತಿದ್ದ ಕಾಳುಕಡಿಗಳನ್ನು ಸಿದ್ಧರು ಒಂದೊಂದಾಗಿ ಆಯ್ದುಕೊಳ್ಳುತ್ತಿದ್ದರು. ಇವು ಅವರ ವ್ಯಾವಹಾರಿಕ ನಿಲುವನ್ನು ತಿಳಿಸುತ್ತವೆ.

ಸಿದ್ಧಾರೂಢರಿಗೆ ಪೀತಾಂಬರ ಹೊದಿಸಿ, ಬೆಳ್ಳಿಯ/ಬಂಗಾರದ ಕಿರೀಟವನ್ನಿಟ್ಟು ಪೂಜಿಸುತ್ತಿದ್ದರು. ಅದಾದನಂತರ, ಹರಿದ ಚಿಂದಿಬಟ್ಟೆಯಿಂದ ತಯಾರಿಸಿದ

ಕೌದಿಯನ್ನು ಹೊದಿಸಿ, ಕೈಯಲ್ಲಿ ಮಣ್ಣಿನ ಪಾತ್ರೆ(ಪರ್ಯಾಣ,ಮಗಿ)ಗಳನ್ನು ಕೊಟ್ಟು ಪೂಜಿಸುತ್ತಿದ್ದರು. ರಾಮಕೃಷ್ಣ ಪರಮಹಂಸರು, ಒಂದು ಕೈಯಲ್ಲಿ ಮಣ್ಣನ್ನೂ, ಮತ್ತೊಂದು ಕೈಯಲ್ಲಿ ಬಂಗಾರವನ್ನೂ ಹಿಡಿದುಕೊಂಡು ಗಂಗೆಗೆ ಎಸೆಯುತ್ತಿದ್ದರಂತೆ. ಈ ಎರಡೂ ಘಟನೆಗಳ ಸ್ವಾರಸ್ಯವನ್ನು ನಾವು ಹೋಲಿಸಿ, ಭಾವಿಸಿ ನೋಡಬೇಕು.

ಸಿದ್ಧಾರೂಢರ ಕುರಿತಾಗಿ ಕನ್ನಡ, ಮರಾಠೀ, ಹಿಂದೀ, ಇಂಗ್ಲೀಷ್, ತೆಲುಗು ಭಾಷೆಗಳಲ್ಲಿ ಹಲವಾರು ಪುಸ್ತಕಗಳು ಹೊರಬಂದಿವೆ. ಆದರೂ ಅವರ ಕ್ರಮವಾದ ಬೋಧನೆಗಳನ್ನು, ನಿಖರವಾದ ವಿವರಗಳನ್ನು ಹಿಡಿದಿಟ್ಟ ಹಲವಾರು ಕೃತಿಗಳು ಹೊರಬರಬೇಕಾಗಿವೆ.

ಪ್ರೀತಿಪೂರ್ವಕವಾಗಿ ನನಗೆ ವಿದ್ಯೆಯನ್ನು ಧಾರೆಯೆರೆದ ಪೂಜ್ಯ ವಿದ್ವಾನ್ ಶ್ರೀ ಎನ್. ರಂಗನಾಥಶರ್ಮಾ ಅವರು ಈ ಪುಸ್ತಕವನ್ನು ಬರೆದಿರುವುದು ತುಂಬ ಸಂತಸದ ಸಂಗತಿ. ಶ್ರೀ ಸಿದ್ಧಾರೂಢರ ಜನ್ಮದಿನವನ್ನು ಇಂಗ್ಲೀಷ್ ಇಸ್ವಿಗೆ ಅನುಗುಣವಾಗಿ ಮೊದಲಬಾರಿಗೆ ಈ ಪುಸ್ತಕದಲ್ಲಿ ಗುರುತಿಸಲಾಗಿದೆ. ಚಲಿಸುವ ದೇವರೆನಿಸಿದ ಶ್ರೀ ಸಿದ್ಧೇಶ್ವರಸ್ವಾಮಿಗಳು ಈ ಪುಸ್ತಕಕ್ಕೆ ಶುಭಹಾರೈಸಿ ಆಶೀರ್ವದಿಸಿದ್ದಾರೆ. ಅವರಿಗೆ ನಮ್ಮ ಭಕ್ತಿಪೂರ್ವಕ ಪ್ರಣಾಮಗಳು. ಇದೀಗ ಈ ಪುಸ್ತಕ ಎರಡನೇ ಮುದ್ರಣವನ್ನು ಕಾಣುತ್ತಿರುವುದು ಸಂತಸದ ಸಂಗತಿ. ದಾನಿಗಳಾದ *ಶ್ರೀ ಟಿ. ಗಂಗಾಧರ ಮತ್ತು ಸಹೋದರರು* ಹಾಗೂ *ಶ್ರೀ ಆರ್.ವಿ. ಹರೀಶ್, ರಾಜಾಜಿನಗರ, ಬೆಂಗಳೂರು,* ಅವರು ಈ ಪುಸ್ತಕದ ಮುದ್ರಣವೆಚ್ಚವನ್ನು ಭರಿಸಿ ನೆರವಾಗಿದ್ದಾರೆ. ಅವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು. ಈ ಗ್ರಂಥವನ್ನು ಪ್ರಕಟಿಸುವ ಸುಯೋಗವನ್ನೊದಗಿಸಿದ ಗುರುಗಳಾದ ವಿದ್ವಾನ್ ಎನ್. ರಂಗನಾಥಶರ್ಮಾ ಅವರಿಗೂ, ಅಂದವಾಗಿ ಮುದ್ರಿಸಿದ ಶ್ರೀನಿವಾಸ ಪ್ರಿಂಟಿಂಗ್ ಪ್ರೆಸ್‌ನವರಿಗೂ, ಶ್ರೀ ಸಿದ್ಧಾರೂಢರ ಭಾವಚಿತ್ರವನ್ನು ಬರೆದುಕೊಟ್ಟ ಶ್ರೀ ಎಂ.ಜಿ.ಕಮ್ಮಾರ್ ಅವರಿಗೂ, ಓದುಗರಿಗೂ ನಮ್ಮ ವಂದನೆಗಳು.

ಫೆಬ್ರವರಿ ೧೧, ೨೦೦೧ – ಎಸ್. ಪ್ರಭುಲಿಂಗದೇವರು,

ಶ್ರೀ ಸಿದ್ಧಾರೂಢ ಮಿಷನ್.

ಶ್ರೀ

೧

# ನ ಪ್ರಭಾತರಲಂ ಜ್ಯೋತಿರುದೇತಿ ವಸುಧಾತಲಾತ್

*(ದಿವ್ಯ ಜ್ಯೋತಿಯು ಆಕಾಶದಲ್ಲಿ ಹುಟ್ಟಿ ಮಿನುಗುತ್ತದೆ. ಅದು ನೆಲದಲ್ಲಿ ಹುಟ್ಟುವುದಿಲ್ಲ.)*

ಪುಣ್ಯಭೂಮಿಯಾದ ಈ ಭರತಖಂಡವು ಅಧ್ಯಾತ್ಮವಿದ್ಯೆಯ ಮಾತೃಭೂಮಿಯಾಗಿದೆ. ಎಲ್ಲ ವಿದ್ಯೆಗಳಿಗಿಂತ ಆತ್ಮವಿಚಾರವನ್ನು ಮಾಡುವ ವಿದ್ಯೆ ಶ್ರೇಷ್ಠವಾದದ್ದು. 'ಅಧ್ಯಾತ್ಮವಿದ್ಯಾ ವಿದ್ಯಾನಾಂ' ಎಂದು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಸ್ಪಷ್ಟವಾಗಿ ನುಡಿದಿದ್ದಾನೆ. ಅಧ್ಯಾತ್ಮವಿದ್ಯೆ ಬಹಳ ಗಹನವಾದದ್ದು. ಇಂದ್ರಿಯಗಳಿಗೆ ಗೋಚರಿಸುವ ಪ್ರತ್ಯಕ್ಷವಸ್ತುವನ್ನು ಕುರಿತು ಮನುಷ್ಯನು ಆಳವಾಗಿ ವಿಚಾರವಿಮರ್ಶೆಗಳನ್ನು ನಡೆಸಲು ಸಾಧ್ಯ. ಆತ್ಮನಾದರೋ ಇಂದ್ರಿಯ ಗೋಚರನಲ್ಲ. ಆದ್ದರಿಂದ ಮನುಷ್ಯನ ಊಹಾಪೋಹಗಳೂ ಆತ್ಮನವರೆಗೆ ಹೋಗಿ ಹಿಂದಕ್ಕೆ ಸರಿದುಬಿಡುತ್ತವೆ. ಇಂದ್ರಿಯಾತೀತವಾದ ಆರ್ಷಜ್ಞಾನವು ಮಾತ್ರ ಅಧ್ಯಾತ್ಮದ ರಹಸ್ಯವನ್ನು ತಿಳಿಸಿಕೊಡಬಲ್ಲದು. ಅನುಮಾನದಿಂದ-ತರ್ಕದಿಂದ ಮಾಡುವ ವಿಚಾರವೆಲ್ಲವೂ ಒಂದು ಹಂತದಲ್ಲಿ ನಿಲ್ಲಲೇಬೇಕಾಗುತ್ತದೆ. ಉದಾಹರಣೆಗೆ, ನಾವು ತರ್ಕದಿಂದ ಈಶ್ವರನಿದ್ದಾನೆಂದೂ ಅವನೇ ಈ ಜಗತ್ತಿನ ಸೃಷ್ಟಿ ಸ್ಥಿತಿಲಯಗಳಿಗೆ ಕಾರಣನೆಂದೂ ಸಾಧಿಸಬಹುದು. ಆದರೆ ಈಶ್ವರನ ಸ್ವರೂಪವೇನು? ಅವನು ಗಂಡಸೆ? ಹೆಂಗಸೆ? ಅಥವಾ ಅದೊಂದು ನಪುಂಸಕವಸ್ತುವೆ? ಈಶ್ವರನಿಗೆ ರೂಪವಿದೆಯೆ? ಇದ್ದರೆ ಯಾವ ಬಗೆಯದು? ರೂಪವಿಲ್ಲವಾದರೆ ಎಂದರೆ ಕೈಕಾಲು ಮೊದಲಾದವುಗಳಿಲ್ಲವಾದರೆ, ಜಗತ್ತನ್ನು ಸೃಷ್ಟಿಸುವುದಾದರೂ ಹೇಗೆ? ಜಗತ್ತಿನ ಸೃಷ್ಟಿಗೆ ಬಳಸುವ ವಸ್ತು ಯಾವುದು? ಅದು ಎಲ್ಲಿಂದ ಬಂದಿತು? ಇತ್ಯಾದಿ ಪ್ರಶ್ನೆಗಳನ್ನು ತರ್ಕವು ಎಂದೆಂದಿಗೂ ನಿರ್ಣಯಿಸಲಾರದೆ ಬಹುದೂರದಲ್ಲಿ ನಿಂತುಬಿಡುತ್ತದೆ. ಹೀಗಿರುವುದರಿಂದ ಈ ವಿಶ್ವದ ಪರಮಸಾರಭೂತವಾದ ಆ ಮಹಾತತ್ತ್ವವನ್ನು ತಿಳಿಯುವುದು ಹೇಗೆ? ಇದಕ್ಕೆ ಪ್ರಾಚೀನರಾದ ಮಹರ್ಷಿಗಳು ಒಂದು ನಿರ್ಣಯಕ್ಕೆ ಬಂದಿದ್ದಾರೆ. ಏನೆಂದರೆ

ಪ್ರತ್ಯಕ್ಷೇಣಾನುಮಿತ್ಯಾ ವಾ ಯಸ್ತೂಪಾಯೋ ನ ವಿದ್ಯತೇ।
ಏನಂ ವಿದಂತಿ ವೇದೇನ ತಸ್ಮಾದ್ವೇದಸ್ಯ ವೇದತಾ ॥

"ಪ್ರತ್ಯಕ್ಷದಿಂದಾಗಲಿ ಅನುಮಾನದಿಂದಾಗಲಿ ಸತ್ಯವನ್ನು ಕಾಣುವ ಉಪಾಯವು ತಿಳಿಯದೇ ಹೋದಾಗ ಅದನ್ನು ವೇದದ ಮೂಲಕ ಪ್ರಾಜ್ಞರು ತಿಳಿದುಕೊಳ್ಳುತ್ತಾರೆ. ಆದ್ದರಿಂದಲೇ ಅದಕ್ಕೆ ವೇದವೆಂದು ಹೆಸರು."

ವೇದಯತೀತಿ ವೇದಃ – ಸತ್ಯವನ್ನು ಯಾವುದು ತಿಳಿಸಿ ಕೊಡುತ್ತದೆಯೋ ಅದು ವೇದ. ವೇದವನ್ನು ಪರಮಾತ್ಮನೇ ಬೋಧಿಸಿದನೆಂಬುದು, ಭಾರತೀಯರ ನಿಲುವು. ಋಷಿಗಳ ದಿವ್ಯಜ್ಞಾನವೂ ಸಹ ವೇದದಿಂದಲೇ ಉಂಟಾಯಿತೆಂದು ಮಹಾದಾರ್ಶನಿಕನಾದ ಭರ್ತೃಹರಿಯು ಹೇಳಿದ್ದಾನೆ. "ಋಷೀಣಾಮಪಿ ಯಜ್ಜ್ಞಾನಂ ತದಪ್ಯಾಗಮ ಪೂರ್ವಕಂ" ಎಂದು.

ವೇದರಾಶಿಯ ಜ್ಞಾನಕಾಂಡವೇ ಉಪನಿಷತ್ತು. ಉಪನಿಷತ್ತುಗಳಿಗೆ ವೇದಾಂತವೆಂದೂ ಹೆಸರಿದೆ. ವೇದಗಳ ಸಿದ್ಧಾಂತವನ್ನು ತಿಳಿಸತಕ್ಕದ್ದು ವೇದಾಂತ. ಅಧ್ಯಾತ್ಮವಿದ್ಯೆಯೆಂದರೆ ವೇದಾಂತವೇ. ಈ ಹೆಸರು ಸರ್ವರಿಗೂ ಪರಿಚಿತವಾದದ್ದು.

ವೇದಾಂತವು ನಿರ್ಣಯಿಸಿ ಹೇಳಿರುವ ಸಿದ್ಧಾಂತವೇ ಅದ್ವೈತದರ್ಶನ. ಹಲವಾರು ಜನ್ಮಗಳಲ್ಲಿ ಮಾಡಿದ ಪುಣ್ಯವಿಶೇಷದಿಂದ ಮಾನವನಿಗೆ ಅಧ್ಯಾತ್ಮ ವಿಚಾರದಲ್ಲಿ ಪ್ರವೃತ್ತಿಯುಂಟಾಗುತ್ತದೆ. ಪುಣ್ಯಬಲದಿಂದಲೇ ಆತನಿಗೆ ತತ್ತ್ವಜ್ಞಾನಿಯಾದ ಸದ್ಗುರು ದೊರೆಯುತ್ತಾನೆ. ಶಮದಮಾದಿ ಸಾಧನಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಸದ್ಗುರುವಿನ ಸೇವೆಯಿಂದ ಆತನ ಕೃಪೆಗೆ ಪಾತ್ರನಾಗಿ ಬ್ರಹ್ಮಜ್ಞಾನವನ್ನು ಪಡೆಯುತ್ತಾನೆ. ಈತನೇ ಸಿದ್ಧಪುರುಷ. ಈ ಸಿದ್ಧಪುರುಷರು ನಮ್ಮ ರಾಷ್ಟ್ರದಲ್ಲಿ ಹಿಂದೆ ಬಹಳ

ಜನರಾಗಿಹೋದರು. ಅವರೆಲ್ಲರೂ ಮುಕ್ತಾತ್ಮರು. ಈ ಮಹಾಪುರುಷರಲ್ಲಿಯೇ ಕೆಲವರಿಗೆ, ಸಂಸಾರಿಗಳಾಗಿ ಅಜ್ಞಾನದಿಂದ ನರಳುತ್ತಿರುವ ನಮ್ಮಂತಹವರ ಮೇಲೆ ಕರುಣೆಯುಂಟಾಗುತ್ತದೆ. ಅವರನ್ನು ಉದ್ಧರಿಸಬೇಕೆಂಬ ಸಂಕಲ್ಪವು ಮೂಡುತ್ತದೆ. ಅವರು ಸದ್ಗುರುವಿನ ರೂಪದಲ್ಲಿ ಅಧ್ಯಾತ್ಮಜ್ಞಾನವನ್ನು ಬೋಧಿಸುವುದರಿಂದಲೇ ಈ ತತ್ತ್ವಜ್ಞಾನದ ಪರಂಪರೆ ಲೋಕದಲ್ಲಿ ಉಳಿದುಕೊಂಡಿದೆ. ಇವರನ್ನೇ ನಾವು ಸಿದ್ಧಪುರುಷರೆನ್ನುತ್ತೇವೆ. ಅವರು ತತ್ತ್ವಸ್ವರೂಪವನ್ನರಿತು ಕೃತಕೃತ್ಯರಾದವರು. ಹೊಸದಾಗಿ ಅವರು ಯಾವ ಸಾಧನಗಳನ್ನೂ ಅವಲಂಬಿಸಬೇಕಾಗಿಲ್ಲ. ಯಾವ ಅನುಷ್ಠಾನವನ್ನೂ ಮಾಡಬೇಕಾಗಿಲ್ಲ. ಹುಬ್ಬಳ್ಳಿಯ ಶ್ರೀ ಸಿದ್ಧಾರೂಢಸ್ವಾಮಿಗಳು ಅಂತಹ ಮಹಾತ್ಮರಲ್ಲೊಬ್ಬರು.

## ಜನ್ಮ, ದೇಶ, ಕಾಲಗಳು

ಕನ್ನಡನಾಡಿನ ಬೀದರ್ (ಬಿದರೆ) ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ ಚಳಕಾಪುರವೆಂಬ ಒಂದು ಚಿಕ್ಕಹಳ್ಳಿ ಇದೆ. ಇಲ್ಲಿ ಒಂದು ಆಂಜನೇಯ ದೇವಸ್ಥಾನವಿದೆ. ಹಳ್ಳಿಯು ಚಿಕ್ಕದಾದರೂ ಆಗಾಗ ನಡೆಯುವ ಧಾರ್ಮಿಕ ಕಾರ್ಯಗಳಿಂದಲೂ ಸಾಹಿತ್ಯ ವಿಚಾರಗಳಿಂದಲೂ ಹಳ್ಳಿಯಲ್ಲೊಂದು ಕಳೆ ಇತ್ತು. ಇದರಿಂದಾಗಿ ಅಲ್ಲಿ ವಾಸವಾಡುವ ಜನರು ಸಂಸ್ಕೃತಿಸಂಪನ್ನರಾಗಿದ್ದರು. ಸಜ್ಜನರೆಂದು ಹೆಸರು ಗಳಿಸಿದ್ದ ಗುರುಶಾಂತಪ್ಪನೆಂಬ ಒಬ್ಬ ಹಿರಿಯರು ತಮ್ಮ ಪತ್ನಿಯಾದ ದೇವಮಲ್ಲಮ್ಮನೊಡನೆ ಕುಟುಂಬಜೀವನವನ್ನು ನಡೆಸುತ್ತ ಆ ಪ್ರಾಂತದವರಿಗೆ ಆದರ್ಶಪ್ರಾಯರಾದ ಗೃಹಸ್ಥರಾಗಿದ್ದರು. ಜನ್ಮಾಂತರದ ಪುಣ್ಯಯೋಗದಿಂದ ಈ ದಂಪತಿಗಳೇ ಶ್ರೀ ಸಿದ್ಧಾರೂಢಸ್ವಾಮಿಗಳಿಗೆ ತಂದೆತಾಯಿಗಳಾದರು. ಶ್ರೀಸಿದ್ಧಾರೂಢರು ದೇವಮಲ್ಲಮ್ಮನ ಗರ್ಭದಿಂದ ಅವತರಿಸಿದರು. ಆ ದಂಪತಿಗಳಿಗೆ ಇವರು ಮೂರನೆಯ ಮಗ. ಮೊದಲನೆಯವರಿಬ್ಬರ ಹೆಸರುಗಳು ಕ್ರಮವಾಗಿ ಸಂಗನಬಸಪ್ಪ ಮತ್ತು

ನೂರಂಡಪ್ಪ. ಶಾಲಿವಾಹನಶಕ ೧೭೫೮ನೇ ದುರ್ಮುಖಿ ನಾಮಸಂವತ್ಸರದ ಚೈತ್ರಶುದ್ಧ ನವಮೀ ಶನಿವಾರ ಪುನರ್ವಸು ನಕ್ಷತ್ರದಲ್ಲಿ ಗೋಧೂಳಿ ಲಗ್ನದ ಸಮಯದಲ್ಲಿ ಶ್ರೀ ಸಿದ್ಧಾರೂಢರ ಜನನವಾಯಿತು. (ತಾ. ೨೬-೦೩-೧೮೩೬ರ ಸಂಜೆ ಸುಮಾರು ೬-೧೫ಕ್ಕೆ) ಅಂದು ಶ್ರೀರಾಮನವಮೀ ಪುಣ್ಯದಿನ. ಹುಟ್ಟಿದ ಶಿಶುವಿನ ಮಾಹಾತ್ಮ್ಯವನ್ನು ಈ ಶುಭ ಮುಹೂರ್ತವೇ ಸೂಚಿಸುತ್ತದೆ. ತಂದೆತಾಯಿಗಳು ಶಿಶುವಿಗೆ 'ಸಿದ್ಧಪ್ಪ' ಎಂದೇ ನಾಮಕರಣ ಮಾಡಿದರು. ಇದೂ ಒಂದು ದೈವಯೋಗವೆನ್ನಬೇಕು. 'ಅನೇಕ ಜನ್ಮಸಂಸಿದ್ಧಸ್ತತೋ ಯಾತಿ ಪರಾಂ ಗತಿಂ' ಎಂಬ ಗೀತಾವಚನದಂತೆ ಈ ಬಾಲಕನು ಜ್ಞಾನಸಿದ್ಧನಾಗಿಯೇ ಅವತರಿಸಿದನು. ತಂದೆ ತಾಯಿಗಳು ಬಾಲಕನನ್ನು 'ಸಿದ್ಧ' ಎಂಬ ಸಂಕ್ಷಿಪ್ತನಾಮದಿಂದ ಕರೆಯುತ್ತಿದ್ದರು. ಆದ್ದರಿಂದ ಎಲ್ಲರ ಬಾಯಲ್ಲಿಯೂ ಸಿದ್ಧ ಎಂಬ ಹೆಸರೇ ಉಳಿದುಕೊಂಡಿತು.

ನಾಮಕರಣಸಮಯದಲ್ಲಿ ವೀರಭದ್ರಸ್ವಾಮಿಗಳೆಂಬ ಒಬ್ಬ ಮಹಾತ್ಮರು ಆಗಮಿಸಿ 'ಸಿದ್ಧಪ್ಪ' ಎಂದು ಹೆಸರಿಡುವಂತೆ ಸೂಚಿಸಿದರಂತೆ. ಶಿಶುವಿನ ಸಾಮುದ್ರಿಕಲಕ್ಷಣಗಳನ್ನು ಕಂಡು ಬೆರಗಾಗಿ ದೇವಮಲ್ಲಮ್ಮನಿಗೆ "ತಾಯಿ, ಈ ಗಂಡುಮಗು ಸಾಮಾನ್ಯಶಿಶುವೆಂದು ಭ್ರಮಿಸಬೇಡ. ಇದು ಎಲ್ಲ ಸಿದ್ಧಿಗಳನ್ನು ಪಡೆದುಕೊಂಡೇ ಹುಟ್ಟಿದೆ. ಎದೆಹಾಲುಕೊಡುವಾಗ ಪಂಚಾಕ್ಷರೀ ಜಪವನ್ನು ಮಾಡುತ್ತಿರು. ಯಾವಾಗಲೂ ಒಳ್ಳೆಯ ವಿಚಾರಗಳನ್ನೇ ಚಿಂತಿಸುತ್ತಿರು" ಎಂದು ಹೇಳಿದರು.

ಸಿದ್ಧನ ತಂದೆ ಗುರುಶಾಂತಪ್ಪನವರು ಲಿಂಗಾಯಿತಬಣಜಿಗರು. ವ್ಯಾಪಾರ ಮತ್ತು ವ್ಯವಸಾಯ ಅವರ ವೃತ್ತಿ. ಹೆಚ್ಚಾಗಿ ಕಲಿತ ವಿದ್ಯಾವಂತರಲ್ಲದಿದ್ದರೂ ಸಜ್ಜನರೂ ಆಸ್ತಿಕರೂ ಆಗಿ ತಮ್ಮ ಸದ್ಗುಣಗಳಿಂದ ಊರಿನವರೆಲ್ಲರಿಗೂ ಪ್ರೀತಿ ಪಾತ್ರರಾಗಿದ್ದರು. ಮನೆಯಲ್ಲಿ ಅನ್ನ ವಸ್ತ್ರಗಳಿಗೆ ಯಾವ ಕೊರತೆಯೂ ಇರಲಿಲ್ಲ. ಸಿದ್ಧನನ್ನು ಪ್ರೀತಿಯಿಂದಲೇ ಸಾಕಿದರು.

ಸಿದ್ಧನು ತುಂಬ ಚಿಕ್ಕವನಾಗಿದ್ದಾಗಲೇ ಕೆಲವು ಪವಾಡಗಳು ನಡೆದವೆಂದು ಹೇಳುತ್ತಾರೆ. ಯಾವುದೋ ಕಾರಣದಿಂದ ಒಂದು ಎಮ್ಮೆಗೆ 'ನೀನು ಸಾಯಿ' ಎಂದೊಡನೆ ಅದು ಸತ್ತು ಬಿದ್ದಿತಂತೆ. ಅನಂತರ ಎಮ್ಮೆಯ ಮಾಲಿಕರ ಗೋಳನ್ನು ನೋಡಲಾರದೆ 'ಬದುಕು' ಎಂದು ಹೇಳಿದ ಕೂಡಲೇ ಅದು ಬದುಕಿ ಎಂದಿನಂತೆ ಎದ್ದು ನಿಂತಿತಂತೆ. ಸಂಕ್ರಾಂತಿ ಹಬ್ಬದ ದಿನ ತನ್ನ ಗೆಳೆಯರನ್ನೆಲ್ಲ ಮನೆಗೆ ಕರೆದು ಒಂದು ಚಿಕ್ಕ ಮಡಕೆಯಲ್ಲಿದ್ದ ಎಳ್ಳುಬೆಲ್ಲಗಳನ್ನು ಎಲ್ಲರಿಗೂ ಹಂಚಿದನು. ಎಷ್ಟು ಜನರಿಗೆ ಕೊಟ್ಟರೂ ಎಳ್ಳು ಬೆಲ್ಲಗಳು ಮುಗಿಯಲೇ ಇಲ್ಲ. ಒಬ್ಬ ಹುಡುಗನಿಗೆ ಜಲಸ್ತಂಭನವಿದ್ಯೆಯನ್ನು ಕಲಿಸಿ ಕೆರೆಯಲ್ಲಿ ಮುಳುಗಿಸಿಬಿಟ್ಟನು. ಹುಡುಗನ ತಾಯಿ ತನ್ನ ಮಗನು ಸತ್ತು ಹೋದನೆಂದು ಅಳುತ್ತಿದ್ದಾಗ ಮರುಕಗೊಂಡು ಆ ಹುಡುಗನ ಹೆಸರನ್ನು ಸಿದ್ಧನು ಗಟ್ಟಿಯಾಗಿ ಹೇಳಿ ಕರೆದನು. ಒಡನೆಯೇ ಆ ಹುಡುಗನು ನೀರಿನಿಂದ ಮೇಲೆದ್ದು ತಾಯಿಯ ಬಳಿಗೆ ಬಂದು ಸೇರಿದನು–ಇತ್ಯಾದಿ.

ಈ ಪವಾಡಗಳು ಭಕ್ತರ ಕಲ್ಪನೆಗಳಾಗಿರಬಹುದು ಅಥವಾ ಸತ್ಯವಾಗಿ ನಡೆದ ಘಟನೆಗಳೇ ಆಗಿರಬಹುದು. ಏಕೆಂದರೆ, ಯೋಗಿಗಳಿಗೆ ನಾನಾಸಿದ್ಧಿಗಳು ಪ್ರಾಪ್ತವಾಗುತ್ತವೆಂದು ಪತಂಜಲಿಮುನಿಗಳು ಯೋಗಶಾಸ್ತ್ರದಲ್ಲಿ ಹೇಳಿದ್ದಾರೆ. ಪುರಾಣಗಳಲ್ಲಿ ಮುನಿಗಳಿಂದಾದ ಎಷ್ಟೋ ಪವಾಡಗಳ ವರ್ಣನೆ ಇದೆ. ಇವೇನೂಸುಳ್ಳು ಸಂಗತಿಗಳಲ್ಲ. ಆದರೆ ಈ ಪವಾಡಗಳಿಂದ ಸಿದ್ಧಾರೂಢಸ್ವಾಮಿಗಳನ್ನು ನಾವು ದೊಡ್ಡಮಹಾತ್ಮರನ್ನಾಗಿ ಮಾಡಬೇಕಾಗಿಲ್ಲ. ಪವಾಡಗಳನ್ನು ಒಬ್ಬ ಐಂದ್ರಜಾಲಿಕನೂ ನಡೆಸಬಲ್ಲನು. ಹಿಂದೆ ರಾಕ್ಷಸರಿಗೂ ನಾನಾ ಮಾಯಾಶಕ್ತಿಗಳು ವಶವಾಗಿದ್ದವು. ಪ್ರಾಯೇಣ ಎಲ್ಲ ಮತದವರೂ ತಮಗೆ ಪೂಜ್ಯನಾದ ಮಹಾತ್ಮನಿಗೆ ಪವಾಡಕಲ್ಪನೆಗಳನ್ನು ಅಂಟಿಸಿಬಿಡುತ್ತಾರೆ. ಯೇಸುಕ್ರಿಸ್ತ, ಮಹಮ್ಮದ್ ಪೈಗಂಬರ್ ಮೊದಲಾದವರೂ ಇಂತಹ ಪವಾಡಗಳನ್ನು ನಡೆಸಿದ್ದಾರೆಂದು ಆಯಾ ಮತೀಯರು ಹೇಳುತ್ತಲೇ

ಬಂದಿದ್ದಾರೆ. ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು, ಬಸವಣ್ಣನವರು, ಜ್ಞಾನದೇವಾದಿ ಭಕ್ತರು-ಮುಂತಾದವರೆಲ್ಲರ ಚರಿತ್ರೆಗಳೂ ಪವಾಡ ಕಥೆಗಳನ್ನು ಅಂಟಿಸಿಕೊಂಡೇ ಇವೆ. ಶ್ರೀರಾಮಕೃಷ್ಣ ಪರಮಹಂಸರಂತಹ ಆಧುನಿಕ ಸಂತರಿಗೂ ಪವಾಡಶಕ್ತಿಯು ಗಂಟುಬಿದ್ದಿದೆ.

ಒಬ್ಬ ವ್ಯಕ್ತಿಯ ಮಹಿಮೆ ಆತನ ಜ್ಞಾನ, ವೈರಾಗ್ಯ, ಇಂದ್ರಿಯ ನಿಗ್ರಹ, ಭೂತಾನುಕಂಪೆ, ದಕ್ಷತೆ, ಶಿಷ್ಯವಾತ್ಸಲ್ಯ, ಲೋಕಾನುಗ್ರಹೇಚ್ಛೆ, ಅಹಿಂಸೆ, ಸತ್ಯನಿಷ್ಠೆ, ಸರ್ವಸಮತಾದೃಷ್ಟಿ-ಮುಂತಾದ ಮಹಾಗುಣಗಳನ್ನು ಅವಲಂಬಿಸಿದೆ. ಬರಿಯ ಪಾಂಡಿತ್ಯಕ್ಕಿಂತ ಆತ್ಮಜ್ಞಾನವು ಸರ್ವೋತ್ಕೃಷ್ಟವಾದದ್ದು. ಆತ್ಮಜ್ಞಾನವು ಬರಿಯ ಉಪದೇಶದ ವಸ್ತುವಲ್ಲ. ಅದು ಅವನ ನಡೆ, ನುಡಿ, ಆಚಾರಗಳಲ್ಲಿ ಇಳಿದು ಪ್ರತಿಬಿಂಬಿಸುವ ವಸ್ತು. ಆ ವ್ಯಕ್ತಿಯ ಉಪದೇಶವೆಲ್ಲವೂ ರಕ್ತದಂತೆ ಸರ್ವಾಂಗಗಳಲ್ಲಿಯೂ ಸರ್ವನಾಡಿಗಳಲ್ಲಿಯೂ ಹರಿದಾಡುತ್ತ ಇದ್ದರೆ ಅವನು ಮಹಾತ್ಮನೆನಿಸುತ್ತಾನೆ. ಉಳಿದ ಜನರಿಗೆ ಅನುಕರಣೀಯ ಪುರುಷನಾಗುತ್ತಾನೆ. ಆಧುನಿಕಜನರು ವೈಜ್ಞಾನಿಕಮನೋಭಾವದವರು. ಅವರಿಗೆ ಈ ಪವಾಡಗಳು ಹಿಡಿಸುವುದಿಲ್ಲವಾದ್ದರಿಂದ ಆದಷ್ಟು ಅವನ್ನು ಈ ಪುಸ್ತಕದಲ್ಲಿ ದೂರವಿಡಲಾಗಿದೆ.

ಸಿದ್ಧನಿಗೆ ನಾಲ್ಕೈದು ವರ್ಷಗಳಾದಾಗ ತಂದೆತಾಯಿಗಳು ಅವನನ್ನು ಶಾಲೆಗೆ ಸೇರಿಸಲು ಬಯಸಿದರು. ಸಿದ್ಧನು ತನಗೆ ಅಕ್ಷರವಿದ್ಯೆ ಬೇಡವೆಂದನು. ಅವರ ಒತ್ತಾಯಕ್ಕೆ ಕಟ್ಟುಬಿದ್ದು ಕಡೆಗೆ ಒಪ್ಪಿಕೊಂಡು ಒಂದು ದಿನ ಶಾಲೆಗೆ ಸೇರಲುಹೋದನು. ಶಾಲೆಯ ಉಪಾಧ್ಯಾಯರು ಪಾಟಿಯ ಮೇಲೆ ಓಂಕಾರವನ್ನು ಬರೆದುಕೊಟ್ಟು "ಸಿದ್ಧ, ಓಂ ಎಂದು ಹೇಳುತ್ತ ಇದನ್ನು ಮತ್ತೆ ಮತ್ತೆ ತಿದ್ದಬೇಕು" ಎಂದು ಅಪ್ಪಣೆ ಮಾಡಿದರು. ಸಿದ್ಧನು ತಿದ್ದುವುದಕ್ಕಾಗಿ ಕುಳಿತನು. ಓಂಕಾರದ ಅರ್ಥವೇನು? – ಎಂಬ

ಆಲೋಚನೆ ಮೂಡಿತು. ಅವನು ಉಪಾಧ್ಯಾಯರನ್ನು ಕುರಿತು "ಗುರುಗಳೆ, ಓಂ ಎಂದರೇನು? ಇದರ ಅರ್ಥವನ್ನು ಹೇಳಬೇಕು" ಎಂದು ಕೇಳಿದನು. ಗುರುಗಳು " ನಿನಗೆ ಇದರ ಅರ್ಥ ತಿಳಿಯುವುದಿಲ್ಲ. ದೊಡ್ಡವನಾದ ಮೇಲೆ ತಿಳಿದುಕೊಳ್ಳಬಹುದು. ಈಗ ಅಕ್ಷರ ಬರೆಯುವುದನ್ನು ಮೊದಲು ಕಲಿತುಕೊ" ಎಂದರು. ಸಿದ್ಧನು "ಗುರುಗಳೆ, ಓಂಕಾರದ ಅರ್ಥವನ್ನು ಮೊದಲು ನಾನು ತಿಳಿದುಕೊಳ್ಳಬೇಕು" ಎಂದನು. ಅದಕ್ಕೆ ಗುರುಗಳು "ಜ್ಞಾನಿಗಳು ಅರ್ಥವನ್ನು ಹೇಳಬಲ್ಲರು. ನನಗೇನು ಗೊತ್ತು?" ಎಂದರು. ಸಿದ್ಧನು ಮನೆಗೆ ಬಂದನು. ಅನಂತರ ಶಾಲೆಗೆ ಹೋಗಲೇ ಇಲ್ಲ.

ಗುರುಶಾಂತಪ್ಪನವರ ಮನೆಯಲ್ಲಿ ವೀರಭದ್ರಸ್ವಾಮಿಗಳು ಪ್ರತಿದಿನ ಪುರಾಣ ಪ್ರವಚನವನ್ನು ನಡೆಸುತ್ತಿದ್ದರು. ಸಿದ್ಧನಿಗೆ ಅದನ್ನು ಕೇಳಲು ಬಹಳ ಆಸಕ್ತಿ. ತಾಯಿಯೊಡನೆ ಕುಳಿತು ಪ್ರವಚನವನ್ನು ತುಂಬ ಆದರದಿಂದ ಆಲಿಸುತ್ತಿದ್ದನು. ಒಂದು ದಿನ ಪುರಾಣವನ್ನು ಹೇಳುವಾಗ ವೀರಭದ್ರಸ್ವಾಮಿಗಳು "ಪರಮೇಶ್ವರನು ತನ್ನ ಇಚ್ಛೆಯಿಂದ ಭೂಮಿ, ಜಲ, ಅಗ್ನಿ, ವಾಯು, ಆಕಾಶಗಳೆಂಬ ಪಂಚಭೂತಗಳನ್ನು ಸೃಷ್ಟಿಸಿದ್ದಾನೆ. ಈಶ್ವರನೇ ಸೃಷ್ಟಿ ಸ್ಥಿತಿಲಯಗಳಿಗೆ ಕರ್ತನು. ಈ ಸೃಷ್ಟಿಯೆಲ್ಲವೂ ನಶ್ವರವಾದದ್ದು. ಒಂದು ದಿನ ಆಕಾಶಾದಿ ಪಂಚಭೂತಗಳೂ ನಾಶವಾಗಿ ಬಿಡುತ್ತವೆ" ಎಂದರು. ಅದನ್ನು ಕೇಳುತ್ತಿದ್ದ ಸಿದ್ಧನು " ಸ್ವಾಮಿಗಳೆ, ಭೂಮಿ ಜಲ ಅಗ್ನಿ ವಾಯು–ಇವಿಷ್ಟು ನಾಶವಾಗುತ್ತವೆ ಎಂದರೆ ಒಪ್ಪಬಹುದು. ಆಕಾಶವು ಹೇಗೆ ನಾಶವಾಗುತ್ತದೆ? ಅದಕ್ಕೆ ಯಾವ ರೂಪವೂ ಇಲ್ಲ. ಅದನ್ನು ಮುಟ್ಟಲು ಸಾಧ್ಯವಿಲ್ಲ. ರಸ, ಗಂಧಗಳೂ ಅದರಲ್ಲಿಲ್ಲ. ಆಕಾಶವೆಂದರೆ ಬರಿಯ ಬಯಲು ಅದನ್ನು ನಾಶಪಡಿಸುವುದೆಂದರೇನು?" ಎಂದು ಕೇಳಿದನು. ವೀರಭದ್ರಸ್ವಾಮಿಗಳಿಗೆ ಆ ಹುಡುಗನ ಪ್ರಶ್ನೆ ಅಚ್ಚರಿಯನ್ನುಂಟುಮಾಡಿತು. ಉತ್ತರವೇನೂ ಅವರಿಗೆ ಹೊಳೆಯಲಿಲ್ಲ. ಅವರು ಮನಃಪೂರ್ವಕವಾಗಿಯೇ "ಸಿದ್ಧ, ನಿನ್ನ ಪ್ರಶ್ನೆ ಬಹಳ ಸರಿಯಾಗಿದೆ, ನನಗೇನೂ ಉತ್ತರ ತೋರುವುದಿಲ್ಲ. ಸರಿಯಾದ

ಗುರುವನ್ನು ಕಂಡು ಉತ್ತರವನ್ನು ತಿಳಿಯಬೇಕು" ಎಂದು ನುಡಿದರು. ಆಗಿನಿಂದಲೇ ಸಿದ್ಧನಿಗೆ ಗುರುವನ್ನರಸಿ ಹೊರಡಬೇಕೆಂಬ ಸಂಕಲ್ಪವು ಮನಸ್ಸಿನಲ್ಲಿ ಮೂಡಿತು. ಮೂಡಿದ ಸಂಕಲ್ಪವು ದೃಢವಾಗಿ ನಿಂತಿತು. ಅದು ಕಾರ್ಯೋನ್ಮುಖವಾಗಲು ಒಂದು ನೆವ ಬೇಕಾಗಿತ್ತು.

ಒಂದು ದಿನ ಸಿದ್ಧನು ಜೊತೆಯ ಗೆಳೆಯರೊಂದಿಗೆ ಚಳಕಾಪುರದ ಬಯಲಲ್ಲಿ ಆಟವಾಡುತ್ತಿದ್ದನು. ಒಂದು ಸರ್ಪವು ಎಲ್ಲಿಂದಲೋ ಹರಿಯುತ್ತ ಬಂದಿತು. ಸಿದ್ಧನು ಬಯಲಲ್ಲಿದ್ದ ಒಂದು ಪೊದೆಯ ಬಳಿಗೆ ಆಡುತ್ತ ಹೋದಾಗ ಸರ್ಪವು ಅವನನ್ನು ಕಚ್ಚಿತು. ಹುಡುಗರೆಲ್ಲರೂ ನೋಡಿದರು. ಸಿದ್ಧನು ಮೂರ್ಛಿತನಾಗಿ ಅಲ್ಲಿಯೇ ಮಲಗಿದರು. ಜೊತೆಯ ಬಾಲಕರು ಓಡುತ್ತ ಅವನ ಮನೆಗೆ ಹೋಗಿ ಸಿದ್ಧನ ತಂದೆತಾಯಿಗಳಿಗೆ ಈ ವಿಷಯವನ್ನು ತಿಳಿಸಿದರು. ಅವರು ಕಂಗೆಟ್ಟು ಶೋಕಿಸುತ್ತಾ ಓಡಿಬಂದರು. ಸಿದ್ಧನ ಮೈವಿಷದಿಂದ ಹಸಿರುಗಟ್ಟಿತ್ತು. ಎಚ್ಚರವಿರಲಿಲ್ಲ. ಅವನು ಸತ್ತುಹೋದನೆಂದೇ ಎಲ್ಲರೂ ತಿಳಿದರು. ತಂದೆತಾಯಿಗಳ ಅಳುವಿಗೆ ನೆಲೆಯೇ ಇಲ್ಲದಾಯಿತು. ಎಲ್ಲರೂ ಶೋಕದಲ್ಲಿ ಮುಳುಗಿದರು.

ಆ ಸಮಯದಲ್ಲಿ ಒಂದು ಜಂಗಮರ ತಂಡ ಬಳಿಯ ಹಾದಿಯಲ್ಲಿ ಹಾದುಹೋಗುತ್ತಿತ್ತು. ಜನಸಂದಣಿಯನ್ನು ನೋಡಿ ಆ ಜಂಗಮರು ಅಲ್ಲಿಗೆ ಬಂದರು. ಅವರಲ್ಲಿ ಮುಖ್ಯನಾದ ಒಬ್ಬ ಸಂನ್ಯಾಸಿಯು ಸಿದ್ಧನ ಬಳಿಗೆ ಬಂದು ಅವನನ್ನು ಪರೀಕ್ಷಿಸಿದನು. ಅನಂತರ ಸಿದ್ಧನ ತಾಯಿತಂದೆಯರ ಕಡೆಗೆ ತಿರುಗಿ "ನೀವು ಈ ಹುಡುಗನ ತಂದೆತಾಯಿಗಳೆ?" ಎಂದು ವಿಚಾರಿಸಿದನು. ಹೌದೆಂದು ಅವರು ನುಡಿದಾಗ ಸಂನ್ಯಾಸಿ ಹೇಳಿದನು–"ನೋಡಿರಿ. ಈ ಬಾಲಕನನ್ನು ನಾನು ಬದುಕಿಸಿಕೊಡುತ್ತೇನೆ. ಆದರೆ ಒಂದು ನಿಯಮ ಉಂಟು. ಆ ನಿಯಮಕ್ಕೆ ನೀವು ಒಪ್ಪುವುದಾದರೆ ಮಾತ್ರ ಇದನ್ನು ಸಾಧಿಸಿಕೊಡುತ್ತೇನೆ" ಎಂದು, ಆ ಸಮಯದಲ್ಲಿ ಒಪ್ಪದ

ತಂದೆತಾಯಿಗಳಾದರೂ ಯಾರಿದ್ದಾರು? " ಯಾವ ನಿಯಮ?" ಎಂದು ಸಹಜವಾಗಿ ಕೇಳಿದರು. ಅದಕ್ಕೆ ಆ ಸಂನ್ಯಾಸಿಯು "ಈ ಹುಡುಗನು ಬದುಕಿದಮೇಲೆ ಅವನ ಇಚ್ಛೆಗೆ ಬಂದಂತೆ ನಡೆಯಲು ಬಿಟ್ಟುಬಿಡಬೇಕು. ಯಾವುದೇ ಅಡ್ಡಿಯನ್ನೂ ಒಡ್ಡಬಾರದು. ಈತನು ಮಹಾಪುರುಷನಾಗಲಿದ್ದಾನೆ. ವಿರಕ್ತ ಸಂನ್ಯಾಸಿಯಾಗುವ ಯೋಗ ಇವನಿಗಿದೆ" ಎಂದನು. "ಮಗನು ಬದುಕಿದರೆ ಸಾಕು, ಸಂನ್ಯಾಸಿಯಾದರೂ ಚಿಂತೆಯಿಲ್ಲ" ಎಂದು ತಂದೆತಾಯಿಗಳು ನುಡಿದರು. ಸಂನ್ಯಾಸಿಯು ಸಿದ್ಧನ ತಲೆಯಮೇಲೆ ಕೈಯಿಟ್ಟು ಏನನ್ನೋ ಜಪಿಸಿದ. ಸ್ವಲ್ಪ ಹೊತ್ತಿನಲ್ಲಿ ಅದೇ ಸರ್ಪವು ಬಂದು ಎಲ್ಲರೆದುರಿಗೆ ತನ್ನ ವಿಷವನ್ನು ಹೀರಿ ಹೊರಟುಹೋಯಿತಂತೆ. ಸಿದ್ಧನು ಕಣ್ಣು ಬಿಟ್ಟು ಎದ್ದು ಕುಳಿತ. ಸಂನ್ಯಾಸಿಗೆ ನಮಸ್ಕರಿಸಿದ. ತಂದೆತಾಯಿಗಳ ಸಂತೋಷಕ್ಕೆ ಪಾರವೇ ಉಳಿಯಲಿಲ್ಲ. ನೆರೆದವರೆಲ್ಲರೂ ಮೂಕವಿಸ್ಮಿತರಾದರು. ಜಂಗಮಸಂನ್ಯಾಸಿಯು ಸಿದ್ಧನಿಗೆ ವಿಧಿ ಪೂರ್ವಕವಾಗಿ ಸ್ನಾನಮಾಡಿಸಿ ತ್ರಿಪುಂಡ್ರವನ್ನು ಹಚ್ಚಿ, ಲಿಂಗಧಾರಣೆ ಮಾಡಿಸಿ, 'ನೀನುಮಹಾಪುರುಷನಾಗುವೆ' ಎಂದು ಭವಿಷ್ಯವನ್ನು ನುಡಿದು ತೆರಳಿದನು. ಗುರುಶಾಂತಪ್ಪ, ದೇವಮಲ್ಲಮ್ಮನವರು ಮಗನೊಡನೆ ನಲಿಯುತ್ತ ಮನೆಗೆ ಹಿಂದಿರುಗಿದರು. ಸಿದ್ಧನ ಸತ್ಯಾನ್ವೇಷಣೆಯ ದಾರಿ ಸುಗಮವಾಯಿತು. ದಿವ್ಯ ಜ್ಯೋತಿಯು ಆಕಾಶದಲ್ಲಿ ಹುಟ್ಟಿ ಮಿನುಗುತ್ತದೆ. ಅದು ನೆಲದಲ್ಲಿ ಹುಟ್ಟುವುದಿಲ್ಲ.

೨

## ಯದಹರೇವ ವಿರಜೇತ್ ತದಹರೇವ ಪ್ರವ್ರಜೇತ್
## (ಯಾವ ದಿನ ವೈರಾಗ್ಯ ಹುಟ್ಟುವುದೋ ಆ ದಿನವೇ ಸಂನ್ಯಾಸಿಯಾಗಿ ಹೊರಡಬೇಕು.)

ಸರ್ಪವು ಕಚ್ಚಿದ ಮೇಲೆ ನಡೆದ ಸಂಗತಿ ಸಿದ್ಧನಿಗೆ ತಿಳಿಯಿತು. ತಾನು ಸಂನ್ಯಾಸಿಯಾಗಲು ಅಡ್ಡಿಯನ್ನೊಡ್ಡಬಾರದೆಂದು ತಂದೆತಾಯಿಗಳಿಗೆ ನಿಯಮವನ್ನು ಹಾಕಿ ಒಬ್ಬ ಸಂನ್ಯಾಸಿಯು ತನ್ನನ್ನು ಬದುಕಿಸಿದನು ಎಂಬುದೇ ಮುಖ್ಯವಾಯಿತು. ತಾನು ಮನೆಯಲ್ಲಿರುವುದಿಲ್ಲವೆಂದೂ ಆತ್ಮಜ್ಞಾನವನ್ನು ಸಂಪಾದಿಸುವುದಕ್ಕಾಗಿ ಮನೆಯಿಂದ ಹೊರಟು ಹೋಗುವೆನೆಂದೂ ಆತನು ತಂದೆತಾಯಿಗಳಿಗೆ ಸ್ಪಷ್ಟವಾಗಿ ತಿಳಿಸಿಬಿಟ್ಟನು. ಆಗ ಸಿದ್ಧನಿಗೆ ಹತ್ತು ವರ್ಷ ವಯಸ್ಸು. ಆ ವಯಸ್ಸಿಗೆ ಈ ನಿರ್ಧಾರ ವಿಸ್ಮಯಕಾರಿಯೇ ಸರಿ. ಮಕ್ಕಳೊಡನೆ ಗೋಲಿಯಾಡುವ ವಯಸ್ಸಿನಲ್ಲಿ ಆತ್ಮಜ್ಞಾನದ ಹಂಬಲ! ತಂದೆ ಗುರುಶಾಂತಪ್ಪನಿಗೂ ತಾಯಿ ದೇವಮಲ್ಲಮ್ಮನಿಗೂ ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಂತಾಯಿತು. ಅತ್ತ ಜಂಗಮಸಂನ್ಯಾಸಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕಾಗಿದೆ. ಅಂತೆಯೇ ಮಗನು ಮನೆ ಬಿಟ್ಟು ಪರಿವ್ರಾಜಕನಾಗಿ ಹೋಗಲು ತ್ವರೆಪಡಿಸುತ್ತಿದ್ದಾನೆ. 'ಬೇಡ' ಎನ್ನಲು ನಾಲಿಗೆ ಒಪ್ಪಲಿಲ್ಲ. 'ಆಗಲಿ' ಎಂದು ನಾಲಿಗೆ ನುಡಿಯಿತು. ಸಿದ್ಧನ ಅಸಾಧಾರಣವಾದ ಮೇಧಾಶಕ್ತಿ, ಪವಾಡದಂತೆ ನಡೆದು ಹೋದ ಘಟನೆಗಳು, ಬಾಲಕನ ವೈರಾಗ್ಯಪ್ರವೃತ್ತಿ, ಆ ವಯಸ್ಸಿಗೇ ಒಂಟಿಯಾಗಿ ಹೊರಟು ಜ್ಞಾನರ್ಜನೆ ಮಾಡಬೇಕೆಂಬ ಅವನ ಇಚ್ಛೆ-ಇವೆಲ್ಲವೂ ತಂದೆತಾಯಿಗಳ ಮನಸ್ಸಿನಲ್ಲಿ ಪ್ರತಿಬಿಂಬಿಸಿದ್ದವು. ಇದೆಲ್ಲವೂ ಭಗವಂತನ ಸಂಕಲ್ಪ. ಆತನ ಇಚ್ಛೆಗೆ ವಿರುದ್ಧವಾಗಿ ನಾವು ನಡೆಯಬಾರದು, ಈಶ್ವರನೇ ಈ ಬಾಲಕನ ಯೋಗಕ್ಷೇಮಗಳನ್ನು ನೋಡಿಕೊಳ್ಳುತ್ತಾನೆ ಎಂಬ ನಿಶ್ಚಯಕ್ಕೆ ಬಂದು ಆ ದಂಪತಿಗಳು ಮಗನನ್ನು ಹರಸಿ ಬೀಳ್ಕೊಟ್ಟರು. ಸಿದ್ಧನು ಅವರ ಆಶೀರ್ವಾದವನ್ನು ಪಡೆದು, ಅಣ್ಣಂದಿರಿಗೆ ಹೇಳಿ, ಬಂಧುಮಿತ್ರರಿಗೆ

ತಿಳಿಸಿ ಮನೆಯಿಂದ ನಿರ್ಗಮಿಸಿದನು. ತಂದೆತಾಯಿಗಳು ಮಗನನ್ನು ಸ್ವಲ್ಪ ದೂರದವರೆಗೆ ಕಳಿಸಿ ಕಣ್ಣೀರು ಮಿಡಿಯುತ್ತ, ಹಿಂದಿರುಗಿದರು.

ಹಿಂದೆ ದ್ವಾಪರಯುಗದಲ್ಲಿ ನಡೆದ ಒಂದು ಪ್ರಸಂಗವನ್ನಿಲ್ಲಿ ಸ್ಮರಿಸಿಕೊಳ್ಳಬಹುದು. ಶುಕಮಹರ್ಷಿಗಳು ತಮ್ಮ ಎಳೆ ವಯಸ್ಸಿನಲ್ಲಿಯೇ, ಇನ್ನೂ ಉಪನಯನವಾಗದಿದ್ದಾಗ, ಪರಮ ವೈರಾಗ್ಯದಿಂದ ಗೃಹವನ್ನು ತ್ಯಜಿಸಿ ನಿರ್ಗಮಿಸಿದರು. ತಂದೆಯಾದ ವ್ಯಾಸಮಹರ್ಷಿಗಳು ಮಗನನ್ನು ತೊರೆಯಲಾರದೆ ಶೋಕಿಸುತ್ತ 'ಮಗನೇ! ಮಗನೇ!' ಎಂದು ಕೂಗುತ್ತ ಅವನ ಹಿಂದೆ ಹೋಗುತ್ತಲೇ ಇದ್ದರು. ಬಾಲಕ ಶುಕನು ಹಿಂದಕ್ಕೂ ನೋಡದೆ ಹೋಗಿಯೇ ಬಿಟ್ಟನಂತೆ.

ಯಂ ಪ್ರವ್ರಜಂತಮನುಪೇತಮಪೇತಕೃತ್ಯಂ
ದ್ವೈಪಾಯನೋ ವಿರಹಕಾತರ ಆಜುಹಾವ ।
ಪುತ್ರೇತಿ ತನ್ಮಯತಯಾ ತರವೋಽಭಿನೇದುಃ
ತಂ ಸರ್ವಭೂತಹೃದಯಂ ಮುನಿಮಾನತೋಽಸ್ಮಿ ॥

ಎಂದು ಭಾಗವತ ಪುರಾಣ ಮಾಹಾತ್ಮ್ಯದ ಆದಿಯಲ್ಲಿದೆ. "ಇನ್ನೂ ಉಪನಯನವಾಗದಿರುವಾಗಲೇ ಎಲ್ಲ ಕೃತ್ಯಗಳನ್ನೂ ತೊರೆದು ಸಂನ್ಯಾಸಿಯಾಗಿ ಹೊರಟುಹೋಗುತ್ತಿದ್ದ ಪುತ್ರನಾದ ಶುಕನ ಹಿಂದೆ ವ್ಯಾಸಮಹರ್ಷಿಯು ಧಾವಿಸುತ್ತ 'ಮಗನೇ, ಮಗನೇ! ಎಂದು ಕೂಗುತ್ತಿದ್ದನು. ಸುತ್ತಲೂ ಇದ್ದ ಮರಗಳು ಮಾತ್ರ 'ಮಗನೇ ಮಗನೇ' ಎಂದು ಪ್ರತಿಧ್ವನಿಯನ್ನೀಯುತ್ತಿದ್ದವು! ಸರ್ವಭೂತ ಹೃದಯಸ್ಥನಾದ ಆ ಶುಕಮುನಿಗೆ ನಮಸ್ಕಾರ!"

ಅದ್ವೈತಸಿದ್ಧಾಂತದ ಪರಮಾಚಾರ್ಯರಾದ ಶ್ರೀಶಂಕರ ಭಗವತ್ಪಾದರು ತಮ್ಮ ಎಳನೆಯ ವಯಸ್ಸಿನಲ್ಲಿಯೇ ಆಪತ್ ಸಂನ್ಯಾಸವನ್ನು

ಸ್ವೀಕರಿಸಿ ಗೃಹತ್ಯಾಗ ಮಾಡಿ ಗುರುವಿನ ಅನ್ವೇಷಣೆಗಾಗಿ ಹೊರಟಿದ್ದರು. ಇದ್ದ ಒಬ್ಬಳೇ ತಾಯಿಯನ್ನು ಅಗಲಿ ಹೋದರು. ನದಿಗೆ ಸ್ನಾನಕ್ಕೆ ಹೋದಾಗ ಬಾಲಕ ಶಂಕರನನ್ನು ಒಂದು ಮೊಸಳೆ ಹಿಡಿದುಕೊಂಡಿತು. ನದೀ ತೀರದಲ್ಲಿ ನಿಂತು ಶೋಕದಿಂದ ಕೂಗಿಕೊಳ್ಳುತ್ತಿದ್ದ ತಾಯಿಯಿಂದ, ತಾನು ಸಂನ್ಯಾಸಿಯಾಗಲು ಬಾಲಕ ಶಂಕರನು ಒಪ್ಪಿಗೆಯನ್ನು ಪಡೆದ ಮೇಲೆ ಮೊಸಳೆಯು ಶ್ರೀ ಶಂಕರನನ್ನು ತ್ಯಜಿಸಿತು.

ಈ ಎರಡು ಕಥಾ ಪ್ರಸಂಗಗಳಿಗೂ ಶ್ರೀ ಸಿದ್ಧಾರೂಢರಿಗಾದ ಸರ್ಪದಂಶ, ವೈರಾಗ್ಯದಿಂದಾದ ಗೃಹತ್ಯಾಗಗಳಿಗೂ ಎಷ್ಟು ಸುಂದರವಾದ ಸಾದೃಶ್ಯವಿದೆ ಎಂಬುದನ್ನು ವಾಚಕರು ಗಮನಿಸಬೇಕು.

ಸಿದ್ಧನು ಮನೆಯಿಂದ ಹೊರಟಾಗ ಅವನ ಬಳಿ ಒಂದು ಕೌಪೀನ, ಹೊದೆಯುವ ಒಂದು ವಸ್ತ್ರದ ಹೊರತಾಗಿ ಇನ್ನೇನೂ ಇರಲಿಲ್ಲ. ಆತ್ಮಜ್ಞಾನಕ್ಕಾಗಿ ಹಂಬಲಿಸುತ್ತ ವೈರಾಗ್ಯದಿಂದ ಸಾಗಿದವರಿಗೆ ಜ್ಞಾನದ ಹೊರತಾಗಿ ಉಳಿದುದೆಲ್ಲ ತುಚ್ಛವೆನ್ನಿಸುತ್ತದೆ. ಮುಂದೆ ಒಂದು ಸಂದರ್ಭದಲ್ಲಿ ಸಿದ್ಧಾರೂಢರೇ ಹೇಳಿದ್ದಾರೆ; "ನಾನು ಮನೆ ಬಿಟ್ಟಾಗ ನನ್ನ ಹತ್ತಿರ ಒಂದು ಕೌಪೀನ, ಇನ್ನೊಂದು ವಸ್ತ್ರದ ಹೊರತಾಗಿ ಇನ್ನೇನೂ ಇದ್ದಿಲ್ಲ. ಆಸ್ತಿ ವಗೈರೆ ಮಾಡಬೇಕೆಂಬ ಇಚ್ಛೆ ನನಗಿರಲಿಲ್ಲ. ಹೆಚ್ಚಿನ ಜ್ಞಾನವನ್ನು ಪಡೆಯಬೇಕೆಂದು ಮನೆಬಿಟ್ಟೆ. ಜ್ಞಾನ ಎಂದರೆ ಆತ್ಮಜ್ಞಾನ. ಆತ್ಮ ಎಂದರೆ ಪ್ರತ್ಯಗಾತ್ಮ. ವ್ಯವಹಾರ ಸಂಬಂಧಿ ಜ್ಞಾನವು ನನಗೆ ಬೇಕಾಗಿರಲಿಲ್ಲ" ಎಂದು.

ಸಿದ್ಧನು ಊರಿಂದ ಹೊರಟಾಗ ಆತನ ಜೊತೆಯಲ್ಲಿ ಗೆಳೆಯರಾದ ಸೋಮ, ಭೀಮ-ಎಂಬಿಬ್ಬರು ಬಂದರಂತೆ. ಆ ಹುಡುಗರು ಯಾರು? ಅವರ ತಂದೆ ತಾಯಿಗಳು ಹೀಗೆ ಹೊರಟುಹೋಗಲು ಅನುಮತಿ ಕೊಟ್ಟರೆ? ಎಂಬ ವಿಷಯವೇನೂ ನಮಗೆ ತಿಳಿದಿಲ್ಲ. ೨-೩ ದಿನ ಸಿದ್ಧನೊಡನೆ

ನಡೆದು ನಡೆದು ಆಹಾರ ನಿದ್ರೆಗಳಿಲ್ಲದೆ ಬಳಲಿದರು. ಬಸಿರಲ್ಲಿ ಹಸಿವು ಭುಗಿಲೆದ್ದೊಡನೆ ನಕಲಿ ವೈರಾಗ್ಯ ಹಿಂದೆ ಸರಿಯಿತು. ಮುಂದೆ ಹೋಗಲಾರದೆ ಸಿದ್ಧನಿಗೆ ತಿಳಿಸಿ ಊರಿಗೆ ಪಾರಾಗಿ ಬಂದರು. ಆರೋಪಿತ ವೈರಾಗ್ಯವು ಎಷ್ಟು ದಿನ ಉಳಿದೀತು? ಕತ್ತರಿಸಿ ತಂದ ಹೂವಿನ ಗಿಡವು ಅಲಂಕಾರ ಪಾತ್ರೆಯಲ್ಲಿ ಎಷ್ಟು ಕಾಲ ಬಾಡದೇ ಇದ್ದೀತು? ಸಿದ್ಧನೊಬ್ಬನೇ ಮುಂದಕ್ಕೆ ಸಾಗಿದನು. ಹೊಳೆಯ ನೀರನ್ನು ಕುಡಿದು ತೃಷೆಯನ್ನಡಗಿಸಿಕೊಳ್ಳುತ್ತ, ತಿರುಪೆಯ ಅನ್ನದಿಂದ ಹಸಿವನ್ನು ನೀಗಿಸುತ್ತ, ಬೀದಿಯ ಕಟ್ಟೆ, ಹಾಳು ದೇಗುಲದಲ್ಲಿ ನಿದ್ರೆಯ ಜೋಂಪನ್ನು ಕಳೆಯುತ್ತ ಮುಂದಕ್ಕೆ ಸಾಗುತ್ತಿದ್ದನು. ಗುರುವನ್ನು ಹುಡುಕಿಕೊಂಡು ಹೊರಟಿದ್ದನು. ಗುರು ಯಾರು? ಎಲ್ಲಿದ್ದಾರೆ?– ಎಂಬ ಅರಿವೇನೂ ಅವನಿಗೆ ಇದ್ದಂತೆ ಕಾಣುವುದಿಲ್ಲ. ಆತ್ಮಜ್ಞಾನಿಯಾದವನು ಇಂತಹ ಸ್ಥಳದಲ್ಲಿ ಇದ್ದಾನೆಂದು ಯಾರೂ ಅವನಿಗೆ ಹೇಳಿರಲಿಲ್ಲ. ಹಾಗಾದರೆ ಯಾವ ಗೊತ್ತು ಗುರಿಯೂ ಇಲ್ಲದೆ ದಾರಿಹಿಡಿದು ಸಾಗುತ್ತಿದ್ದರೆ ಗುರುವಿನ ದರ್ಶನವಾಗುತ್ತದೆಯೇ? ಈ ಕುರಿತು ಸಿದ್ಧನ ನಿಶ್ಚಯ ಹೀಗಿತ್ತು "ಪರಮಾತ್ಮನ ಕೃಪೆ ಇಲ್ಲದೆ ಸದ್ಗುರುವಿನ ದರ್ಶನವಾಗುವುದಿಲ್ಲ. ಮಾನವರು ತಮಗೆ ಸಂಮತರಾದ ಒಬ್ಬರನ್ನು ಗುರುವೆಂದು ತೋರಿಸಬಹುದು. ಅವರು ಆತ್ಮಜ್ಞಾನಿಗಳೆಂಬುದಕ್ಕೆ ಆಧಾರವೇನು? ಆದ್ದರಿಂದ ಗುರುದರ್ಶನಕ್ಕಾಗಿ ಶಿವನಿಗೇ ಶರಣಾಗಬೇಕು. ಆತನ ಕರುಣೆಯೊದಗಿದಾಗ ತಾನಗಿಯೇ ಗುರುದರ್ಶನವಾಗುತ್ತದೆ" ಎಂದು. ಈ ಭಾವನೆಯಿಂದಲೇ ಸಿದ್ಧನು ಶಿವಧ್ಯಾನದಲ್ಲಿ ನಿರತನಾಗಿ, ಶಿವನನ್ನೇ ನಂಬಿ, ಗುರುದರ್ಶನವನ್ನು ಮಾಡಿಸು ಎಂದು ಬೇಡುತ್ತ, ಶಿವನು ಅಂತರಂಗವನ್ನು ಪ್ರೇರಿಸಿ ತೋರಿಸಿದ ದಿಕ್ಕನ್ನು ಹಿಡಿದು ಹೊರಟಿದ್ದನು. ಅವನು ಹಲವಾರು ಪುಣ್ಯಕ್ಷೇತ್ರಗಳನ್ನು ನೋಡುತ್ತ, ಗಿರಿಕಾನನಗಳ ನಡುವೆ ತಿರುಗುತ್ತ ಶ್ರೀಶೈಲಕ್ಕೆ ಬಂದು ಸೇರಿದನು.

ಒಂದು ದಿನ ಶ್ರೀಶೈಲದ ಜಗದ್ಗುರುಗಳು ಸಭೆಯಲ್ಲಿ ಕುಳಿತಿದ್ದಾಗ

ಸಿದ್ಧನು ಹೋಗಿ ಅವರ ಪಾದಗಳಿಗೆ ನಮಿಸಿದನು. ಅವರು ಈ ಬಾಲಕನನ್ನು ದೃಷ್ಟಿಸಿ ನೋಡಿದಾಗ ಜನಸಾಮಾನ್ಯರಲ್ಲಿಲ್ಲದ ಒಂದು ತೇಜೋ ವಿಶೇಷವು ಈ ಬಾಲಕನ ಮುಖದಲ್ಲಿ ಕಾಣಿಸಿತು. ಅವರು ಕುತೂಹಲದಿಂದ "ಮಗು, ನೀನು ಯಾರು? ಎಲ್ಲಿಂದ ಬಂದೆ? ಈ ಕಡೆ ಬರಲು ನಿಮಿತ್ತವೇನು?" ಎಂದು ಕೇಳಿದರು. ಸಿದ್ಧನು "ಗುರುಗಳೆ, ನಾನು ಬೀದರ ಜಿಲ್ಲೆಯವನು. ಸದ್ಗುರುವನ್ನು ಹುಡುಕಿಕೊಂಡು ಹೊರಟಿದ್ದೇನೆ. 'ನಾನು' ಎಂದರೆ ಯಾರೆಂಬುದನ್ನು ತಿಳಿಯುವುದು ನನ್ನ ಉದ್ದೇಶ. ಈ ದೇಹೇಂದ್ರಿಯಾದಿಗಳು ನಾನಲ್ಲವೆಂಬುದು ಸ್ಪಷ್ಟವಾಗಿ ತಿಳಿದಿದೆ. ನಾನೇ ಆತ್ಮನೆನ್ನುತ್ತಾರೆ. ಆತ್ಮನ ಸ್ವರೂಪವೇನು ? ಒಂದೊಂದು ಪ್ರಾಣಿಯಲ್ಲಿ ಒಬ್ಬೊಬ್ಬ ಆತ್ಮನಿದ್ದಾನೋ ಒಬ್ಬನೇ ಎಲ್ಲರಲ್ಲಿಯೂ ಇದ್ದಾನೋ- ಎಂಬುದನ್ನು ಕೂಲಂಕುಷವಾಗಿ ತಿಳಿಯಬೇಕಾಗಿದೆ" ಎಂದನು. ಜಗದ್ಗುರುಗಳಿಗೆ ಆಶ್ಚರ್ಯವಾಯಿತು. ಈ ಚಿಕ್ಕವಯಸ್ಸಿನಲ್ಲಿ ಇಂತಹ ಜಿಜ್ಞಾಸೆ ಹುಟ್ಟಿದ ಇನ್ನೊಬ್ಬರನ್ನು ಅವರು ಕಂಡಿರಲಿಲ್ಲ. ಸಂತುಷ್ಟಚಿತ್ತರಾಗಿ "ಮಗು, ನೀನು ಸಾಮಾನ್ಯ ಹುಡುಗನಲ್ಲ. ಈಶ್ವರನ ಕೃಪೆಗೆ ಪಾತ್ರನಾಗಿದ್ದೀಯೆ. ನಿನಗೆ ಸದ್ಗುರುವಿನ ದರ್ಶನವು ಬೇಗ ಲಭಿಸಲಿ" ಎಂದು ಹರಸಿದರು. ಸಿದ್ಧನು ಕೆಲವು ದಿನ ಶ್ರೀಶೈಲದಲ್ಲಿದ್ದು ಮತ್ತೊಂದು ದಿನ ಗುರುದರ್ಶನಕ್ಕಾಗಿ ಅಲ್ಲಿಂದ ನಿರ್ಗಮಿಸಿದನು.

### *ಸದ್ಗುರು ದರ್ಶನ*

ಸಿದ್ಧನು ಶ್ರೀಶೈಲದಿಂದ ಹೊರಟು ನವನಂದಿ, ಕಾಳಹಸ್ತಿ, ಮುಂತಾದ ಕ್ಷೇತ್ರಗಳಿಗೆ ಹೋಗಿ ದೇವದರ್ಶನವನ್ನು ಮಾಡುತ್ತ, ಸದಾ ಹೃದಯದಲ್ಲಿ ಭಗವಂತನನ್ನು ಧ್ಯಾನಿಸುತ್ತ ಪ್ರಯಾಣ ಮಾಡಿದನು. ಹಿಂದೆ ಹೇಳಿದಂತೆ ಭಿಕ್ಷಾನ್ನವೇ ಆತನಿಗೆ ಆಹಾರವಾಗಿತ್ತು. ಕಡೆಗೆ ಸುರಪುರಕ್ಕೆ ಬಂದು ಅಲ್ಲಿಯ ಶಿವದೇವಸ್ಥಾನದಲ್ಲಿ ಕೆಲವು ದಿನ ತಂಗಿದನು. ಅಲ್ಲಿಗೆ ಬಂದು ಹೋಗುತ್ತಿದ್ದ ಅನೇಕ ಸಾಧುಸಂತರ ಪರಿಚಯವಾಯಿತು.

ಅವರೊಡನೆ ಆತ್ಮವಿಚಾರವನ್ನು ಮಾಡುತ್ತ ತನ್ನ ಜ್ಞಾನಕ್ಕೆ ವಿಕಾಸವನ್ನೀಯುತ್ತ ಸಂತೋಷಿಸಿದನು. ಹೀಗಿರುವಾಗ ಅಮುರಗುಂಡವೆಂಬಲ್ಲಿ ಗಜದಂಡಸ್ವಾಮಿಗಳೆಂಬ ಒಬ್ಬ ಮಹಾತ್ಮರಿದ್ದಾರೆಂದೂ ಅವರು ಆತ್ಮಜ್ಞಾನಿಗಳೆಂದೂ ಅನೇಕ ಸಜ್ಜನರು ಹೇಳಿದರು. ಶ್ರೀ ಗಜದಂಡಸ್ವಾಮಿಗಳ ವಿಷಯದಲ್ಲಿ ಬಲ್ಲವ ರೆಲ್ಲರಿಗೂ ಏಕಾಭಿಪ್ರಾಯವಿತ್ತು. ಎಲ್ಲರೂ ಅವರನ್ನು ಕೊಂಡಾಡತಕ್ಕವರೇ ಆಗಿದ್ದರು. ಅದೆಲ್ಲವನ್ನು ಕೇಳಿ ಗಜದಂಡಸ್ವಾಮಿಗಳೇ ತನ್ನ ಗುರುವೆಂದು ಹೃದಯದಲ್ಲಿ ಸಿದ್ಧನು ನಿರ್ಣಯಿಸಿಕೊಂಡನು. ಅವರನ್ನು ಸಂದರ್ಶಿಸಬೇಕೆಂಬ ಇಚ್ಛೆಯು ತೀವ್ರವಾಗಲು, ಅಮರಗುಂಡದ ದಾರಿಯನ್ನು ತಿಳಿದುಕೊಂಡು ಸಿದ್ಧನು ಪ್ರಯಾಣ ಮಾಡಿದನು. ಮೂರು ದಿನ ಕಾಡಿನ ದಾರಿಯನ್ನು ಸವೆಸಿ ಗುರುಗುಂಟಾಕ್ಕೆ ಬಂದನು. ಅಲ್ಲಿಯು ಮಠದಲ್ಲಿ ಸ್ವಾಮಿಗಳು ನೆಲೆಸಿದ್ದಾರೆಂಬುದನ್ನು ಕೇಳಿ ಮಠಕ್ಕೆ ಹೋದನು. ಶ್ರೀ ಗಜದಂಡ ಸ್ವಾಮಿಗಳ ದರ್ಶನವಾಯಿತು. ಅವರಿಗೆ ಸಾಷ್ಟಾಂಗ ಪ್ರಣಾಮ ಮಾಡಿ 'ಶಿಷ್ಯಸ್ತೇಽಹಂ ಶಾಧಿ ಮಾಂ ತ್ವಾಂ ಪ್ರಪನ್ನಂ' (ನಾ ನಿನ್ನ ಶಿಷ್ಯ. ಶರಣಾಗತನಾದ ನನ್ನನ್ನು ಉಪದೇಶಿಸಿ ರಕ್ಷಿಸು) ಎಂದು ಬೇಡಿಕೊಂಡನು.

ಗಜದಂಡಸ್ವಾಮಿಗಳು ಇನ್ನೂ ಬಾಲಕನಾಗಿದ್ದ ಸಿದ್ಧನನ್ನು ಒಮ್ಮೆ ಸರಿಯಾಗಿ ನೋಡಿ 'ಅಯ್ಯಾ, ನೀನು ಯಾರು? ಏಕೆ ಬಂದಿದ್ದೀಯೆ ?' ಎಂದು ಕೇಳಿದರು. ಸಿದ್ಧನು "ಮಹಾಸ್ವಾಮಿ, ನಾನು ಬಿದಿರುಕೋಟೆಯ* ಗುರುಶಾಂತಪ್ಪನವರ ಮಗ. ಜ್ಞಾನವನ್ನು ಪಡೆಯಲೋಸ್ಕರ ಮನೆಬಿಟ್ಟು ಅಲೆಯುತ್ತಿದ್ದೇನೆ. ನನಗೆ ಆತ್ಮಜ್ಞಾನಬೇಕು. ನನ್ನನ್ನು ಶಿಷ್ಯನನ್ನಾಗಿ

---

*ಸಿದ್ಧಾರೂಢರ ಜನ್ಮಸ್ಥಳ ಚಳಕಾಪುರವೆಂದು ನಿಶ್ಚಿತವಾಗಿದೆ. ಅವರೀಗ ಬಿದಿರುಕೋಟೆ ಎಂದೇಕೆ ಹೇಳಿದರು? ಆ ಹೆಸರಿನ ಊರು ಯಾವುದೂ ತಿಳಿದು ಬಂದಿಲ್ಲ. ಆಧ್ಯಾತ್ಮಿಕವಾದ ಅರ್ಥವಿರಬಹುದು. ದೇಹವೆಂಬ ಈ ಮೂಳೆಗಳ ಗೂಡು ಬಿದಿರುಕೋಟೆಯೇ– ಎಂದು ಅಭಿಪ್ರಾಯ. ಇನ್ನೊಮ್ಮೆ 'ವಂಶದುರ್ಗ' ಎಂದು ಹೇಳಿದ್ದಾರೆ. ಆಗಲೂ ಇದೇ ಅರ್ಥ. ವಂಶ = ಬಿದಿರು, ದುರ್ಗ = ಕೋಟೆ.

ಸ್ವೀಕರಿಸಿ ಕಾಪಾಡಿರಿ" ಎಂದು ವಿನಯದಿಂದ ಬೇಡಿಕೊಂಡನು. ಹುಡುಗನ ಈ ಜ್ಞಾನತೃಷ್ಣೆ ಸ್ವಾಮಿಗಳಿಗೆ ಅಚ್ಚರಿಯನ್ನುಂಟು ಮಾಡಿರಬೇಕು. ಮಠಕ್ಕೆ ಬರುತ್ತಿದ್ದವರೆಲ್ಲ ಅನ್ನಬಟ್ಟೆಗಾಗಿ, ಸುಖ ಜೀವನಕ್ಕಾಗಿ–ಎಂಬುದು ಅವರಿಗೆ ಮನವರಿಕೆಯಾಗಿತ್ತು. ಅದುವರೆಗೆ ಜ್ಞಾನತೃಷ್ಣೆಯಿಂದ ಬಂದವರೇ ಇಲ್ಲದಿರಬಹುದು. ಅವರು ಹುಡುಗನನ್ನು ಇನ್ನೂ ಪರೀಕ್ಷಿಸಿ ನೋಡಬೇಕೆಂದು ನಿಶ್ಚಯಿಸಿ "ಒಳ್ಳೆಯದು. ಮಠದಲ್ಲಿ ಸೇವೆ ಮಾಡಿಕೊಂಡಿರು, ಮುಂದೆ ನೋಡೋಣ" ಎಂದರು. ಸಿದ್ಧನ ವೈರಾಗ್ಯವು ಫಲಿಸುವ ಕಾಲ ಸಂನಿಹಿತವಾಯಿತು.

## ಶ್ರೀ ಸಿದ್ಧಾರೂಢರ ಮಂಗಲ

ಗುರುರಾಜಸಿದ್ಧಾರೂಢಸಮರ್ಥ ಬೆಳಗುವೆನಾರತಿಯ ।
ಗುರುವರ ಬೆಳಗುವೆನಾರತಿಯ ॥ಪ॥

ಮೋಕ್ಷಾಪೇಕ್ಷೆಗೆ ತತ್ತ್ವಂಪದದ ಅರ್ಥವ ಬೋಧಿಸಿದಿ
ಗುರುವರ ಅರ್ಥವ ಬೋಧಿಸಿದಿ ।
ಉಕ್ಷವಾಹನಶಂಕರನಾಮೋಚ್ಚಾರವ ಮಾಡಿಸಿದಿ
ಗುರುವರೋಚ್ಚಾರವ ಮಾಡಿಸಿದಿ ॥೧॥

ಶ್ಯಾಮಧಾಮಶ್ರೀರಾಮಾಭಿನ್ನ ಶಂಕರ ನೀನಿರುವಿ
ಗುರುವರ ಶಂಕರ ನೀನಿರುವಿ ।
ಕಾಮಕ್ರೋಧವ ನಾಶಿಸಿ ಜಗದೊಳು ಶಾಂತಿಯ ಬೀರೀದಿ
ಗುರುವರ ಶಾಂತಿಯ ಬೀರೀದಿ ॥೨॥

ಚರಣಭಜಕರ ದುರಿತವೃಂದವ ತ್ವರಿತದಿ ನಾಶಿಸಿದಿ
ಗುರುವರ ತ್ವರಿತದಿ ನಾಶಿಸಿದಿ ।
ವರಭೂಲತಾಪುರದೈವದಿಂದಲಿ ನಿರುತದಿ ವಾಸಿಸಿದಿ
ಗುರುವರ ನಿರುತದಿ ವಾಸಿಸಿದಿ ॥೩॥

## ೩

## ಗುರುಶುಶ್ರೂಷಯಾ ವಿದ್ಯಾ

### *(ವಿದ್ಯೆಯು ಗುರುಸೇವೆಯಿಂದ ಲಭಿಸುತ್ತದೆ.)*

ಸಿದ್ಧನಿಗೆ ಮಠದಲ್ಲಿ ಪ್ರವೇಶ ದೊರಕಿತು. ಗುರಿಯಿಲ್ಲದ ಅಲೆದಾಟವು ಬಗೆಹರಿದು ಒಂದು ಕಡೆ ನಿಲ್ಲುವಂತಾಯಿತು. ಹೊಟ್ಟೆಪಾಡಿಗಾಗಿ ಪ್ರತಿದಿನ ಬೇಡುವ ಪರಿಸ್ಥಿತಿ ಇರಲಿಲ್ಲ. ಆತನ ಲಕ್ಷ್ಯವಿದ್ದದ್ದು ಗುರುಕೃಪೆಗೆ ಪಾತ್ರನಾಗಬೇಕೆಂಬುದೊಂದೇ ಆಗಿತ್ತು. ಆದ್ದರಿಂದ ಮಠದಲ್ಲಿ ಮೊದಲು ಪ್ರಾಪ್ತವಾದ ಕೀಳು ಕೆಲಸಗಳನ್ನೂ ಅವನು ಶ್ರದ್ಧೆಯಿಂದ ನಿರ್ವಹಿಸಿದನು. ಕಸ ಗುಡಿಸಿದನು. ಮುಸುರೆ ಪಾತ್ರೆ ತೊಳೆದನು. ಕುದುರೆ ಲದ್ದಿ ಬಳಿದನು. ಗುರುಗಳು ಶಿಷ್ಯರಿಗೆ ಪಾಠ ಹೇಳುವಾಗ ದೂರದಲ್ಲಿ ಕುಳಿತು ಏಕಚಿತ್ತನಾಗಿ ಅವರ ಬೋಧೆಯನ್ನು ಆಲಿಸುತ್ತಿದ್ದನು. ಕೆಲವು ಕಾಲ ಕಳೆಯಿತು. ಸಿದ್ಧನು ಮಾಡುತ್ತಿದ್ದ ಸೇವೆಯಿಂದ ಗಜದಂಡಸ್ವಾಮಿಗಳು ಸಂತುಷ್ಟರಾದರು. ತಾವು ಪಾಠ ಹೇಳುವಾಗ ದೂರದಲ್ಲಿ ಕುಳಿತು ಸಿದ್ಧನು ಏಕಾಗ್ರತೆಯಿಂದ ಕೇಳುತ್ತಿದ್ದುದನ್ನು ಅವರು ಗಮನಿಸುತ್ತಿದ್ದರು. "ಈ ಹುಡುಗನು ಮಠದ ಸೇವೆಯನ್ನು ಚೆನ್ನಾಗಿ ಮಾಡುತ್ತಿದ್ದಾನೆ. ನಿಜವಾದ ಶ್ರವಣೇಚ್ಛೆ ಇವನಿಗಿದೆ. ಇವನು ಜ್ಞಾನಕ್ಕೆ ಅರ್ಹನಾದ ಪಾತ್ರನೇ ಹೌದು" ಎಂದು ಸ್ವಾಮಿಗಳಿಗೆ ಮನವರಿಕೆಯಾಯಿತು. ಹತ್ತಿರ ಬಂದು ಶ್ರವಣ ಮಾಡಬೇಕೆಂದೂ ಸಂದೇಹ ಬಂದಲ್ಲಿ ಕೇಳಬೇಕೆಂದೂ ಗುರುಗಳ ಅಪ್ಪಣೆಯಾಯಿತು. 'ಇಂದು ನಾನು ಧನ್ಯನಾದೆ' ಎಂದು ಸಿದ್ಧನು ಆನಂದಿಸಿದನು. ಒಂದು ಸುಭಾಷಿತ ಹೀಗಿದೆ–

> ಗುರುಶುಶ್ರೂಷಯಾ ವಿದ್ಯಾ ಪುಷ್ಕಲೇನ ಧನೇನ ವಾ ।
> ಅಥವಾ ವಿದ್ಯಯಾ ವಿದ್ಯಾ ಚತರ್ಥೀ ನ ಕದಾಚನ ॥

"ವಿದ್ಯೆಯು ಗುರುಶುಶ್ರೂಷೆಯಿಂದ ಲಭಿಸುತ್ತದೆ. ಅಥವಾ ಹಣದ ರಾಶಿಯನ್ನು ಗುರುದಕ್ಷಿಣೆಯಾಗಿ ಇತ್ತು ವಿದ್ಯೆಯನ್ನು ಪಡೆಯಬೇಕು.

ಇಲ್ಲದಿದ್ದರೆ ಒಂದು ವಿದ್ಯೆಯನ್ನು ಗುರುವಿಗೆ ಕಲಿಸಿ ಇನ್ನೊಂದು ವಿದ್ಯೆಯನ್ನು ಗಳಿಸಬೇಕು. ಈ ಮೂರು ಮಾರ್ಗಗಳನ್ನು ಬಿಟ್ಟು ನಾಲ್ಕನೆಯ ಮಾರ್ಗವಿಲ್ಲ" ಎಂದು.

ಸಿದ್ಧನ ಬಳಿ ಹಣವೂ ಇರಲಿಲ್ಲ. ಗಜದಂಡಸ್ವಾಮಿಗಳಿಗೆ ಬೇಕಾದ ಇನ್ನೊಂದು ವಿದ್ಯೆಯೂ ಇರಲಿಲ್ಲ. ಆದ್ದರಿಂದ ಗುರುಸೇವೆಯೊಂದೇ ಆತನಿಗೆ ಪ್ರಾಪ್ತವಾಯಿತು. ಮತ್ತು ಈ ಸುಭಾಷಿತದಲ್ಲಿ ವಿದ್ಯೆಯೆಂದರೆ ತರ್ಕಶಾಸ್ತ್ರವೇ ಮೊದಲಾದ ಶಾಸ್ತ್ರವೇ ಹೊರತು ಅಧ್ಯಾತ್ಮವಿದ್ಯೆಯಲ್ಲ. ಜ್ಞಾನಿಯಾದ ಯಾವ ಗುರುವೂ ಹಣವನ್ನು ಬಯಸುವುದೇ ಇಲ್ಲ. ಅವನಿಗೆ ಇನ್ನೊಂದು ಶಾಸ್ತ್ರವಿದ್ಯೆ ಬೇಕಾಗಿಯೂ ಇಲ್ಲ. ಶಿಷ್ಯನ ನಯ, ವಿನಯ, ಶ್ರದ್ಧೆ–ಮುಂತಾದವುಗಳನ್ನು ಕಂಡು ಸಂಪ್ರೀತನಾದ ಅಧ್ಯಾತ್ಮವಿದ್ಯಾಗುರು ಶಿಷ್ಯನಿಗೆ ಈ ಆತ್ಮಜ್ಞಾನವನ್ನು ನೀಡುತ್ತಾನೆ. ಆತ್ಮವಿದ್ಯೆ ಕ್ರಯದ ವಸ್ತುವಲ್ಲ. ಶಿಷ್ಯನಿಗೆ ಈ ವಿದ್ಯೆಯನ್ನು ಗಳಿಸುವ ಅಧಿಕಾರಸಂಪತ್ತು ಇದೆಯೆ? ಎನ್ನುವುದೇ ಗುರುವಿಗೆ ಬೇಕಾದದ್ದು. ಈ ಅಧಿಕಾರಸಂಪತ್ತು ಇದೆಯೆಂಬುದು ಗೊತ್ತಾಗತಕ್ಕದ್ದು ಗುರುಸೇವೆಯಿಂದಲೇ.

ಕ್ರಮೇಣ ಸಿದ್ಧನು ಗಜದಂಡಸ್ವಾಮಿಗಳಿಗೆ ಪ್ರಿಯಶಿಷ್ಯನಾದನು. ಅವರು ತಮ್ಮ ಅಧ್ಯಾತ್ಮವಿದ್ಯಾರಹಸ್ಯಗಳನ್ನೆಲ್ಲ ಅವನಿಗೆ ತಿಳಿಸಿಕೊಟ್ಟರು. ಸಿದ್ಧನು ಗಜದಂಡಸ್ವಾಮಿಗಳೇ ತನ್ನ ಗುರುವೆಂದು ಹೃದಯಪೂರ್ವಕವಾಗಿ ಸ್ವೀಕರಿಸಿದನು. ಒಂದು ದಿನ ಪ್ರಾತಃಕಾಲ ಪಾಠಪ್ರವಚನವು ನಡೆಯುತ್ತಿತ್ತು. ಸುರಪುರದ ಆಸ್ಥಾನ ವಿದ್ವಾಂಸರಾದ ಸುಬ್ಬಾಶಾಸ್ತ್ರಿಗಳೆಂಬವರು ಅಲ್ಲಿಗೆ ಆಗಮಿಸಿದರು. ಅವರು ಅನೇಕ ಶಾಸ್ತ್ರಗಳನ್ನು ಕಲಿತು ದೊಡ್ಡಪಂಡಿತರೆಂದು ಕೀರ್ತಿಯನ್ನು ಗಳಿಸಿದವರು. ಅವರಿಗೆ ಗಜದಂಡಸ್ವಾಮಿಗಳ ವಿಷಯದಲ್ಲಿ ಸದ್ಭಾವನೆ ಇರಲಿಲ್ಲವೆಂದು ಕಾಣುತ್ತದೆ. ಶಾಸ್ತ್ರಿಗಳು "ಉಪನಿಷತ್ತನ್ನೋದಲು ದ್ವಿಜರಿಗೆ ಮಾತ್ರ ಅಧಿಕಾರವಿದೆ. ಬ್ರಹ್ಮವಿಚಾರ ಬಹಳ ಕಠಿಣವಾದದ್ದು. ಕ್ರಮವಾಗಿ ತರ್ಕವ್ಯಾಕರಣಾದಿ ಗ್ರಂಥಗಳನ್ನೋದದವರಿಗೆ ವೇದಾಂತದ

ಅರ್ಥ ತಿಳಿಯುವುದಿಲ್ಲ" ಎಂದರೆಂದು ಕಾಣುತ್ತದೆ. ತನ್ನ ಗುರುಗಳಿಗೆ ಸವಾಲನ್ನೊಡ್ಡಿದ ಶಾಸ್ತ್ರಿಗಳ ಮಾತನ್ನು ಕೇಳಿ ಸಿದ್ಧನಿಗೆ ರೋಸಿಹೋಯಿತು. 'ನಾನು ಉತ್ತರ ಹೇಳುತ್ತೇನೆ' ಎಂದು ಎದ್ದು ನಿಂತನು. "ಉಪನಿಷತ್ತು ಬ್ರಹ್ಮಜ್ಞಾನವನ್ನುಂಟುಮಾಡುವ ಗ್ರಂಥ. ಆ ಶಬ್ದಕ್ಕೆ ಅನೇಕ ಅರ್ಥಗಳಿವೆ. ಗುರುಗಳ ಸಮೀಪಕ್ಕೆ ಹೋಗಿ ಅವರಿಂದ ಕಲಿಯಬೇಕಾದ ಗ್ರಂಥ ಎಂದು ಒಂದರ್ಥ. ಅಜ್ಞಾನವನ್ನು ನಾಶಮಾಡತಕ್ಕದ್ದು ಉಪನಿಷತ್-ಎಂಬುದು ಇನ್ನೊಂದು. ಬ್ರಹ್ಮವನ್ನು ಸೇರಿಸತಕ್ಕುದು ಉಪನಿಷತ್ತೆಂದು ಮತ್ತೊಂದು ಅರ್ಥ. ಹೀಗೆ ವಿವೇಚನೆ ಮಾಡಿ ಇನ್ನೂ ಹೇಳಬಹುದು. ಜ್ಞಾನವನ್ನು ಪಡೆಯಲು ಮನುಷ್ಯರೆಲ್ಲರಿಗೂ ಅಧಿಕಾರವಿದೆ ಎಂದು ಶ್ರೀಶಂಕರಾಚಾರ್ಯರೇ ಹೇಳಿದ್ದಾರೆ. ಬ್ರಾಹ್ಮಣನೆಂದರೆ ಯಾರು? 'ಬ್ರಹ್ಮ ಜಾನಾತೀತಿ ಬ್ರಾಹ್ಮಣಃ' ಬ್ರಹ್ಮಜ್ಞಾನಿ ಎಂದರ್ಥ. ಯಾರಿಗೆ ಬ್ರಹ್ಮಜ್ಞಾನವಿಲ್ಲವೋ ಅವರೆಲ್ಲ ಶೂದ್ರರೆಂದೇ ತಿಳಿಯಬೇಕು. 'ನೈಷಾ ತರ್ಕೇಣ ಮತಿರಾಪನೇಯಾ' ಎಂದು ವೇದವೇ ಹೇಳಿದೆ. ಆತ್ಮಜ್ಞಾನವು ತರ್ಕಾದಿಶಾಸ್ತ್ರಗಳಿಂದ ಬರತಕ್ಕದ್ದಲ್ಲ. 'ತರ್ಕೋಽಪ್ರತಿಷ್ಠಃ' ತರ್ಕಕ್ಕೆ ಮಿತಿಯೇ ಇಲ್ಲ. ವ್ಯಾಕರಣವು ಶಬ್ದದ ಸ್ವರೂಪವನ್ನು ಹೇಳಿಕೊಟ್ಟೀತು. ಅದು ಆತ್ಮನನ್ನು ತಿಳಿಸಲಾರದು. ಗುರುವಿನಿಂದಲೇ ಆತ್ಮನನ್ನರಿಯಲು ಸಾಧ್ಯ. ಅನುಭವಿಯು ತಿಳಿಸಿಕೊಡಬೇಕು. ಅಧ್ಯಾತ್ಮವಿದ್ಯೆ ವಾದದಿಂದ ನಿರ್ಣಯವಾಗತಕ್ಕದ್ದಲ್ಲ. ಅದು ಅನುಭವದ ವಿದ್ಯೆ. ತರ್ಕಾದಿ ಶಾಸ್ತ್ರಗಳು 'ವಿದ್ಯಾ ವಿವಾದಾಯ' ಎಂಬಂತೆ ಸಭೆಯಲ್ಲಿ ವಾದಮಾಡುವುದಕ್ಕೆ ಬರುತ್ತದೆ. ಆತ್ಮಜ್ಞಾನಕ್ಕೆ ಗುರುಕಾರುಣ್ಯವೇ ಪ್ರಬಲವಾದ ಸಾಧನ" ಎಂದು ಧೀರವಾಣಿಯಿಂದ ಹೇಳಿದನು.

ಸುಬ್ಬಾಶಾಸ್ತ್ರಿಗಳು ತಲೆದೂಗಿದರು. ಗಜದಂಡಸ್ವಾಮಿಗಳು ಶಿಷ್ಯನ ವಾಗ್ವೈಖರಿಯನ್ನು ಕೇಳುತ್ತ ಮುಗುಳ್ನಗೆ ಬೀರಿದರು. ಸುಬ್ಬಾಶಾಸ್ತ್ರಿಗಳಿಗೆ ಸಿದ್ಧನ ಉತ್ತರದಿಂದ ಸಮಾಧಾನವಾಯಿತು.

ಕೆಲವು ದಿವಸಗಳು ಕಳೆದವು. ಗಜದಂಡಸ್ವಾಮಿಗಳು ಅಧ್ಯಾತ್ಮರಹಸ್ಯವೆಲ್ಲವನ್ನೂ ಸಿದ್ಧನಿಗೆ ತಿಳಿಸಿಕೊಟ್ಟರು. ಆತನ ಶ್ರವಣ, ಮನನ, ನಿದಿಧ್ಯಾಸನಗಳನ್ನು ವೀಕ್ಷಿಸುತ್ತಿದ್ದ ಗುರುಗಳಿಗೆ ಆನಂದವಾಯಿತು. ಒಂದು ದಿನ ಸಿದ್ಧನನ್ನು ಬಳಿಗೆ ಕರೆದು ವಾತ್ಸಲ್ಯದಿಂದ "ಸಿದ್ಧ, ನಿನ್ನಂತಹ ಶಿಷ್ಯನನ್ನು ಪಡೆದ ನಾನು ಧನ್ಯ. ನಾನು ಗುರುಮುಖದಿಂದ ಕಲಿತದ್ದನ್ನು ನಿನಗೆ ತಿಳಿಸಿದ್ದೇನೆ. ಅದ್ವೈತವೇ ಪರಮಸತ್ಯ. ನೀನು ಇದನ್ನು ಅನುಭವಕ್ಕೆ ತಂದುಕೊಂಡಿದ್ದೀಯೆ. ಸಿದ್ಧನೆಂದು ನಿನಗೆ ಹೆಸರಿಟ್ಟದ್ದು ಅನ್ವರ್ಥವಾಯಿತು. ನೀನು ಸಿದ್ಧಾರೂಢನೇ ಆಗಿದ್ದೀಯೆ. ಮಠದಲ್ಲಿ ನೀನು ಕಲಿಯಬೇಕಾದ್ದೇನೂ ಇಲ್ಲ. ಲೋಕಕಲ್ಯಾಣಕ್ಕಾಗಿ ನೀನಿನ್ನು ಯಥೇಷ್ಟವಾಗಿ ತೆರಳಬಹುದು" ಎಂದು ನುಡಿದು ಸಂನ್ಯಾಸದೀಕ್ಷೆಯನ್ನು ಕೊಟ್ಟು ತಾರಕಮಂತ್ರೋಪದೇಶವನ್ನು ನೀಡಿದರು. ಸಿದ್ಧನು ಆನಂದಬಾಷ್ಪಗಳನ್ನು ಸುರಿಸುತ್ತ ಗುರುಗಳಿಗೆ ಸಾಷ್ಟಾಂಗ ಪ್ರಣಾಮ ಮಾಡಿದನು. ಅಂದಿನಿಂದ ಸಿದ್ಧಾರೂಢರೆಂಬ ಹೆಸರು ಸ್ಥಿರವಾಯಿತು.

ಜಯಗಜದಂಡ ಶಿವಯೋಗಿ
ದಯಾಪರಿಪೂರ್ಣ ಸುಖಭೋಗಿ ॥ಪ॥

ಭೃಕುಟಿಲತಾಸಿದ್ಧನತಚರಣ
ಸಕಲ ಜನಮಾಯ ನಿರಹರಣ ॥೧॥

ಪ್ರಕಟ ಪರಬ್ರಹ್ಮಶಿವರೂಪ
ಮುಕುತಿಸಾಮ್ರಾಜ್ಯಚರಭೂಪ ॥೨॥

ಅಮರಸುಕ್ಷೇತ್ರನಿಜವಾಸ
ಸುಮಾನಸವೀರಶೈವೇಶ ॥೩॥

## ೪

## ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ

*(ಶ್ರೇಷ್ಠನಾದವನು ಏನನ್ನು ಮಾಡುವನೋ ಇತರರು ಅದನ್ನೇ ಅನುಸರಿಸುತ್ತಾರೆ.)*

ಸಿದ್ಧಾರೂಢರು ಗಜದಂಡಸ್ವಾಮಿಗಳ ಮಠದಿಂದ ಹೊರಟಾಗ, ಅವರಿಗೆ ೧೮-೨೦ ವರ್ಷ ವಯಸ್ಸಾಗಿರಬಹುದು. ಅದಕ್ಕಿಂತ ಹೆಚ್ಚು ವಯಸ್ಸಾಗಿರಲಿಲ್ಲ. ಆ ವಯಸ್ಸು ಮನುಷ್ಯನಿಗೆ ನವಯೌವನದ ಉದಯಕಾಲ. ವಿಷಯ ವ್ಯಾಮೋಹಕ್ಕೆ ವಶವಾಗುವ ಕಾಲ. ಎಂತಹ ಸತ್ಸಂಗದಲ್ಲಿದ್ದರೂ ಚಿತ್ತವು ವಿಷಯಭೋಗದ ಕಡೆಗೆ ಎಳೆದುಬಿಡುವ ಕಾಲ. ಬ್ರಹ್ಮಚರ್ಯ, ಸುಖಭೋಗದಲ್ಲಿ ವೈರಾಗ್ಯ, ಶಮದಮಾದಿಗುಣಗಳು ಸುಮ್ಮನೆ ಒಲಿಯತಕ್ಕವಲ್ಲ. ಇಂದ್ರಿಯನಿಗ್ರಹವು ಸುಲಭವಲ್ಲ. 'ಬಲವಾನಿಂದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ' (ಇಂದ್ರಿಯಸಮೂಹವು ಬಲಿಷ್ಠವಾದದ್ದು. ಅದು ವಿದ್ವಾಂಸನನ್ನೂ ಸೆಳೆಯುತ್ತದೆ.) ಎಂದು ಹಿರಿಯರು ಹೇಳಿಯೇ ಇದ್ದಾರೆ. ಹೀಗಿರುವಾಗ ಸಿದ್ಧಾರೂಢರು ತಮ್ಮ ಧರ್ಮದಿಂದ ಸ್ವಲ್ಪವೂ ವಿಚಲಿತರಾಗದೆ ಧೀರತನದಿಂದ ಮೆರೆದರು. ಅವರು ಜನ್ಮಾಂತರಗಳಲ್ಲಿ ಮಹತ್ತರವಾದ ಸಾಧನೆಗಳನ್ನು ನಡೆಸಿಯೇ ಇರಬೇಕು. ಅವರು ಬ್ರಹ್ಮಜ್ಞರೇ ಆಗಿದ್ದು ಲೋಕಕಲ್ಯಾಣಕ್ಕಾಗಿ ಸ್ವಸಂಕಲ್ಪದಿಂದ ಅವತರಿಸಿದರೆಂದೇ ನಾವು ತಿಳಿಯಬೇಕಾಗುತ್ತದೆ. ಬಾಲ್ಯದಲ್ಲಿಯೇ ಪರಮವೈರಾಗ್ಯವನ್ನು ತಳೆದು, ತಾಯಿತಂದೆಗಳನ್ನು ತೊರೆದು, ಏಕಾಕಿಯಾಗಿ ಕಾಡುಮೇಡುಗಳಲ್ಲಿ ಅಲೆಯುತ್ತ, ಗುರುವನ್ನು ಅನ್ವೇಷಿಸುತ್ತ, 'ಕರತಲಭಿಕ್ಷಸ್ತರುತಲವಾಸಃ' ಎಂಬಂತೆ ಮನೆಯಿಂದ ನಿರ್ಗಮಿಸಲು ನಿಮಿತ್ತವಾದರೂ ಯಾವುದು? ಅವರು ಧರೆಗಿಳಿದು ಬಂದಾಗಲೇ ಸಿದ್ಧಾರೂಢರಾಗಿದ್ದರೆಂಬುದಕ್ಕೆ ಇದು ಪ್ರಬಲವಾದ ಸಾಕ್ಷ್ಯವಾಗುತ್ತದೆ. ಗುರುವಿನ ಅನ್ವೇಷಣೆಯು ಕೇವಲ ಸಂಪ್ರದಾಯಪಾಲನೆಗಾಗಿ. ಅಧ್ಯಾತ್ಮವಿದ್ಯೆಯನ್ನು ಗುರುವಿನ

ಉಪದೇಶದಿಂದಲೇ ಪಡೆಯಬೇಕು, ಅದು ಪುಸ್ತಕದಿಂದ ಬರುವ ವಿದ್ಯೆಯಲ್ಲ-ಎಂಬುದನ್ನು ಜಗತ್ತಿಗೆ ತೋರಿಸುವುದಕ್ಕಾಗಿ. 'ಆಚಾರ್ಯವಾನ್ ಪುರುಷೋ ವೇದ-ಆಚಾರ್ಯನನ್ನು ಪಡೆದ ಮನುಷ್ಯನೇ ಆತ್ಮವಸ್ತುವನ್ನು ಅರಿಯಬಲ್ಲನು' ಎಂಬ ವೇದವಾಣಿಯನ್ನು ಸಾರ್ಥಕ ಪಡಿಸುವುದಕ್ಕಾಗಿ ಸಿದ್ಧಾರೂಢರು ಗಜದಂಡಸ್ವಾಮಿಗಳನ್ನು ಆಶ್ರಯಿಸಿದರು-ಎಂಬ ನಿರ್ಣಯಕ್ಕೆ ನಾವು ಬರಲೇಬೇಕಾಗುತ್ತದೆ.

ಶ್ರೀಶಂಕರಭಗವತ್ಪಾದರ ಚರಿತ್ರೆಯನ್ನು ಅವಲೋಕಿಸಿದರೂ ಈ ನಿರ್ಣಯಕ್ಕೇ ನಾವು ಬರಬೇಕಾಗುತ್ತದೆ. ಶ್ರೀಶಂಕರಾಚಾರ್ಯರು ಪರಮೇಶ್ವರನ ಅವತಾರವೆಂದು ಸಂಪ್ರದಾಯ ಹೇಳುತ್ತದೆ.

ಅಷ್ಟವರ್ಷೇ ಚತುರ್ವೇದೀ, ದ್ವಾದಶೇ ಸರ್ವಶಾಸ್ತ್ರವಿತ್ ।
ಷೋಡಶೇ ಕೃತವಾನ್ ಭಾಷ್ಯಂ, ದ್ವಾತ್ರಿಂಶೇ ಮುನಿರಭ್ಯಗಾತ್।

"ಆಚಾರ್ಯರು ಎಂಟುವರ್ಷದವರಾಗಿದ್ದಾಗ ನಾಲ್ಕುವೇದಗಳನ್ನು ಕಲಿತಿದ್ದರು. ಹನ್ನೆರಡನೆಯ ವರ್ಷಕ್ಕೆ ಸರ್ವಶಾಸ್ತ್ರಪಾರಂಗತರಾಗಿ, ಹದಿನಾರನೇ ವರ್ಷದಲ್ಲಿ ಬ್ರಹ್ಮಸೂತ್ರಾದಿಗಳಿಗೆ ಭಾಷ್ಯವನ್ನು ಬರೆದರು. ಮೂವತ್ತೆರಡನೆಯ ವಯಸ್ಸಿನಲ್ಲಿ ಶರೀರವನ್ನು ತ್ಯಜಿಸಿ ಸ್ವಸ್ಥಾನಕ್ಕೆ ಹೊರಟು ಹೋದರು" ಎಂದು ಶಂಕರವಿಜಯಗಳೆಲ್ಲವೂ ಸಾರುತ್ತವೆ. ಸಿದ್ಧಾರೂಢರು ಗೃಹವನ್ನು ತ್ಯಜಿಸಿ ಹೋಗುವುದಕ್ಕೆ ಸರ್ಪದಂಶನವು ನಿಮಿತ್ತವಾದಂತೆ, ಶ್ರೀಶಂಕರರಿಗೆ ಮೊಸಳೆಯು ಹಿಡಿದದ್ದು ವ್ಯಾಜವಾಯಿತೆಂದು ಹಿಂದೆಯೇ ತಿಳಿಸಿದ್ದಾಗಿದೆ. ಆಚಾರ್ಯರ ಗುರುಗಳು ಶ್ರೀಗೋವಿಂದಭಗವತ್ಪಾದರು. ಆಚಾರ್ಯರ ಹಾಗೆ ಸಿದ್ಧಾರೂಢರೂ ಗುರುವನ್ನರಸಿಕೊಂಡು ಹೋದರು. ಗೋವಿಂದಭಗವತ್ಪಾದರು ನೀನು ಯಾರೆಂದು ಕೇಳಿದಾಗ ಶ್ರೀಶಂಕರರು 'ನಾಹಂ ದೇಹೋ ನೇಂದ್ರಿಯಾಣ್ಯಂತರಂಗಂ' (ನಾನು ದೇಹ-ಇಂದ್ರಿಯ ಅಂತಃಕರಣಾದಿಗಳಲ್ಲ.) ಇತ್ಯಾದಿ ಶ್ಲೋಕವನ್ನು ಹೇಳಿ

'ಚಿದಾನಂದರೂಪಃ ಶಿವೋಽಹಂ ಶಿವೋಽಹಂ' (ಚಿದಾನಂದರೂಪನಾದ ಶಿವನೇ ನಾನು.) ಎಂದು ನುಡಿದಿದ್ದಾರೆ. ಇಂತಹವರಿಗೆ ಗುರುವಿನ ಆವಶ್ಯಕತೆಯೇ ಇರಲಿಲ್ಲ.

ಆದ್ದರಿಂದ ಸಿದ್ಧಾರೂಢರು ಗುರುವನ್ನು ಅನ್ವೇಷಿಸಿದ್ದು ಶಿಷ್ಟಾಚಾರವನ್ನು ಪರಿಪಾಲಿಸುವುದಕ್ಕಾಗಿಯೇ ಎಂದು ತಿಳಿಯಬೇಕಾಗುತ್ತದೆ. ಪೂರ್ವದಲ್ಲಿ ವಾಮದೇವ, ವಸಿಷ್ಠ, ವೇದವ್ಯಾಸ–ಮೊದಲಾದವರು ಧರೆಗೆ ಬಂದಾಗಲೇ ಪರಮಜ್ಞಾನಿಗಳಾಗಿದ್ದರೆಂಬುದು ಪುರಾಣಪ್ರಸಿದ್ಧವಾದ ವಿಷಯ. ಲೋಕಕಲ್ಯಾಣಕ್ಕಾಗಿ ಜ್ಞಾನಿಗಳೂ ಸಹ ದೇಹಧಾರಿಗಳಾಗಿ ಬಂದು ಜನರು ಶ್ರೇಯೋಮಾರ್ಗವನ್ನನುಸರಿಸಲೆಂದು ಉಪದೇಶಿಸುತ್ತಾರೆ. ಎಲ್ಲ ಸಾಮಾನ್ಯ ಮನುಷ್ಯರಂತೆ ವರ್ತಿಸುತ್ತಾರೆ. ಶ್ರೀಕೃಷ್ಣನೂ ಸಾಂದೀಪನಿಯೆಂಬ ಗುರುವನ್ನು ಆಶ್ರಯಿಸಿದನು. ಮಥಿತಾರ್ಥವೇನೆಂದರೆ, ಸಿದ್ಧಾರೂಢರು ಜನಿಸಿದಾಗಲೇ ಸಿದ್ಧಾರೂಢರಾಗಿದ್ದರು. ಆತ್ಮಜ್ಞಾನವನ್ನು ಅವರು ಯಾರಿಂದಲೂ ಕಲಿಯಬೇಕಾಗಿರಲಿಲ್ಲ. ಪ್ರಾಥಮಿಕ ಶಾಲೆಯಲ್ಲಿ ಸಹ ಒಂದು ದಿನವೂ ಕಲಿಯದ ಅವರಿಗೆ ವೈರಾಗ್ಯವೂ ಜ್ಞಾನವೂ ಸ್ವತಃಸಿದ್ಧವಾಗಿ ಜೊತೆಗೇ ಬಂದಿದ್ದವು. ಯಾವುದೋ ಪ್ರಾರಬ್ಧ ಕರ್ಮದ ಶೇಷದಿಂದಲೋ ಅಥವಾ ಪಾಮರಜನರ ನಡುವೆ ಹುಟ್ಟಿ ದೇವಮಾನವನಾಗಿ ಬೆಳಗಿ, ಅದ್ವೈತಸಿದ್ಧಾಂತದ ಸತ್ಯವನ್ನು ಲೋಕಕ್ಕೆ ಪ್ರಕಾಶಪಡಿಸಬೇಕೆಂಬ ಇಚ್ಛಾವಿಶೇಷದಿಂದಲೋ ಅವರು ಜನ್ಮಗ್ರಹಣ ಮಾಡಿದರು. ದೇವರಕೊಂಡದ ಚನ್ನವೃಷಭೇಂದ್ರ ಸ್ವಾಮಿಗಳು ಒಮ್ಮೆ "ಸಿದ್ಧ, ನೀನು ನರಮಾನವನಲ್ಲ. ದೇವತೆಯಾಗಿದ್ದು ಮಾನವನಾಗಿ ಅವತಾರ ಮಾಡಿದ್ದೀಯೆ" ಎಂದು ಹೇಳಿದ್ದರಂತೆ. ತಿರುವಣ್ಣಾಮಲೆಯ ರಮಣಮಹರ್ಷಿಗಳೂ ಶ್ರೀರಾಮಕೃಷ್ಣ ಪರಮಹಂಸರೂ ನಮ್ಮ ಸಿದ್ಧಾರೂಢರಂತೆಯೇ ಯಾರಿಂದಲೂ ಕಲಿಯದೆ ಸ್ವತಃ ಆತ್ಮಜ್ಞಾನಿಗಳಾಗಿದ್ದರೆಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು.

ಸಿದ್ಧಾರೂಢರು ಸಂನ್ಯಾಸಿಗಳಾಗಿದ್ದರೂ ಕಾಷಾಯಾಂಬರ

ಧಾರಿಗಳಾಗಿರಲಿಲ್ಲ. ಅವರನ್ನು ಅವಧೂತರೆಂದು ಗುರುತಿಸುವುದೇ ಯುಕ್ತವಾಗಿದೆ. ಕೊರಳಿನಲ್ಲಿದ್ದ ಲಿಂಗವನ್ನು ಗಜದಂಡಸ್ವಾಮಿಗಳೆದುರಿಗೆ ತೆಗೆದುಹಾಕಿದರು. ಅದರ ಆವಶ್ಯಕತೆಯೇ ಅವರಿಗೆ ಕಾಣಿಸಲಿಲ್ಲ. ಎಷ್ಟಾದರೂ ಲಿಂಗಪೂಜೆಯೆನ್ನುವುದು ಮೂರ್ತಿಪೂಜೆ, ಸಗುಣೋಪಾಸನೆ. ನಿರ್ಗುಣವೂ ನಿರಂಜನವೂ ಶಾಂತವೂ ಅಕ್ರಿಯವೂ ಆದ ಪರಬ್ರಹ್ಮವೇ ನಾನೆಂಬ ನಿಶ್ಚಯ ವಾದವನಿಗೆ ಲಿಂಗಪೂಜೆಯಿಂದ ಆಗಬೇಕಾದ್ದೇನು? ಅರ್ಚನೆ, ಪೂಜೆ–ಎಂದೊಡನೆ ದ್ವೈತಭಾವವು ಉದಿಸಬೇಕಾಗುತ್ತದೆ. ನಾನು ಪೂಜಕ, ಶಿವನು ಪೂಜ್ಯ, ಪೂಜೆಯೆಂಬ ಕ್ರಿಯೆಯನ್ನು ಮಾಡುತ್ತಿದ್ದೇನೆ. ಇದಕ್ಕಾಗಿ ಜಲ, ಪುಷ್ಪ, ಫಲಗಳು ನನಗೆ ಬೇಕು–ಎಂಬ ಕಲ್ಪನೆ ಇಲ್ಲದಿದ್ದರೆ ಪೂಜೆ ಹೇಗೆ ಸಾಗುತ್ತದೆ? ಇದಷ್ಟೂ ದ್ವೈತಭಾವನೆಯಿಂದಲೇ ಸಾಗತಕ್ಕದ್ದು. ದ್ವೈತಭಾವವು ಅಳಿಯುವವರೆಗೆ ಇದೆಲ್ಲವೂ ಅವಶ್ಯವಾಗಿ ಬೇಕು. ಅದು ಅಳಿದು ಅದ್ವೈತಬ್ರಹ್ಮದಲ್ಲಿ ಈಜಾಡತಕ್ಕವನು ಅವಧೂತನೇ. ಸಮಸ್ತ ದ್ವೈತಭಾವನೆಗಳನ್ನೂ, ಅವಧೂನನ–ಎಂದರೆ, ಕೊಡವಿ ಎಸೆಯುವುದನ್ನು ನಡೆಸಿದವನು ಅವಧೂತ. ಕರ್ತೃ, ಕರ್ಮ, ಕ್ರಿಯೆ–ಎಂಬ ತ್ರಿಪುಟಿಯನ್ನು ತಳ್ಳಿ ಹಾಕಿದವನು ಅವಧೂತ. 'ನಿಸ್ತ್ರೈಗುಣ್ಯೇ ಪಥಿವಿಚರತಾಂ ಕೋ ವಿಧಿಃ ಕೋ ನಿಷೇಧಃ'– ಎಂದು ಶ್ರೀಶಂಕರಾಚಾರ್ಯರು ಹೇಳಿದ್ದಾರೆ. ತ್ರಿಗುಣಾತೀತವಾದ ನಿರ್ಗುಣಬ್ರಹ್ಮಬೋಧದಲ್ಲಿ ವಿಹರಿಸತಕ್ಕವರಿಗೆ ವಿಧಿ ಯಾವುದು? ನಿಷೇಧ ಯಾವುದು? ಏಕೆಂದರೆ, ವಿಧಿನಿಷೇಧಗಳೆಲ್ಲವೂ ಅವಿದ್ಯಾಜನ್ಯವಾದ ಲೋಕವ್ಯವಹಾರಕ್ಕೆ ಸಂಬಂಧಿಸಿದವು. ನಾನು ಕರ್ತ, ನಾನು ಭೋಕ್ತ– ಎಂದು ಕರ್ತೃತ್ವ ಭೋಕ್ತೃತ್ವಗಳಿರತಕ್ಕವರಿಗೆ ವಿಧಿ ನಿಷೇಧಗಳು ಅನ್ವಯಿಸುತ್ತವೆ. ಅವಧೂತನ ಹತ್ತಿರವೂ ವಿಧಿನಿಷೇಧಗಳು ಹೋಗಲಾರವು. ಹಾಗಿದ್ದರೆ, ಧರ್ಮವಿರುದ್ಧವಾದ ದುಷ್ಕಾರ್ಯದಲ್ಲಿ ಅವಧೂತನು ತೊಡಗಬಹುದಲ್ಲವೆ? ಎಂದು ಶಂಕಿಸುವುದು ಮೂರ್ಖತನವೇ ಸರಿ. ರಾಗದ್ವೇಷಗಳನ್ನೂ ಸರ್ವಕಾಮನೆಗಳನ್ನೂ ತೊಡೆದು ಹಾಕಿದವನು ದುಷ್ಕರ್ಮದಲ್ಲಿ ಏಕೆ ತೊಡಗುತ್ತಾನೆ?

ರಾಗದ್ವೇಷಗಳಿಲ್ಲದೆ ಯಾವ ಕರ್ಮವೂ ನಡೆಯುವುದೇ ಇಲ್ಲ. ಅವಧೂತನಿಗೆ ರಾಗದ್ವೇಷಗಳು ಸುಟ್ಟು ಬೂದಿಯಾಗಿರುತ್ತವೆ. ಆದರೆ ಅವಧೂತನ ವರ್ತನೆಯು, ಸಂಸಾರಿಗಳೂ ಲೋಕವ್ಯವಹಾರದಲ್ಲಿ ಮುಳುಗಿದವರೂ ಆದ ನಮ್ಮಂಥವರಿಗಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿದಿರಬೇಕು. ದ್ವೈತವಿಲ್ಲದೆ ಲೋಕವ್ಯವಹಾರವೇ ಇಲ್ಲ. ಈ ವಿಷಯದಲ್ಲಿ ಜ್ಞಾನಿಯ ವರ್ತನೆಯನ್ನು ನಾವು ಅನುಕರಿಸಬಾರದು. ಆತನ ಬೋಧನೆಗೆ ಮಾತ್ರ ನಾವು ಕಿವಿಗೊಡಬೇಕು. ನನ್ನಂತೆಯೇ ನೀವು ನಡೆದುಕೊಳ್ಳಿರಿ–ಎಂದು ಜ್ಞಾನಿಯು ಎಂದಿಗೂ ಹೇಳುವುದಿಲ್ಲ. ನಾನು ಬೋಧಿಸಿದಂತೆ ನಡೆದುಕೊಳ್ಳಿರಿ–ಎಂದು ಜ್ಞಾನಿಯು ಉಪದೇಶಿಸುತ್ತಾನೆ.

ಚಿದಂಬರ ಮಠಾಧೀಶಂ ।
ಸಿದ್ಧಾರೂಢಯತೀಶ್ವರಮ್ ॥
ಶಿಷ್ಯಪ್ರಶಿಷ್ಯರೂಪೇಣ ।
ಬೋಧಕಂ ಗುರುಮಾಶ್ರಯೇ ॥

ಯದಂಘ್ರಿಕಮಲದ್ವಂದ್ವಮ್ ।
ತಾಪತ್ರಯನಿವಾರಣಮ್ ॥
ಶಾಂತ್ಯೈಕ್ಯಪದದಂ ದೇವಂ ।
ಸಿದ್ಧಾರೂಢಮಹಂ ಭಜೇ ॥

ಜ್ಞಾನಸಿದ್ಧಂ ತಪಃಸಿದ್ಧಮ್ ।
ಸರ್ವಸಿದ್ಧಂ ಶಿವಪ್ರದಮ್ ॥
ಸ್ವಯಂ ಸಿದ್ಧಮಹಂ ವಂದೇ ।
ಸಿದ್ಧಾರೂಢಯತೀಶ್ವರಮ್ ॥

೫

## ಏಕ ಏವ ಚರೇನ್ನಿತ್ಯಂ ಸಿದ್ಧ್ಯರ್ಥಮಸಹಾಯವಾನ್

*(ಸಿದ್ಧಿಯನ್ನು ಪಡೆಯುವುದಕ್ಕೆ ಯಾರ ನೆರವೂ ಇಲ್ಲದೇ ಒಬ್ಬನೇ ಸದಾ ಸಂಚರಿಸುತ್ತಿರಬೇಕು.)*

ಶ್ರೀ ಗಜದಂಡಸ್ವಾಮಿಗಳು ಯಾವ ಪಠ್ಯಗ್ರಂಥಗಳನ್ನಿಟ್ಟುಕೊಂಡು ಶಿಷ್ಯರಿಗೆ ವೇದಾಂತವನ್ನು ಬೋಧಿಸುತ್ತಿದ್ದರೆಂಬುದಕ್ಕೆ ಸರಿಯಾದ ಅಧಾರಗಳು ದೊರೆಯಲಿಲ್ಲ. ಅದ್ವೈತ ಸಿದ್ಧಾಂತಕ್ಕೆ ಮೂಲಭೂತವಾದ ಪ್ರಮಾಣಗಳು ಉಪನಿಷತ್ತುಗಳೇ ಆದ್ದರಿಂದ ಉಪನಿಷತ್ತುಗಳ ಆಧಾರದಿಂದ ಬೋಧಿಸುತ್ತಿದ್ದರೆಂದು ಊಹಿಸಬಹುದು. ವೀರಶೈವ ದರ್ಶನಕ್ಕೆ ಜೀವಾಳವಾಗಿರುವ ಷಟ್ ಸ್ಥಲ ಸಿದ್ಧಾಂತದ ನಿರೂಪಣೆ, ವೇದಾಂತದೊಡನೆ ಅವುಗಳ ಸಮನ್ವಯ ಕ್ರಮ–ಮೊದಲಾದದ್ದು ಅವಶ್ಯವಾಗಿ ಇದ್ದಿರಲೇಬೇಕು. ಶ್ರೀನಿಜಗುಣ ಶಿವಯೋಗಿಗಳು ಮಹಾಜ್ಞಾನಿಗಳಾಗಿದ್ದು, ಕೈವಲ್ಯ ಪದ್ಧತಿ, ಪರಮಾರ್ಥ ಗೀತೆ–ಮುಂತಾದ ಶ್ರೇಷ್ಠ ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳೊಂದಿಗೆ, ಲಲಿತ ಭಾಷೆಯಲ್ಲಿರುವ ಭಗವದ್ಗೀತೆಯೂ ಪಾಠ್ಯದಲ್ಲಿ ಸಮಾವೇಶಗೊಂಡಿರಬೇಕು. ಇನ್ನು ಬ್ರಹ್ಮಸೂತ್ರಗಳ ವಿವರಣೆ ಅತ್ಯಂತ ಗಂಭೀರವೂ ವಾದಕೋಲಾಹಲದಿಂದ ದುರ್ಗಮವೂ ಆದ್ದರಿಂದ ಶಿಷ್ಯರಿಗೆ ಸುಲಭಗ್ರಾಹ್ಯವಲ್ಲವೆಂದು ಅದನ್ನು ಪರಿತ್ಯಜಿಸಿರಬಹುದೆಂದು ಊಹಿಸಬಹುದು. ಇದು ಕೇವಲ ಊಹೆಯಷ್ಟೆ. ಆದ್ದರಿಂದ ಉಪನಿಷತ್ತು, ಭಗವದ್ಗೀತೆ, ನಿಜಗುಣ ಶಿವಯೋಗಿಗಳ ಗ್ರಂಥಗಳು ಇವಿಷ್ಟು ಪಠ್ಯಗ್ರಂಥಗಳೆಂದು ನಿರ್ಧರಿಸಬಹುದು. ಇವುಗಳ ಅಧ್ಯಯನಕ್ಕಾದರೂ ಸಂಸ್ಕೃತಭಾಷೆಯ ಸಾಮಾನ್ಯಜ್ಞಾನವು ಅವಶ್ಯಕ.

ಸಿದ್ಧಾರೂಢರು ೮–೧೦ ವರ್ಷಗಳ ಕಾಲವಾದರೂ ಶ್ರೀಗಜದಂಡಸ್ವಾಮಿಗಳ ಮಠದಲ್ಲಿ ವಾಸವಾಗಿರಬೇಕು. ಆಗ ತಕ್ಕಮಟ್ಟಿಗೆ ಸಂಸ್ಕೃತ ಭಾಷೆಯನ್ನು ಅವರು ಅಭ್ಯಾಸ ಮಾಡಿರಬೇಕು. ಮುಂದೆ ಭರತಖಂಡದ ನಾನಾ ದೇಶಗಳಲ್ಲಿ ಬಹಳ ಕಾಲ

ಸಂಚರಿಸುತ್ತಿದ್ದುದರಿಂದಲೂ ವಿವಿಧ ಭಾಷೆಗಳನ್ನಾಡುವ ಜನರೊಡನೆ ಸಂಪರ್ಕವಾದದ್ದರಿಂದಲೂ ವಿವಿಧ ಭಾಷೆಗಳ ಪರಿಚಯುವಾಯಿತು. ಸಿದ್ಧಾರೂಢರು ಹುಬ್ಬಳ್ಳಿಯುಲ್ಲಿ ವಸತಿ ಮಾಡಿದ ಮೇಲೆ ಅವರ ಸಂದರ್ಶನಕ್ಕಾಗಿ ಬರುತ್ತಿದ್ದ ಭಕ್ತಜನರೊಡನೆ ಆಯಾ ಭಾಷೆಗಳಲ್ಲಿಯೇ ಮಾತಾಡುತ್ತಿದ್ದರು. ಆದ್ದರಿಂದ ಕನ್ನಡ, ಸಂಸ್ಕೃತ, ತೆಲಗು, ತಮಿಳು, ಹಿಂದಿ, ಮರಾಠಿ, ಉರ್ದು, ಗುಜರಾತಿ–ಇಷ್ಟು ಭಾಷೆಗಳು ಶ್ರೀ ಆರೂಢರಿಗೆ ಚೆನ್ನಾಗಿ ಬರುತ್ತಿದ್ದವೆಂಬುದು ಪ್ರಮಾಣಿತವಾಗಿದೆ.

ಅವಧೂತರಿಗೆ ಪರಿವ್ರಾಜಕ , ಯಾಯಾವರ–ಎಂಬ ಹೆಸರುಗಳುಂಟು.ಪರಿವ್ರಾಜಕನೆಂದರೆ ಮನೆ, ಮಠ–ಮುಂತಾದ್ದನ್ನು ಪರಿತ್ಯಜಿಸಿ ಹೋಗತಕ್ಕವನೆಂದು ಅರ್ಥ. ಯಾಯಾವರ ಎಂದರೆ ಯಾವಾಗಲೂ ಪ್ರಯಾಣ ಮಾಡುತ್ತ ಅಲೆಯುತಕ್ಕವನು. ಇವೆರಡು ಶಬ್ದಗಳೂ ಸಿದ್ಧಾರೂಢರಲ್ಲಿ ಅನ್ವರ್ಥವಾದವು. ಅವರು ಶ್ರೀಗಜದಂಡಸ್ವಾಮಿಗಳಲ್ಲಿ ಗುರುಕುಲ ವಾಸವನ್ನು ಮುಗಿಸಿ, 'ಏಕ ಏವ ಚರೇನ್ನಿತ್ಯಂ ಸಿದ್ಧ್ಯರ್ಥಮಸಹಾಯವಾನ್' ಎಂಬ ಮನುಸ್ಮೃತಿಯ ವಚನದಂತೆ ಏಕಾಕಿಯಾಗಿ ಹೊರಟರು. ಕೌಪೀನ, ಹೊದೆಯಲು ಒಂದು ವಸ್ತ್ರ–ಇವುಗಳ ಹೊರತು ಇನ್ನಾವ ಪರಿಕರವೂ ಇಲ್ಲದ್ದರಿಂದ 'ಅಸಹಾಯವಾನ್' ಆದರು. ಲೋಕವೀಕ್ಷಣೆ, ಲೋಕಾನುಭವ, ಲೋಕಶಿಕ್ಷಣ–ಇವುಗಳಿಂದಾಗುವ ಆತ್ಮಜ್ಞಾನದ ಪರಿಪಾಕವೇ ಸಿದ್ಧಿ. ಈ ಉದ್ದೇಶದಿಂದ ಅವರ ಸಂಚಾರ ನಡೆಯಿತು.

ಆ ಕಾಲದಲ್ಲಿ–ಎಂದರೆ ಇಂದಿಗೆ ಸುಮಾರು ೧೪೦ ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ಸರಿಯಾದ ರಸ್ತೆಗಳಾಗಲಿ, ಬಸ್–ರೈಲು ಬಂಡಿಗಳಾಗಲಿ ಇರಲಿಲ್ಲ. ಎಲ್ಲಾದರೂ ವಾಹನಗಳಿದ್ದರೆ ಅವುಗಳನ್ನೇರಲು ಸಿದ್ಧಾರೂಢರ ಬಳಿ ಹಣವಿರಲಿಲ್ಲ. ವಾಹನಗಳನ್ನೇರುವ ಇಚ್ಛೆಯೂ ಅವರಿಗಿರಲಿಲ್ಲ. ಎಲ್ಲಿಗೆ ಹೋಗಬೇಕೆಂದು ವಾಹನಗಳ ಅಪೇಕ್ಷೆ? ಲೋಕ

ಸಂಚಾರವೇ ಉದ್ದಿಷ್ಟವಾದ್ದರಿಂದ ಬರಿಗಾಲುಗಳಲ್ಲಿ ಅವರ ಪ್ರಯಾಣ ಸಾಗುತ್ತಿತ್ತು. 'ಕರತಲಭಿಕ್ಷಾ ತರುತಲವಾಸಃ' ಇದ್ದದ್ದೇ. ಸಂಚಾರದ ವಿವರಗಳು ನಮಗೆ ದೊರೆಯುವುದಿಲ್ಲವಾದರೂ ಮುಂದೆ ಉಪದೇಶ ಕಾಲದಲ್ಲಿ ಆರೂಢರ ಶ್ರೀಮುಖದಿಂದ ಬಂದ ಮಾತುಗಳಿಂದ ಕೆಲವು ವಿಷಯಗಳನ್ನು ಸಂಗ್ರಹಿಸಿ ಇಲ್ಲಿ ಬರೆಯಬಹುದಾಗಿದೆ.

ಹಸಿವು, ಬಾಯಾರಿಕೆ, ದಣಿವುಗಳನ್ನು ಲೆಕ್ಕಿಸದೆ ಕಾಡು ಮೇಡುಗಳಲ್ಲಿ ನಡೆದರು. ಬೆಟ್ಟ, ಗುಡ್ಡಗಳನ್ನು ಹತ್ತಿ ಇಳಿದರು. ಪ್ರಕೃತಿಸೌಂದರ್ಯವನ್ನು ನೋಡುತ್ತ, ನಾನಾ ಮೃಗ ಪಕ್ಷಿಗಳ ಚೆಲ್ಲಾಟವನ್ನು ಕಂಡು ಆನಂದಿಸುತ್ತ, ಭಗವಂತನ ಅನಂತ ಮಹಿಮೆಯನ್ನು ನೋಡಿ ಅಚ್ಚರಿಪಡುತ್ತ, ವಿವಿಧ ಜನಪದಗಳ ಆಚಾರ ವಿಚಾರಗಳನ್ನು ಪರಿಶೀಲಿಸುತ್ತ, ಪಥಿಕರೊಡನೆ ಸಂಭಾಷಿಸುತ್ತ, ಅನೇಕ ಭಾಷೆಗಳ ಪರಿಚಯ ಮಾಡಿಕೊಳ್ಳುತ್ತ ಸಂಚರಿಸಿದರು. ಅಲ್ಲಲ್ಲಿ ಪುಣ್ಯಾತ್ಮರು ನೀಡುವ ಭಿಕ್ಷೆಯೇ ಆಹಾರ, ಹೊಳೆ ಕೆರೆಗಳ ನೀರೇ ಪಾನೀಯ. ಗುಡಿಗಳ ಕಟ್ಟೆಗಳೋ, ಹಾಳು ಮಂಟಪಗಳೋ ಮಲಗುವ ಮನೆ. ಸದಾ ಶಿವಧ್ಯಾನ, ನಾಮಸ್ಮರಣೆಯಿಂದ ತೃಪ್ತಿ. ಹೀಗೆ ಸಿದ್ಧರು ಆತ್ಮಾರಾಮರಾಗಿ 'ಪರಿವ್ರಜ, ಪರಿವ್ರಜ' ಎಂದು ಪರಿವ್ರಾಜಕರಾಗಿ ದೇಶಗಳಲ್ಲಿ ಕೆಲವು ವರ್ಷ ಸುತ್ತಾಡಿದರು.

ಹೀಗೆ ಸುತ್ತಾಡುತ್ತಿದ್ದ ಸಿದ್ಧಾರೂಢರು ಒಮ್ಮೆ ಹಂಪೆ ಬಳಿಯ ಆನೆಗುಂದಿಗೆ ಬಂದು ಪಂಪಾಪತಿಯಾದ ವಿರೂಪಾಕ್ಷನ ದರ್ಶನಕ್ಕೆಂದು ದೇವಾಲಯಕ್ಕೆ ಹೋದರು. ಇವರ ಬಟ್ಟೆ ಬರೆಯನ್ನು ನೋಡಿ ಈತನೊಬ್ಬ ತಿರುಕನಾಗಿರಬೇಕೆಂದು ಅಲ್ಲಿಯ ಅರ್ಚಕನು ಭಾವಿಸಿ ಒಳಗೆ ಹೋಗದಂತೆ ತಡೆದನಂತೆ. 'ನೀನು ಹೀನಜಾತಿಯವನು. ಒಳಗೆ ನುಗ್ಗಬೇಡ' ಎಂದನಂತೆ. ಅದಕ್ಕೆ ಸಿದ್ಧರು 'ಹೀನನೆಂದರೆ ಯಾರು? ಈ ಸ್ಥೂಲ ಶರೀರವೋ, ಕಾರಣ ಶರೀರವೋ ಅಥವಾ ನಿತ್ಯಪ್ರಕಾಶನಾದ ಆತ್ಮನೋ? ಎಲ್ಲ ಮನುಷ್ಯರ ಸ್ಥೂಲ ಶರೀರವೂ ಒಂದೇ ಬಗೆಯದು. ಎಲ್ಲವೂ ಮಲಿನವೇ. ಕಾರಣ

ಶರೀರವು ಎಲ್ಲರಲ್ಲಿಯೂ ಒಂದೇ ರೀತಿಯಲ್ಲಿದೆ. ಅದಕ್ಕೆ ಯಾವ ಜಾತಿಯೂ ಇಲ್ಲ. ಆತ್ಮನಾದರೋ ನಿತ್ಯಶುದ್ಧ ಬುದ್ಧ ಮುಕ್ತಸ್ವರೂಪನು. ಇವರು ಯಾರು ಹೀನ ಜಾತಿಯವರು? ಯಾರನ್ನು ತಡೆಯುತ್ತಿದ್ದೀಯೆ?" ಎಂದು ಕೇಳಿದರು. ಆಗ ಅರ್ಚಕನು 'ಈತನು ತಿರುಕನಲ್ಲ. ಜ್ಞಾನಿಯಾದ ಒಬ್ಬ ಅವಧೂತನೇ ಸರಿ' –ಎಂದು ನಿಶ್ಚಯಿಸಿ ತಾನಾಡಿದ ಮಾತಿಗೆ ಕ್ಷಮೆಯನ್ನು ಕೋರಿದನು. ಆರೂಢರು ವಿರೂಪಾಕ್ಷನ ದರ್ಶನವನ್ನು ಪಡೆದು ಶಿವಧ್ಯಾನದಲ್ಲಿ ತಲ್ಲೀನರಾದರು.

ಅವರು ಹಂಪೆಯಲ್ಲಿ ಕೆಲವು ದಿನ ಉಳಿದರು. ಇವರ ಸುದ್ದಿಯನ್ನು ಕೇಳಿ ಜನರು ಬರತೊಡಗಿದರು. ಆರೂಢರು ಅವರ ಆಧ್ಯಾತ್ಮಿಕ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ನೀಡುತ್ತಿದ್ದರು. " ಈತನು ಸಾಮಾನ್ಯ ಬೈರಾಗಿಯಲ್ಲ" ಎಂದರಿತು ಜಿಜ್ಞಾಸುಗಳು ಹೆಚ್ಚಿನ ಸಂಖ್ಯೆಯಲ್ಲಿ ಸೇರತೊಡಗಿದರು. ವೇದಾಂತದ ವಿಷಯದಲ್ಲಿ ಪ್ರವಚನಗಳೇ ನಡೆಯಲಾರಂಭಿಸಿದವು. ಸಿದ್ಧಾರೂಢರ ಜ್ಞಾನಸಂಪತ್ತನ್ನರಿತು ಒಂದು ದಿನ ಆ ಪ್ರಾಂತದ ಆನೆಗುಂದಿಯ ರಾಜವಂಶೀಯನೊಬ್ಬನು, ಸಿದ್ಧರನ್ನು ತನ್ನ ಭವನಕ್ಕೆ ಕರೆದೊಯ್ಯಬೇಕೆಂದು ಕುದುರೆಯ ಸಾರೋಟಿನಲ್ಲಿ ಬಂದು ತನ್ನ ಬೇಡಿಕೆಯನ್ನು ಮುಂದಿಟ್ಟು, ಸಾರೋಟನ್ನು ಹತ್ತುವಂತೆ ಬಿನ್ನೈಸಿದನು. ಅದಕ್ಕೆ ಆರೂಢರು 'ಅಯ್ಯಾ, ನೀನು ಔದಾರ್ಯದಿಂದ- ನನ್ನನ್ನು ಕರೆದಿದ್ದೀಯೆ. ನನಗೆ ಈ ಗಾಡಿಯೇಕೆ? ಈ ರಥವೇಕೆ? ಪರಮಾತ್ಮನು ಅನುಗ್ರಹಿಸಿದ ಈ ಶರೀರವೇ ರಥ. ಇದನ್ನೇರಿ ಕುಳಿತೇ ಇದ್ದೇವೆ. ಇಂದ್ರಿಯಗಳೇ ಕುದುರೆಗಳು. ಮನಸ್ಸು ಕಡಿವಾಣ, ಬುದ್ಧಿಯೇ ಸಾರಥಿ. ಆದರೆ ನಿನ್ನ ಭವನದಲ್ಲಿ ನನಗೆ ಕೆಲಸವೇನಿದೆ? ತಿರುಪೆಯ ಅನ್ನದಿಂದಲೇ ನಾನು ತೃಪ್ತನಾಗಿದ್ದೇನೆ" ಎಂದು ಹೇಳಿದರು. ಆ ರಾಜವಂಶೀಯನು 'ಸ್ವಾಮಿ, ನಮ್ಮ ಒಡೆಯರು ತಮ್ಮನ್ನು ಕರೆತರಬೇಕೆಂದು ನನಗೆ ಹೇಳಿದ್ದಾರೆ. ಅಲ್ಲಿ ಪಂಡಿತರ ಸಭೆ ಸೇರಿದೆ. ತತ್ತ್ವಜಿಜ್ಞಾಸೆ ನಡೆಯುತ್ತದೆ" ಎಂದನು. ಆಗ ಸಿದ್ಧಾರೂಢರು ಆ ಸ್ಥಳಕ್ಕೆ ಬರಲು ಒಪ್ಪಿ ಹೋದರು. ಅರಮನೆಯ

ಸಮೀಪದಲ್ಲಿದ್ದ ಚಿಂತಾಮಣಿ ಎಂಬ ಆಶ್ರಮದಲ್ಲಿ ಪಂಡಿತರ ಸಭೆ ಸೇರಿತ್ತು. ಆರೂಢರು ಒಂದು ಪ್ರವಚನವನ್ನು ನೀಡಿದರು. " ಈ ತಿರುಕ ಸಾಮಾನ್ಯನಲ್ಲ. ನಿಜವಾದ ತತ್ತ್ವಜ್ಞಾನಿ" ಎಂದು ಸರ್ವರೂ ಆರೂಢರನ್ನು ಕೊಂಡಾಡಿದರು.

ಸಿದ್ಧಾರೂಢರು ಸಂಚರಿಸುತ್ತ ದ್ವಾರಕೆಗೆ ಹೋದರು. ಅಲ್ಲೊಂದು ದೇವಾಲಯದಲ್ಲಿ ಕೆಲವು ತತ್ತ್ವಜಿಜ್ಞಾಸುಗಳು ವೇದಾಂತ ಚಿಂತನೆಯಲ್ಲಿ ತೊಡಗಿದ್ದರು. ಆರೂಢರು ಅವರ ಬಳಿ ಹೋಗಿ ಕುಳಿತರು. ಅವರೊಡನೆ ಸಂಭಾಷಿಸುತ್ತ "ಬ್ರಹ್ಮವೊಂದೇ ಸತ್ಯವಾದದ್ದು. ಬ್ರಹ್ಮವನ್ನು ಬಿಟ್ಟು ಇನ್ನೇನೂ ಇಲ್ಲ. ಈ ಜಗತ್ತು ಮಿಥ್ಯೆ. ಬ್ರಹ್ಮಸತ್ಯಂ ಜಗನ್ಮಿಥ್ಯಾ-ಎಂದು ಬಲ್ಲವರು ಹೇಳಿದ್ದಾರೆ" ಎಂದು ನುಡಿದರು. ಅಲ್ಲಿದ್ದ ಒಬ್ಬರು " ಈ ಜಗತ್ತು ಮಿಥ್ಯೆ ಎಂದು ನಂಬುವುದು ಹೇಗೆ ? ಭೂಮಿ, ನೀರು, ಮನೆ, ಮಠ-ಇವೆಲ್ಲವನ್ನು ಕಣ್ಣಿಂದ ನೋಡುತ್ತಿದ್ದೇವೆ. ಅನುಭವಿಸುತ್ತಿದ್ದೇವೆ. ನಮ್ಮ ಎಲ್ಲ ಇಂದ್ರಿಯಗಳೂ ಈ ಜಗತ್ತು ಸತ್ಯವೆಂದು ಸಾರುತ್ತಿವೆ. ಪ್ರತ್ಯಕ್ಷವಾಗಿರುವುದನ್ನು ಇಲ್ಲವೆಂದರೆ ಮಿಥ್ಯೆಯಾಗಿ ಬಿಡುತ್ತದೆಯೇ?" ಎಂದು ಆಕ್ಷೇಪಿಸಿದರು. ಅದಕ್ಕೆ ಆರೂಢರು ಹೀಗೆ ಉತ್ತರಕೊಟ್ಟರು: "ವ್ಯಾವಹಾರಿಕ, ಪ್ರಾತಿಭಾಸಿಕ, ಪಾರಮಾರ್ಥಿಕ-ಎಂದು ಮೂರು ಸ್ಥಿತಿಗಳಿವೆ. ಜನರು ವ್ಯವಹಾರ ಪ್ರಪಂಚದಲ್ಲಿದ್ದಾರೆ. ಈ ಸ್ಥಿತಿಯಲ್ಲಿ ಜಗತ್ತು ಸತ್ಯವಾಗಿರುತ್ತದೆ. ಮಾಡು-ಮಾಡಬೇಡ ಎಂಬ ವಿಧಿ ನಿಷೇಧಗಳು ಈ ವ್ಯಾವಹಾರಿಕ ಸ್ಥಿತಿಗೆ ಸಂಬಂಧಿಸಿದವು. ಇದು ಇಲ್ಲವೆನ್ನಲಾಗುವುದಿಲ್ಲ. ಪ್ರತಿಭಾಸ ಎಂದರೆ ಕನಸು ಮತ್ತು ಭ್ರಮೆ. ಈ ಸ್ಥಿತಿಯಲ್ಲಿ ಎಲ್ಲ ವಸ್ತುಗಳೂ ಇನ್ನೊಂದು ಬಗೆಯಲ್ಲಿ ತೋರುತ್ತವೆ. ಬದುಕಿದವರು ಸತ್ತ ಹಾಗೆಯೂ, ಸತ್ತವರು ಬದುಕಿದ ಹಾಗೆಯೂ ಕಾಣುತ್ತಾರೆ. ನಾವು ಕನಸಿನಲ್ಲಿ ಜಗತ್ತನ್ನು ಹೇಗೆ ಕಾಣುತ್ತೇವೆ? ನಾವು ಆಕಾಶದಲ್ಲಿ ಹಾರಾಡಿದಂತೆ ಕಾಣುತ್ತೇವೆ. ಹುಲಿ ಅಟ್ಟಿಸಿಕೊಂಡು ಬಂದಂತೆ ಕಾಣುತ್ತದೆ. ಕನಸಿನ ಆ ಸ್ಥಿತಿಯಲ್ಲಿ ಅದೆಲ್ಲವೂ ಸತ್ಯವೇ. ನಾವು ಕನಸು

ಕಾಣುತ್ತಿದ್ದೇವೆ ಎಂಬುದು ಗೊತ್ತಾಗುವುದಿಲ್ಲ. ಎಚ್ಚರಾದ ಕೂಡಲೆ ಕನಸಿನ ಎಲ್ಲ ವಸ್ತುಗಳೂ ಮಾಯವಾಗುತ್ತವೆ. ಅವು ಎಲ್ಲಿಂದ ಬಂದವು? ಎಲ್ಲಿಗೆ ಹೋದವು? ಕನಸು ಮಿಥ್ಯೆಯೆಂದು ನಂಬುತ್ತೀರಷ್ಟೆ. ಹಾಗೆಯೇ ದೂರದಲ್ಲಿ ಹಗ್ಗವನ್ನು ನೋಡಿದಾಗ ಹಾವೆಂದು ಭ್ರಾಂತಿ ಬರಬಹುದು. ಈ ಭ್ರಾಂತಿಗೆ ಸಿಕ್ಕಿದವನು ಅಲ್ಲಿ ಹಾವಿದೆ ಎಂದು ತಿಳಿದು ಹೆದರುತ್ತಾನೆ. ಹತ್ತಿರ ಹೋಗಿ ನೋಡಿದಾಗ ಅದು ಹಾವಲ್ಲ, ಹಗ್ಗವೆಂದು ತಿಳಿಯುತ್ತದೆ. ಇವೆಲ್ಲವನ್ನೂ ನಾವೇ ನೋಡಿದ್ದೇವಲ್ಲವೇ? ಮನಸ್ಸಿಗೆ, ಇಂದ್ರಿಯಗಳಿಗೆ ತಿಳಿದಿತ್ತಲ್ಲವೆ? ಹಾಗಿದ್ದರೂ ಅದೆಲ್ಲವೂ ಮಿಥ್ಯೆಯೆಂದು ಹೇಗೆ ಹೇಳುತ್ತೀರೋ ಹಾಗೆಯೇ ವೇದಾಂತಿಗಳು ಈ ಜಗತ್ತೆಲ್ಲವೂ ಮಿಥ್ಯೆಯೆಂದು ತೀರ್ಮಾನಿಸಿದ್ದಾರೆ. ಪಾರಮಾರ್ಥಿಕ ಸ್ಥಿತಿಯಲ್ಲಿ ಜಗತ್ತು ಮಿಥ್ಯೆಯೆಂದು ಗೊತ್ತಾಗುತ್ತದೆ. 'ಸರ್ವಂಖಲ್ವಿದಂ ಬ್ರಹ್ಮ' = ಇದೆಲ್ಲವೂ ಬ್ರಹ್ಮವೇ ಸರಿ. ನೇಹನಾನಾಸ್ತಿ ಕಿಂಚನ = ಬ್ರಹ್ಮವನ್ನು ಬಿಟ್ಟು ಇನ್ನೊಂದು ವಸ್ತುವೇ ಇಲ್ಲ, ಎಂದು ವೇದವು ಸಾರಿ ಹೇಳಿದೆ. ವೇದವು ಸುಳ್ಳೇನು ? ಋಷಿಗಳ ಮಾತು ಸುಳ್ಳಾದೀತೇನು? ಕನಸು ಸುಳ್ಳೆಂದು ಎಚ್ಚರವಾದಾಗ ಹೇಳುವಂತೆ, ಜಗತ್ತು ಸುಳ್ಳೆಂದು ಪಾರಮಾರ್ಥಿಕ ಸ್ಥಿತಿಗೆ ಹೋದಾಗ ಗೊತ್ತಾಗುತ್ತದೆ. ಜಗತ್ತು ಮಿಥ್ಯೆ ಎನ್ನುವುದು ಪಾರಮಾರ್ಥಿಕ ದೃಷ್ಟಿಯಿಂದ" ಎಂದು. ಈ ತತ್ತ್ವಾರ್ಥವನ್ನು ಕೇಳಿ ಅಲ್ಲಿದ್ದವರು ಬೆರಗಾದರು.

ಸಿದ್ಧರು ಉಜ್ಜಯಿನಿಗೆ ಹೋಗಿ ಮಹಾಕಾಳಲಿಂಗವನ್ನು ಪೂಜಿಸಿ, ಮಥುರೆಗೆ ತೆರಳಿ ಗೋಕುಲ, ಬೃಂದಾವನಗಳನ್ನು ನೋಡಿಕೊಂಡು ಶ್ರೀಕೃಷ್ಣನನ್ನು ಧ್ಯಾನಿಸುತ್ತಾ ಕಾಶ್ಮೀರಕ್ಕೆ ಹೋದರು. ಕಾಶ್ಮೀರದ ನಾನಾ ಪುಣ್ಯ ಸ್ಥಳಗಳನ್ನು ಕಂಡು ಪಂಜಾಬಕ್ಕೆ ಹೋದರು. ಅವರ ಪ್ರವಾಸ ಕಾಲದಲ್ಲಿ ಬಹಳ ಮಂದಿ ಸಾಧು ಸಜ್ಜನರ ಭೇಟಿಯಾಯಿತು. ಪಂಡಿತರೊಡನೆ ಚರ್ಚೆ ನಡೆಯಿತು. ಎಲ್ಲರೂ ಈ ಅದ್ಭುತವೈರಾಗಿಯನ್ನು ಮೆಚ್ಚುವವರೇ. ಸಿದ್ಧರು ನಾನಕ ಪೀಠಕ್ಕೆ ಹೋಗಿ ಸಿಕ್ಕರ ಪವಿತ್ರ ಗ್ರಂಥವಾದ

ಗ್ರಂಥಸಾಹೇಬದಲ್ಲಿರುವ ವಿಷಯವನ್ನು ಕೇಳಿ ತಿಳಿದುಕೊಂಡರು. ಅದರಲ್ಲಿ ಪ್ರಣವೋಪಾಸನೆಗೆ ಬಹಳ ಮಹತ್ತ್ವವನ್ನು ನೀಡಲಾಗಿತ್ತು. ಅದು ಸರಿಯಾದ ಕ್ರಮವೆಂದು ಆರೂಢರು ಮನ್ನಿಸಿ ಓಂಕಾರೋಪಾಸನೆಯ ತತ್ತ್ವವನ್ನು ಜನರಿಗೆ ತಿಳಿಸಿಕೊಟ್ಟರು. ಕುರುಕ್ಷೇತ್ರ, ಹರಿದ್ವಾರಗಳನ್ನು ನೋಡಿಕೊಂಡು ಬದರಿಕಾಶ್ರಮಕ್ಕೆ ತೆರಳಿದರು. ಅಲ್ಲಿಂದ ಕೇದಾರೇಶ್ವರಕ್ಕೆ ತೆರಳಿ ನಿರ್ವಿಕಲ್ಪ ಸಮಾಧಿಯಲ್ಲಿ ಮುಳುಗಿದರು. ಬಾಹ್ಯ ಪ್ರಜ್ಞೆಯು ಬಂದ ಮೇಲೆ ಮತ್ತೆ ಅಲ್ಲಿಂದ ಪ್ರಯಾಣ ಮಾಡುತ್ತ ದಾರಿಯಲ್ಲಿ ಅನೇಕ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸುತ್ತ ಕಾಶಿಗೆ ಬಂದರು. ಅಲ್ಲಿ ವಿಶ್ವನಾಥಸ್ವಾಮಿಯ ದರ್ಶನವನ್ನು ಮಾಡಿ ಜ್ಞಾನವಾಪಿಯ ಬಳಿ ವಿಶ್ರಮಿಸಿದರು. ದೇಹವನ್ನು ನೆಲದ ಮೇಲೆ ಚಾಚಿ ಹೆಬ್ಬಾವಿನಂತೆ ಮಲಗಿದರು. ಆಗ ಶಿವಾನಂದ ಸ್ವಾಮಿಯೆಂಬ ಸಂನ್ಯಾಸಿ ಅಲ್ಲಿಗೆ ಬಂದು "ಈತನು ಶವಾಸನದಲ್ಲಿ ಮಲಗಿದ್ದಾನೆ. ಇದೇನು ಯೋಗಾಭ್ಯಾಸವೋ ಅಥವಾ ಸಹಜವಾಗಿ ಬಿದ್ದುಕೊಂಡಿರುವನೋ ನೋಡಬೇಕೆಂದು ಆರೂಢರನ್ನು ಮುಟ್ಟಿದನು. ಅವನ ಹಸ್ತಸ್ಪರ್ಶವಾದಾಗ ಸಿದ್ಧರು ಕಣ್ಣುತೆರೆದರು. ಆಗ ಸಂನ್ಯಾಸಿಯು "ಇದು ಯಾವ ಆಸನ?" ಎಂದು ಪ್ರಶ್ನೆ ಮಾಡಿದನು. ಅದಕ್ಕೆ ಆರೂಢರು "ಯಾವ ಆಸನವೂ ಅಲ್ಲ. ಈ ಶರೀರವೇ ನಾನು ಎಂಬ ಅಹಂಕಾರವಿರತಕ್ಕವನಿಗೆ ಸಾಧನಾವಸ್ಥೆಯಲ್ಲಿ ಆಸನಗಳನ್ನು ಯೋಗಶಾಸ್ತ್ರದಲ್ಲಿ ಹೇಳಿದ್ದಾರೆ. ಯಾವಾತನು ಅಖಂಡ ಬ್ರಹ್ಮಸ್ಥಿತಿಯಲ್ಲಿ ನೆಲೆಸಿರುತ್ತಾನೋ ಅವನಿಗೆ ಯಾವ ಆಸನವೂ ಇಲ್ಲ" ಎಂದರು. ಇವರು ತತ್ತ್ವವನ್ನು ಚೆನ್ನಾಗಿ ಅರಿತವರೆಂದು ಸಂನ್ಯಾಸಿಯು ನಿಶ್ಚಯಿಸಿ ಸಿದ್ಧಾರೂಢರೊಡನೆ ಬ್ರಹ್ಮವಿಚಾರವನ್ನು ನಡೆಸಿದನು.

ಮಾತಿನ ನಡುವೆ ಸಂನ್ಯಾಸಿಯು ಒಂದು ಪ್ರಶ್ನೆ ಹಾಕಿದನು. "ಬಿಂಬ-ಪ್ರತಿಬಿಂಬಗಳಿಗೆ ಭೇದವಿದೆಯೆಂದೂ ಭೇದವಿಲ್ಲವೆಂದೂ ಪಂಡಿತರು ವಾದಿಸುತ್ತಾರೆ. ನಿಮ್ಮ ಅಭಿಪ್ರಾಯವೇನು?" ಅದಕ್ಕೆ ಸಿದ್ಧಾರೂಢರು " ಅದು ಅನಿರ್ವಚನೀಯ. ಭೇದವೂ ತೋರುತ್ತದೆ.

ಅಭೇದವೂ ತೋರುತ್ತದೆ. ನೀವು ದಕ್ಷಿಣಾಭಿಮುಖವಾಗಿ ನಿಂತು ಕನ್ನಡಿಯಲ್ಲಿ ನೋಡಿದರೆ ನಿಮ್ಮ ಪ್ರತಿಬಿಂಬವು ಉತ್ತರಾಭಿಮುಖವಾಗಿರುತ್ತದೆ. ಆದ್ದರಿಂದ ಭೇದವಿದೆ ಎನ್ನಬೇಕಾಗುತ್ತದೆ. ಆದರೆ ನಿಮ್ಮ ಮುಖಬಿಂಬದಂತೆಯೇ ಪ್ರತಿಬಿಂಬವಿರುತ್ತದೆ. ಮುಖದ ಚೇಷ್ಟೆಯಷ್ಟೂ ಪ್ರತಿಬಿಂಬದಲ್ಲಿ ಕಾಣುತ್ತದೆ. ಆಗ ಅಭೇದವೆನ್ನಬೇಕಾಗುತ್ತದೆ. ಭೇದಾಭೇದಗಳು ವಿರುದ್ಧವಾದ್ದರಿಂದ ಇದು ಅನಿರ್ವಚನೀಯವೆಂದು ನಮ್ಮ ಸಿದ್ಧಾಂತವಿದೆ" ಎಂದರು. ಆ ಸಂನ್ಯಾಸಿಗೆ ತುಂಬ ಸಂತೋಷವಾಯಿತು. ಆತನು ತಂದಿದ್ದ ಮಧುಕರಿ ಅನ್ನವನ್ನು ಆರೂಢರಿಗೂ ಹಂಚಿದನು. ಇಬ್ಬರಿಗೂ ಪರಸ್ಪರ ದರ್ಶನದಿಂದ ಪರಮಾನಂದವಾಯಿತು.

ಆರೂಢರು ಗಂಗಾತೀರದಲ್ಲಿ ಸಂಚರಿಸುತ್ತಿದ್ದಾಗ ಒಬ್ಬ ಸಾಧು ದಿಗಂಬರನಾಗಿ ಮಲಗಿರುವುದನ್ನು ಕಂಡರು. ಆತನು ಆರೂಢರನ್ನು ನೋಡಿ "ಎಲೋ ಬೈರಾಗಿ, ಎಲ್ಲವನ್ನೂ ಬಿಟ್ಟ ಬೈರಾಗಿಗೆ ಕೌಪೀನ ಬೇಕಾಯಿತೆ? ಇದೇನು ನಿನ್ನ ವೈರಾಗ್ಯ?" ಎಂದು ಕೇಳಿದನು. ಅದಕ್ಕೆ ಆರೂಢರು " ನೀನು ಯಾವುದನ್ನು ಬಿಟ್ಟಿದ್ದೀಯ? ತಿರುಪೆಗೆ ಹೋದಾಗ ಗಂಡಸರೂ ಹೆಣ್ಣುಮಕ್ಕಳೂ ನಿನ್ನ ರೂಪವನ್ನು ಕಂಡು ಜಿಗುಪ್ಸೆಪಟ್ಟುಕೊಳ್ಳುವುದಿಲ್ಲವೆ? ಲೋಕ ಮರ್ಯಾದೆಗೆ ಲೋಕ ನೀತಿಗೆ ಅಂಜಬೇಡವೆ? ನಾನು ಬೇರೆ–ನೀನು ಬೇರೆ ಎಂದು ದ್ವೈತವನ್ನು ನಂಬಿರುವ ನೀನು ಸತ್ಯವನ್ನರಿತವನಲ್ಲ. "ಕೌಪೀನವಂತಃ ಖಲುಭಾಗ್ಯವಂತಃ" ಎಂದು ಶಂಕರಾಚಾರ್ಯರೇ ಹೇಳಿದ್ದಾರೆ. "ಹೊರಗೆ ಬೆತ್ತಲೆಯಾದರೇನಾಯಿತು? ದ್ವೈತ ಭಾವನೆಯನ್ನೆಲ್ಲ ತೊಡೆದು ಹಾಕಿ ಅಂತಃಕರಣವು ಬೆತ್ತಲೆಯಾಗಬೇಕು" ಎಂದರು. ಆ ಸಾಧು ತನ್ನ ಮಾತಿಗೆ ಪಶ್ಚಾತ್ತಾಪ ಪಡುತ್ತ "ಅಯ್ಯಾ, ನೀನು ಯಾರು?" ಎಂದನು. "ನೀನು ಯಾರೋ ಅವನು ನಾನು!" ಎಂದು ಆರೂಢರು ಉತ್ತರಿಸಿದರು.

೬

## ವಾಗ್ವೈಖರೀ ಶಬ್ದರಘರೀ ಭುಕ್ತಯೇ ನ ತು ಮುಕ್ತಯೇ

*(ವಾಗಾಡಂಬರವು ಭುಕ್ತಿಗೆ, ಮುಕ್ತಿಗಲ್ಲ.)*

ಸಿದ್ಧಾರೂಢರು ದಶಾಶ್ವಮೇಧಘಟ್ಟಕ್ಕೆ ಹೋಗಿ ಒಂದು ದೇವಾಲಯದಲ್ಲಿ ಕುಳಿತಿದ್ದರು. ಅಲ್ಲಿ ಮಹಾದೇವಶಾಸ್ತ್ರಿ ಎಂಬುವರು ಶಿಷ್ಯರಿಗೆ ತರ್ಕ ಸಂಗ್ರಹ-ದೀಪಿಕೆಗಳನ್ನು ಪಾಠಮಾಡುತ್ತಿದ್ದರು. ದ್ರವ್ಯ, ಗುಣ, ಕರ್ಮ-ಮುಂತಾದ ಪದಾರ್ಥಗಳನ್ನು ವಿಭಾಗವಮಾಡಿ ಒಂದೊಂದನ್ನೂ ವಿಶ್ಲೇಷಣೆಮಾಡಿ ಒಳ್ಳೇ ಉತ್ಸಾಹದಿಂದ ತರ್ಕ ವಿಚಾರವನ್ನು ಶಿಷ್ಯರ ತಲೆಗೆ ತುಂಬುತ್ತಿದ್ದರು. ಆರೂಢರು ಅದೆಲ್ಲವನ್ನೂ ಕೇಳುತ್ತ ಕುಳಿತರು. ಪಾಠ ಮುಗಿದಮೇಲೆ ಸಿದ್ಧರು ಮಹಾದೇವಶಾಸ್ತ್ರಿಗಳನ್ನು ಕುರಿತು "ಶಾಸ್ತ್ರಿಗಳೆ, ತರ್ಕಶಾಸ್ತ್ರದಲ್ಲಿ ದ್ರವ್ಯಗುಣಕರ್ಮಾದಿ ಪದಾರ್ಥಗಳ ವಿಚಾರವೇ ಬಹಳ ಬೆಳೆದು ಹೋಗಿದೆ. ಇವೆಲ್ಲವೂ ಜಡವಾದ ಅನಾತ್ಮವಸ್ತುಗಳು. ಇವುಗಳನ್ನು ಅತಿಯಾಗಿ ಶೋಧಿಸುವುದರಿಂದ ಮಾನವನಿಗೆ ಏನು ಪ್ರಯೋಜನ?" ಎಂದು ಕೇಳಿದರು. ಅದಕ್ಕೆ ಶಾಸ್ತ್ರಿಗಳು " ಪದಾರ್ಥಗಳ ತತ್ತ್ವಜ್ಞಾನದಿಂದ ಮೋಕ್ಷವು ದೊರೆಯುತ್ತದೆ" ಎಂದು ತರ್ಕಶಾಸ್ತ್ರವು ಹೇಳುತ್ತದೆ. ತತ್ತ್ವಜ್ಞಾನವಾಗಬೇಕಾದರೆ ದ್ರವ್ಯಾದಿಪದಾರ್ಥಗಳನ್ನು ಹೀಗೆ ವಿಶ್ಲೇಷಿಸಲೇಬೇಕು. ಏಕೆಂದರೆ, "ದುಃಖ-ಜನ್ಮ-ಪ್ರವೃತ್ತಿ-ದೋಷ-ಮಿಥ್ಯಾ-ಜ್ಞಾನಾನಾ ಮುತ್ತರೋತ್ತರಾಪಾಯೇ ತದನಂತರಾಪಾಯಾದಪವರ್ಗಃ" ಎಂದು ತರ್ಕಶಾಸ್ತ್ರದಲ್ಲಿ ಸೂತ್ರವಿದೆ. ಮೊದಲು ಮಿಥ್ಯಾಜ್ಞಾನವು ಹೋಗಬೇಕು. ಪದಾರ್ಥಗಳನ್ನು ಹೀಗೆ ವಿಶ್ಲೇಷಿಸುವುದರಿಂದ ಮಿಥ್ಯಾಜ್ಞಾನವು ತೊಲಗುತ್ತದೆ. ಅದರಿಂದ ಚಿತ್ತಶುದ್ಧಿಯಾಗಿ ಮೋಕ್ಷಕ್ಕೆ ದಾರಿಯಾಗುತ್ತದೆ. ಹೀಗೆ ವಿಶ್ಲೇಷಣೆ ಮಾಡದೆ ಅಜ್ಞಾನವು ತೊಲಗುವುದಿಲ್ಲ ಎಂದರು. ಅದಕ್ಕೆ ಆರೂಢರು ಹೇಳಿದ್ದೇನೆಂದರೆ-"ಶಾಸ್ತ್ರಿಗಳೆ, ಮಿಥ್ಯಾಜ್ಞಾನವು ಹೋಗಬೇಕೆಂಬುದು

ಸರಿಯೇ. ಅದು ಈ ಜಡಪದಾರ್ಥಗಳ ವಿವೇಚನೆಯಿಂದ ಹೋಗುವುದಿಲ್ಲ. ಈ ಜಡವಸ್ತುಗಳು ಅನಂತವಾಗಿದ್ದು ಇವುಗಳ ವಿವೇಚನೆ ಮುಗಿಯುವುದೇ ಇಲ್ಲ. ಆತ್ಮಜ್ಞಾನದಿಂದಲೇ ಮೋಕ್ಷವೆಂದು ವೇದಾಂತವು ಘೋಷಿಸುತ್ತಿದೆ. 'ನಾನ್ಯಃ ಪಂಥಾ ವಿದ್ಯತೇಽಯನಾಯ' ಆತ್ಮಜ್ಞಾನವನ್ನು ಬಿಟ್ಟು ಮೋಕ್ಷಕ್ಕೆ ಬೇರೆ ದಾರಿಯೇ ಇಲ್ಲ. 'ಬ್ರಹ್ಮವಿದ್ ಬ್ರಹ್ಮೈವ ಭವತಿ' ಎಂದು ಉಪನಿಷತ್ತು ಸಾರಿದೆ. ಬ್ರಹ್ಮವಾಗುವುದೆಂದರೆ ಬ್ರಹ್ಮವಿದನಾಗಬೇಕು. ಜೀವನು ಬ್ರಹ್ಮನಾಗಿಯೇ ಇದ್ದಾನೆ. ಅಜ್ಞಾನದಿಂದ ತಾನು ಬೇರೆಯೆಂದು ಭಾವಿಸಿ ಸಂಸಾರದಲ್ಲಿ ತೊಳಲುತ್ತಾನೆ. ಈ ಅಜ್ಞಾನವು ಆತ್ಮಸಂಬಂಧಿಯಾದದ್ದು. ಆತ್ಮನ ವಿಷಯದಲ್ಲಿರುವ ಅಜ್ಞಾನವು ಆತ್ಮನ ಸಮ್ಯಗ್ ಜ್ಞಾನದಿಂದ ತೊಲಗುತ್ತದೆ. ಪೃಥಿವೀ, ಜಲ ಮುಂತಾದ್ದನ್ನು ವಿವೇಚಿಸಿದರೆ ಆತ್ಮಜ್ಞಾನವಾಗುತ್ತದೆಯೇ? ಘಟವನ್ನು ತಿಳಿದರೆ ಪಟದ ಜ್ಞಾನವಾಗುತ್ತದೆಯೆ? 'ಅಥಾತೋ ಬ್ರಹ್ಮಜಿಜ್ಞಾಸಾ' ಎಂಬ ಬ್ರಹ್ಮಸೂತ್ರವು ಬ್ರಹ್ಮವನ್ನು ತಿಳಿಯಬೇಕೆಂದು ಬೋಧಿಸುತ್ತದೆಯೋ ಹೊರತು ಜಗತ್ತನ್ನು ತಿಳಿಯಬೇಕೆಂದು ಬೋಧಿಸುವುದಿಲ್ಲ" ಎಂದು ನುಡಿದರು. ಮಹಾದೇವಶಾಸ್ತ್ರಿಗಳು ವಿಸ್ಮಿತರಾಗಿ "ಸಾಧುಗಳೆ, ನೀವು ಹೇಳಿದ್ದು ನಿಜ. ಆದರೆ ತರ್ಕಶಾಸ್ತ್ರವು ಈ ರೀತಿ ಇದೆ. ತರ್ಕಶಾಸ್ತ್ರದ ಉಪಾಧ್ಯಾಯರಾದ ನಾವು ಅದನ್ನು ಪಾಠಮಾಡಬೇಕಾಗಿದೆ. ಮುಂದೆ ವೇದಾಂತವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ತರ್ಕಶಾಸ್ತ್ರವು ಸಹಾಯ ಮಾಡುತ್ತದೆ" ಎಂದರು. ಅದನ್ನು ಕೇಳಿ ಸಿದ್ಧಾರೂಢರು ಮಂದಹಾಸಬೀರಿದರು.

ಸಿದ್ಧಾರೂಢರು ಕಾಶಿಯಿಂದ ಗಯೆಯ ಕಡೆಗೆ ಹೊರಟರು. ಹೋಗುವಾಗ ಭಾರಿ ಮಳೆ ಪ್ರಾರಂಭವಾಯಿತು. ಸಮೀಪದಲ್ಲಿ ಮೊಗಲಸರಾಯಿಯಲ್ಲಿ ಒಬ್ಬ ಸಾಹುಕಾರನ ದೊಡ್ಡಮನೆ ಕಾಣಿಸಿತು. ಆರೂಢರು ಆಶ್ರಯಕ್ಕಾಗಿ ಅಲ್ಲಿಗೆ ಹೋಗಿ ಆ ಮನೆಯ ಮೆಟ್ಟಿಲಿನ ಮೇಲೆ ಕುಳಿತಿದ್ದರು. ಸ್ವಲ್ಪ ಹೊತ್ತಿಗೆ ಒಬ್ಬ ಕಾವಲುಗಾರನು ಬಂದು "

ಯಾರು ನೀನು? ಏಕೆ ಬಂದೆ?" ಎಂದು ಕೇಳಿದನು. ಆರೂಢರು" ಅಯ್ಯಾ, ನಾನೊಬ್ಬ ತಿರುಕ. ಮಳೆ ಬಂದಿತು. ಆಸರೆಗಾಗಿ ಇಲ್ಲಿಗೆ ಬಂದೆ" ಎಂದರು. ಕಾವಲುಗಾರನು "ದಾರಿಯಲ್ಲಿ ಹೋಗತಕ್ಕವರೆಲ್ಲಾ ಇಲ್ಲಿಗೆ ಬರಬಹುದೆ? ಈ ಮನೆ ಏನೆಂದು ತಿಳಿದಿದ್ದೀಯೆ?" ಎಂದು ಗದರಿಸಿದನು. ಆರೂಢರು ಶಾಂತವಾಗಿ "ಇದೊಂದು ಮುಸಾಫಿರ್ ಖಾನೆ (ಅತಿಥಿ ಗೃಹ) ಎಂದು ತಿಳಿದಿದ್ದೇನೆ" ಎಂದರು! ಕಾವಲುಗಾರನು ಆ ಮಾತನ್ನು ಕೇಳಿ ಗಟ್ಟಿಯಾಗಿ ಗದರಿಸಿದನು. ಈ ಗದ್ದಲವನ್ನು ಕೇಳಿ ಮನೆಯ ಸಾಹುಕಾರನು ಹೊರಗೆ ಬಂದು ವಿಷಯವೇನೆಂದು ತಿಳಿದುಕೊಂಡು ಈ ಮನೆಯನ್ನು ಮುಸಾಫಿರ್ ಖಾನೆಯೆಂದೇಕೆ ಹೇಳಿದಿರಿ?" ಎಂದು ಕೇಳಿದನು. ಆರೂಢರು ಶಾಂತಮುದ್ರೆಯಿಂದ "ಅಪ್ಪಾ, ಹಿಂದೆ ಈ ಮನೆಯಲ್ಲಿ ಯಾರಿದ್ದರು?" ಎಂದು ಕೇಳಿದಾಗ ಸಾಹುಕಾರನು ನನ್ನ ಮುತ್ತಜ್ಜ ಎಂದನು. "ಆಮೇಲೆ"? "ಆಮೇಲೆ ನನ್ನ ಅಜ್ಜ." "ಅನಂತರ?" "ಅನಂತರ ನನ್ನ ತಂದೆ, ಆಮೇಲೆ ನಾನು" "ನಿನ್ನ ತರುವಾಯ?" "ನನ್ನ ಮಕ್ಕಳು" ಎಂದು ಸಾಹುಕಾರನು ಹೇಳಿದನು. ಅದಕ್ಕೆ ಸಿದ್ಧಾರೂಢರು ನಗುತ್ತ "ಹೀಗೆ ಒಬ್ಬರಾದ ಮೇಲೆ ಒಬ್ಬರು ಬರುತ್ತಿದ್ದರೆ ಇದು ಮುಸಾಫಿರ್ ಖಾನೆಯಲ್ಲದೆ ಮತ್ತೇನು?" ಎಂದರು. ಸಾಹುಕಾರನು ಈ ಮಾತಿನಿಂದ ವಿಸ್ಮಿತನಾಗಿ ಆರೂಢರಿಗೆ ನಮಸ್ಕರಿಸಿ ವಿನೀತಭಾವದಿಂದ ಮನೆಯೊಳಗೆ ಕರೆದುಕೊಂಡು ಹೋಗಿ ಒಂದು ಪೀಠದಲ್ಲಿ ಕುಳ್ಳಿರಿಸಿ ಭಕ್ತಿಯಿಂದ ಉಪಚರಿಸಿದನು. ಸಾಹುಕಾರನ ತಾಯಿ ಹೊಟ್ಟೆನೋವಿನಿಂದ ಬಳಲುತ್ತಿದ್ದಳು. ಯಾವ ಚಿಕಿತ್ಸೆಯಿಂದಲೂ ಗುಣವಾಗಿರಲಿಲ್ಲ. ಆಕೆಯನ್ನು ಸಿದ್ಧರ ಬಳಿಗೆ ಕರೆದುಕೊಂಡು ಬಂದು ತೋರಿಸಿ ಪರಿಹಾರವೇನೆಂದು ಕೇಳಿದನು. ಅದಕ್ಕೆ ಸಿದ್ಧರು "ಇದು ಪೂರ್ವಜನ್ಮದಲ್ಲಿ ಮಾಡಿದ ಕರ್ಮದ ಫಲ. ಔಷಧದಿಂದ ಗುಣವಾಗದಿದ್ದರೆ ಶಿವಪೂಜಾದಿಗಳಿಂದ ಗುಣವಾಗುತ್ತದೆ. ಮಹಾತ್ಮರು ಕೊಡುವ ಪಾದತೀರ್ಥ ಮೊದಲಾದ್ದರಿಂದಲೂ ಶಮನವಾಗಬಹುದು. ಶಾಸ್ತ್ರದಲ್ಲಿ–

ಪೂರ್ವಜನ್ಮಕೃತಂ ಪಾಪಂ ವ್ಯಾಧಿರೂಪೇಣ ಬಾಧತೇ ।

ತಚ್ಛಾಂತಿರೌಷಧೈರ್ಮಂತ್ರೈರ್ಜಪಹೋಮಸುರಾರ್ಚನೈಃ ॥
ಎಂದು ಹೇಳಿದೆ. ಆದ್ದರಿಂದ ಜಪಾದಿಗಳನ್ನು ಮಾಡಿಸು" ಎಂದರು. ಅದಕ್ಕೆ ಸಾಹುಕಾರನು "ಪೂಜ್ಯರೆ, ನಿಮ್ಮಂತಹ ಮಹಾತ್ಮರು ಇನ್ನೆಲ್ಲಿ ದೊರೆಯುತ್ತಾರೆ? ನೀವೇ ಅನುಗ್ರಹಿಸಬೇಕು" ಎಂದು ಬೇಡಿಕೊಂಡನು. ಆರೂಢರು ಆತನ ವಿನಯಭಕ್ತಿಗಳಿಗೆ ಮನಸೋತು ತಮ್ಮ ಪಾದೋದಕವನ್ನು ಶಿವಸ್ಮರಣೆ ಮಾಡುತ್ತ ಸಾಹುಕಾರನ ತಾಯಿಗೆ ಕುಡಿಸಿದರು. ಶಿವಧ್ಯಾನ ಮಾಡುತ್ತಿರುವಂತೆ ತಿಳಿಸಿದರು. ಆ ವೃದ್ಧೆಗೆ ಹೊಟ್ಟೆನೋವು ಪೂರ್ತಿ ಗುಣವಾಯಿತು. ಸಾಹುಕಾರನ ಒತ್ತಾಯಕ್ಕೆ ಸಿದ್ಧರು ಆ ರಾತ್ರಿ ಅಲ್ಲಿಯೇ ಉಳಿದರು. ಊಟಕ್ಕೆ ಮೃಷ್ಟಾನ್ನವನ್ನು ಬಡಿಸಿದ್ದರು. ಸಿದ್ಧರು ಹಿತಮಿತವಾದ ಆಹಾರವನ್ನು ಸೇವಿಸಿ ಎದ್ದರು. ಮೃದುಶಯ್ಯೆಯಲ್ಲಿ ಸಾಹುಕಾರನು ಅವರನ್ನು ಮಲಗಿಸಿದನು. ಅನಂತರ ಸಿದ್ಧರು ತಮ್ಮಲ್ಲಿಯೇ ಆಲೋಚಿಸಿದರು. "ಈ ಭೋಗಸಾಮಗ್ರಿಯು ನಮ್ಮಂಥವರಿಗಲ್ಲ. ಇದು ಮನಸ್ಸನ್ನು ಕೆಡಿಸುತ್ತದೆ. ಇನ್ನೂ ಬೇಕು, ಮತ್ತೂ ಬೇಕು ಎಂದು ಆಶೆಯನ್ನು ಹುಟ್ಟಿಸುತ್ತದೆ. ಆಶೆಗೆ ವಶನಾದರೆ ಮಾನವನ ಮೋಕ್ಷದ ಆಶೆಯೇ ಮುಗಿದಂತೆ. ನನಗೆ ಭಿಕ್ಷಾನ್ನ, ರಾತ್ರಿ ಮಲಗಲು ಒಂದು ನೆರಳು-ಇಷ್ಟು ಸಾಕು" ಎಂದು. ಬೆಳಗಾಗುವುದರೊಳಗಾಗಿ ಸಿದ್ಧರು ಎದ್ದು ಯಾರಿಗೂ ತಿಳಿಸದೆ ಆ ಮನೆಯಿಂದ ತೆರಳಿದರು.

ಅನಂತರ ಗಯೆಗೆ ಹೋಗುವಾಗ ದಾರಿಯಲ್ಲಿ ಒಂದು ಶಿವಾಲಯವಿತ್ತು. ಸಿದ್ಧರು ಅಲ್ಲಿಗೆ ಹೋದಾಗ ಶಿವಪೂಜಾ ಸಮಯ ವಾಗಿತ್ತು. ಗಾಯಕರು ಭೈರವೀ ರಾಗದಿಂದ ಶಿವಸ್ತೋತ್ರವನ್ನು ಹಾಡ ಲಾರಂಭಿಸಿದರು. ಸಿದ್ಧರು ಅವರನ್ನು ಕುರಿತು "ಶಂಕರಾಭರಣರಾಗದಿಂದ ಹಾಡಿರಿ. ಶಂಕರನಿಗೆ ಆ ರಾಗವು ಇಷ್ಟವಾದದ್ದು" ಎಂದು ತಿಳಿಸಿ ಶಂಕರಾಭರಣರಾಗದ ಮೇಲೆ ಕೆಲವು ಮಾತುಗಳನ್ನಾಡಿದರು. ಅಲ್ಲಿಂದ ಗಯೆಗೆ ಹೋಗಿ ವಿಷ್ಣುಪಾದಗಳನ್ನು ಕಂಡು, ನಾನಾ ಕ್ಷೇತ್ರಗಳನ್ನು

ಸಂದರ್ಶಿಸುತ್ತ ಜಗನ್ನಾಥಪುರಿಗೆ ಬಂದರು. ಸಮೀಪದಲ್ಲಿ ಸಮುದ್ರದ ದಂಡೆಯ ಮೇಲಿದ್ದ ಕಬೀರದಾಸರ ಮಂದಿರಕ್ಕೆ ಆಗಮಿಸಿದರು. ಅಲ್ಲಿ ಶ್ರೀರಾಮಭಜನೆ ನಡೆಯುತ್ತಿತ್ತು. ಆರೂಢರಿಗೆ ಪರಮಸಂತೋಷವಾಯಿತು. ಭಜನೆಯಲ್ಲಿ ತೊಡಗಿದ್ದ ಭಕ್ತಜನರನ್ನುದ್ದೇಶಿಸಿ "ರಾಮನಾಮವು ಬಹಳ ಪವಿತ್ರವಾದದ್ದು. ಇದಕ್ಕೆ ತಾರಕಮಂತ್ರವೆಂದು ಖ್ಯಾತಿ ಇದೆ. ನಾಮೋಚ್ಚಾರಣೆ ಮಾಡತಕ್ಕವರನ್ನು ಭವಬಂಧನದಿಂದ ತಾರಣ ಮಾಡುತ್ತದೆ. ತಾರಣವೆಂದರೆ ಭವಭಯದಿಂದ ಉದ್ಧರಿಸುವುದು. ಈಶ್ವರನು ವಾಲ್ಮೀಕಿ ರಾಮಾಯಣವನ್ನು ಮೂರುಲೋಕಗಳಿಗೂ ಹಂಚಿಕೊಟ್ಟು 'ರಾಮ' ಎಂಬ ಎರಡು ಅಕ್ಷರಗಳನ್ನು ತಾನು ಇಟ್ಟುಕೊಂಡನಂತೆ. ಭುಕ್ತಿಮುಕ್ತಿಗಳೆರಡೂ ರಾಮಜಪದಿಂದ ಲಭಿಸುತ್ತವೆ. ಅಷ್ಟು ಮಹಿಮೆಯುಳ್ಳದ್ದು ರಾಮನಾಮ" ಎಂದು ಉಪದೇಶಿಸಿದರು.

ಮುಂದೆ ದಾರಿಯಲ್ಲಿ ಒಂದು ನದೀಪ್ರವಾಹವು ಎದುರಾಯಿತು. ಅಂಬಿಗನು ಶುಲ್ಕವನ್ನು ತೆಗೆದುಕೊಂಡು ದೋಣಿಯಲ್ಲಿ ನದಿಯನ್ನು ದಾಟಿಸುತ್ತಿದ್ದನು. ಸಿದ್ಧರ ಬಳಿ ಒಂದು ಕಾಸು ಕವಡೆಯೂ ಇರಲಿಲ್ಲ. ಅವರು ಅಂಬಿಗನಿಗೆ "ಅಯ್ಯಾ, ನನ್ನಲ್ಲಿ ಒಂದು ಕಾಸೂ ಇಲ್ಲ. ಲಂಗೋಟಿಯೊಂದೇ ನನ್ನ ಆಸ್ತಿ. ನನ್ನನ್ನು ದೋಣಿಯಲ್ಲಿ ಉಚಿತವಾಗಿ ದಾಟಿಸು. ದೇವರು ನಿನಗೆ ಒಳ್ಳೆಯದನ್ನು ಮಾಡುತ್ತಾನೆ" ಎಂದರು. ಅಂಬಿಗನು ಹಾಗೆಯೇ ಹೊಳೆದಾಟಿಸಿದನು. ಸಿದ್ಧರು ಹೊಳೆದಾಟಿದಮೇಲೆ ಆ ದಡದಲ್ಲಿಯೇ ಧ್ಯಾನಾರೂಢರಾದರು. ಆ ದಿನ ಅಂಬಿಗನಿಗೆ ಅಧಿಕಗಿರಾಕಿಗಳು ದೊರೆತು ಬಹಳ ಲಾಭವಾಯಿತು. ಇದೆಲ್ಲ ಈ ಮಹಾತ್ಮನ ಮಹಿಮೆಯಿಂದಲೇ ಎಂದು ಬಗೆದು ಆತನು ಒಂದು ಉಡುವ ಹೊಸ ಧೋತ್ರವನ್ನು ತಂದು ಸಿದ್ಧರಿಗೆ ಭಕ್ತಿಯಿಂದ ಅರ್ಪಿಸಿದನು. ಸಿದ್ಧರು ಒಂದು ಕೌಪೀನಕ್ಕಾಗುವಷ್ಟು ಬಟ್ಟೆಯನ್ನು ತೆಗೆದುಕೊಂಡು ಉಳಿದದ್ದನ್ನು ಅಂಬಿಗನಿಗೆ ಕೊಟ್ಟುಬಿಟ್ಟರು. ಎಂತಹ ಪರಮವೈರಾಗ್ಯ ಸಿದ್ಧರದು!

ಅನಂತರ ಓರಿಸ್ಸಾ ರಾಜ್ಯದಲ್ಲಿ ಸಿಂಹಾಚಲಕ್ಕೆ ಹೋಗಿ ನರಸಿಂಹ

ಸ್ವಾಮಿಯ ದರ್ಶನ ಮಾಡಿದರು. ಅನಂತರ ದೇವಾಲಯದ ಹೊರಗಿರುವ ಗೋಮುಖತೀರ್ಥದ ಬಳಿ ಕುಳಿತಿರಲು ಜನರ ಕೋಲಾಹಲ ಧ್ವನಿ ಕೇಳಿಸಿತು. ಸಂದರ್ಭವೇನೆಂದರೆ, ಒಬ್ಬ ಮಾರವಾಡಿ ಗೃಹಸ್ಥನು ಬಹಳ ಕಾಲದಿಂದ ರೋಗಗ್ರಸ್ತನಾಗಿದ್ದನು. ಯಾವ ಚಿಕಿತ್ಸೆಗೂ ರೋಗಬಾಧೆಯನ್ನು ತಡೆಯಲಾರದೆ, ಎತ್ತರವಾದ ಸ್ಥಳದಿಂದ ಧುಮುಕಿ ಸಾಯಬೇಕೆಂದು ಬಂದಿದ್ದನು. ಅವನನ್ನು ಆತ್ಮಹತ್ಯಾದೋಷದಿಂದ ಪಾರುಮಾಡಿ ಉಳಿಸಬೇಕೆಂದು ಅವರೆಲ್ಲರೂ ಬಂದುದಾಗಿತ್ತು. ಆ ಸುದ್ದಿಯನ್ನು ಕೇಳಿ ಸಿದ್ಧರು ಮಾರವಾಡಿಗೆ ಬುದ್ಧಿಹೇಳಬೇಕೆಂದು ನಿಶ್ಚಯಿಸಿ, "ಅವನನ್ನು ಇಲ್ಲಿಗೆ ಕರೆದುಕೊಂಡು ಬನ್ನಿರಿ. ಅವನನ್ನು ಸರಿಪಡಿಸುತ್ತೇನೆ" ಎಂದರು. ಮಾರವಾಡಿಯ ಹೆಂಡತಿ ಮಕ್ಕಳ ರೋದನ ಧ್ವನಿ ಗಗನವನ್ನು ಮುಟ್ಟಿತ್ತು. ಮಾರವಾಡಿಯನ್ನು ಜನರು ಸಿದ್ಧರ ಬಳಿಗೆ ಕರೆದುಕೊಂಡು ಬಂದರು. ಆರೂಢರು ಆತನನ್ನು ಕುರಿತು " ಅಯ್ಯಾ, ಆತ್ಮಹತ್ಯೆ ಮಹಾಪಾಪದಲ್ಲಿ ಸೇರುತ್ತದೆ. ಬದುಕಿದ್ದರೆ ಎಷ್ಟೋ ಒಳ್ಳೆಯ ಕಾರ್ಯಗಳನ್ನು ಮಾಡಬಹುದು. 'ಜೀವನ್ ಭದ್ರಾಣಿ ಪಶ್ಯತಿ' ಎಂದು ಸುಭಾಷಿತವಿದೆ. ಬದುಕಿದ್ದರೆ ಒಳ್ಳೆಯದನ್ನು ಕಾಣಬಹುದು" ಎಂದರು. ಆತನು, "ಸ್ವಾಮಿ, ಈ ರೋಗದಿಂದ ನರಳುವುದಕ್ಕಿಂತ ಸಾಯುವುದು ಉತ್ತಮ. ಯಾವ ಸುಖಕ್ಕಾಗಿ ಬದುಕಲಿ? ಸಾಯಬೇಕೆಂದು ನಿಶ್ಚಯಿಸಿದ್ದೇನೆ" ಎಂದನು. ಆರೂಢರು, "ನಿನಗೆ ಈ ರೋಗದಿಂದ ಯಾವ ತೊಂದರೆ ಆಗುತ್ತದೆ?" ಎಂದು ಕೇಳಲಾಗಿ, ಅವನು ರೋಗದ ಕಷ್ಟವನ್ನು ಹೇಳಿಕೊಂಡನು. ಮಹಾತ್ಮರಾದ ಸಿದ್ಧರು "ಅಯ್ಯಾ, ಮನುಷ್ಯಜನ್ಮವು ಶ್ರೇಷ್ಠವಾದದ್ದು. ಇತರ ಪ್ರಾಣಿಗಳಿಗಿಂತ ಮನುಷ್ಯನಲ್ಲಿ ಹೆಚ್ಚಾದ ವಿವೇಚನಶಕ್ತಿ ಇದೆ. ಎಲ್ಲ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೂ ಇವನ ಇಚ್ಛೆಯಂತೆ ನಡೆಯಲು ಸಿದ್ಧವಾಗಿವೆ. ಈ ನರಜನ್ಮವು ಬಂದಾಗ ಅದನ್ನು ಸಾರ್ಥಕ ಮಾಡಿಕೊಳ್ಳಬೇಕು. ಆತ್ಮಹತ್ಯೆ ಮಾಡಿಕೊಂಡರೆ ಈ ಶ್ರೇಷ್ಠವಾದ ಜನ್ಮವನ್ನು ನಾಶಮಾಡಿಕೊಂಡಂತಾಗುವುದು. ಆತ್ಮಹತ್ಯೆ ಸರಿಯಲ್ಲ. ನಾನು ಹೇಳುವುದನ್ನು ಕೇಳು" ಎಂದು ನುಡಿದು ಆ ಮಾರವಾಡಿಯನ್ನು

ತಾವೇ ಕೈಹಿಡಿದು ಗೋಮುಖತೀರ್ಥದ ದಂಡೆಯ ಮೇಲೆ ಕುಳ್ಳಿರಿಸಿದರು. ಅನಂತರ ತಾವೇ ತೀರ್ಥಜಲವನ್ನು ಬೊಗಸೆಯಲ್ಲಿ ತಂದು ಓಂಕಾರವನ್ನುಚ್ಚರಿಸುತ್ತ ಮಾರವಾಡಿಯ ತಲೆಯಮೇಲೆ ಸುರಿಯುತ್ತಿದ್ದರು. ಹೀಗೆ ಕೆಲವು ಸಲ ಮಾಡಲಾಗಿ ಮಾರವಾಡಿಯ ಬೇನೆ ಕಡಿಮೆಯಾಯಿತು. ಅವನು ಪೂಜ್ಯಭಾವದಿಂದ ಆರೂಢರನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಪೂಜಿಸಿದನು. ಅಷ್ಟರಲ್ಲಿ ಅವನ ರೋಗಪೀಡೆ ಪೂರ್ಣವಾಗಿ ಹಿಂದಕ್ಕೆ ಸರಿದಿತ್ತು. ಮಾರವಾಡಿಯು ತನ್ನ ಧನಕನಕವಸ್ತುಗಳನ್ನೆಲ್ಲಾ ಆರೂಢರಿಗೆ ಅರ್ಪಿಸುತ್ತೇನೆ ಎಂದನು. ಅದಕ್ಕೆ ಅವಧೂತರು "ಬೇಡ. ನನಗೆ ಹಣದಿಂದ ಆಗಬೇಕಾದ್ದೇನೂ ಇಲ್ಲ. ಮತ್ತೆ ಈ ರೋಗಬರದಂತೆ ಇರು. ನಿನ್ನ ಆದಾಯದಲ್ಲಿ ಅರ್ಧಭಾಗವು ನನಗೆ ಸಲ್ಲತಕ್ಕದ್ದೆಂದು ಭಾವಿಸಿ, ಅದೆಲ್ಲವನ್ನೂ ಯೋಗ್ಯರಾದ ಬಡಬಗ್ಗರಿಗೆ ದಾನಮಾಡು. ಉಳಿದ ಅರ್ಧದಲ್ಲಿ ನಿನ್ನ ಸಂಸಾರದ ರಥ ಸಾಗಲಿ" ಎಂದು ಹಿತೋಪದೇಶ ಮಾಡಿ ಅಲ್ಲಿಂದ ನಿರ್ಗಮಿಸಿದರು.

ಹೀಗೆ ಸಿದ್ಧಾರೂಢರ ತೀರ್ಥಯಾತ್ರೆಯು ಬೇರೆ ಬೇರೆ ಸ್ಥಳಗಳನ್ನು ನೋಡುವ ಕುತೂಹಲದಿಂದ ನಡೆಯಲಿಲ್ಲ. ಅವರು ಎಲ್ಲ ಯಾತ್ರಾರ್ಥಿಗಳಂತೆ ಹೊರಟಿರಲಿಲ್ಲ. ಲೋಕಯಾತ್ರೆಗೆ ಬಂದವರ ಕಷ್ಟವನ್ನು ನೀಗಿಸುವುದು, ಜ್ಞಾನೋಪದೇಶ ಮಾಡುವುದು-ಎಂಬ ಎರಡು ಘನೋದ್ದೇಶಗಳಿಂದ ಯಾತ್ರೆಯನ್ನು ನಡೆಸಿದರು. ಮಂಗಲಗಿರಿ ಎಂಬ ಒಂದು ಬೆಟ್ಟವನ್ನು ಹತ್ತಿ ದೇವದರ್ಶನ ಮಾಡಿ ಇಳಿದು ಬರುತ್ತಿರುವಾಗ ದೂರದಲ್ಲೊಂದು ಗುಹೆ ಕಾಣಿಸಿತು. ಸಿದ್ಧರು ಅಲ್ಲಿಗೆ ಹೋದರು. ಒಬ್ಬ ಬ್ರಾಹ್ಮಣನು ವಿಚಿತ್ರವಾದ ಉಪಕರಣಗಳನ್ನಿಟ್ಟುಕೊಂಡು ವಿಚಿತ್ರವಾಗಿ ಅಂಗಗಳಿಂದ ಅಭಿನಯಮಾಡುತ್ತ ಬಾಯಲ್ಲಿ ಯಾವುದೋ ಮಂತ್ರವನ್ನು ಉಚ್ಚರಿಸುತ್ತಿದ್ದನು. ಸಿದ್ಧರು ಆತನನ್ನು ಕುರಿತು "ಓ ಬ್ರಾಹ್ಮಣ, ನೀನು ಮಾಡುತ್ತಿರುವುದೇನು?" ಎಂದರು. ಆತನು ವಶೀಕರಣಾದಿ ಸಿದ್ಧಿಗಳಿಗಾಗಿ ಆ ಅನುಷ್ಠಾನಗಳನ್ನು ನಡೆಸುತ್ತಿರುವುದಾಗಿ ತಿಳಿಸಿದನು. ಆಗ ಸಿದ್ಧರು ಹೇಳಿದ್ದೇನೆಂದರೆ "ಅಯ್ಯಾ, ನೀನು ಬ್ರಾಹ್ಮಣನಾಗಿ ಹುಟ್ಟಿದ್ದೀಯೆ.

ಬ್ರಹ್ಮವನ್ನರಿತವನು ಬ್ರಾಹ್ಮಣ ಎನ್ನಿಸಿಕೊಳ್ಳುತ್ತಾನೆ. ನೀನು ಆ ಹೆಸರಿಗೆ ಸಾರ್ಥಕ್ಯವನ್ನು ತಂದುಕೊಳ್ಳದೆ ಈ ಕ್ಷುದ್ರಸಿದ್ಧಿಯನ್ನು ಗಳಿಸುವುದಕ್ಕೆ ತೊಡಗಿದ್ದೀಯಲ್ಲ. ಈ ಸಿದ್ಧಿಯಿಂದ ನಿನಗೇನು ಪ್ರಯೋಜನ? ಇದರಿಂದ ದೊರೆಯುವ ಫಲವೆಲ್ಲವೂ ನಶ್ವರವಾದದ್ದು. ಅಲ್ಲದೆ ವಶೀಕರಣವಿದ್ಯೆ ಮೊದಲಾದ್ದರಿಂದ ಪಾಪವೇ ಸಂಘಟಿಸುತ್ತದೆ. ಪಾಪಕ್ಕೆ ಫಲವೇನೆಂಬುದು ಗೊತ್ತಿದೆಯಷ್ಟೆ? ಶ್ರೌತ, ಸ್ಮಾರ್ತಾದಿ ನಿತ್ಯ ಕರ್ಮಗಳನ್ನು ಮಾಡತಕ್ಕವರು ಸಹ ಪುಣ್ಯಲೋಕವಾದ ಸ್ವರ್ಗಕ್ಕೆ ಹೋದರೂ ಮತ್ತೆ ವಾಪಸ್ಸು ಬರಲೇಬೇಕು. "ಕ್ಷೀಣ್ಯೇ ಪುಣ್ಯೇ ಮರ್ತ್ಯಲೋಕಂ ವಿಶಂತಿ" ಮತ್ತೆ ಕರ್ಮ ಮಾಡುವುದು, ಕರ್ಮಫಲವಾದ ಸುಖವನ್ನೋ, ದುಃಖವನ್ನೋ ಅನುಭವಿಸುವುದಕ್ಕಾಗಿ ಮತ್ತೆ ಹುಟ್ಟುವುದು. 'ಜಾಯಸ್ವ ಮ್ರಿಯಸ್ವ' (ಹುಟ್ಟು ಸಾಯಿ) ಎಂಬುದು ತಪ್ಪುವುದೇ ಇಲ್ಲ. ಆದ್ದರಿಂದ ಆತ್ಮಜ್ಞಾನವನ್ನು ಗಳಿಸಿ ಶಾಶ್ವತವಾದ ಮೋಕ್ಷ ಸುಖಕ್ಕಾಗಿ ಪ್ರಯತ್ನಿಸು" ಎಂದರು. ಆ ಬ್ರಾಹ್ಮಣನಿಗೆ ಪಶ್ಚಾತ್ತಾಪವಾಯಿತು. "ಈ ವಿದ್ಯೆಯನ್ನು ಹೇಳಿಕೊಟ್ಟವರು ಇದರ ದೋಷವನ್ನೇ ತಿಳಿಸಲಿಲ್ಲ" ಎಂದನು. "ಅಯ್ಯಾ, ಗುರುವನ್ನು ಪರೀಕ್ಷಿಸದೆ ಶಿಷ್ಯನಾದ ತಪ್ಪು ನಿನ್ನದೇ" ಎಂದು ಆರೂಢರು ಹೇಳಿದರು. ಈ ದೋಷವೆಲ್ಲವೂ ಪರಿಹಾರವಾಗಿ ಚಿತ್ತಶುದ್ಧಿಯಾಗಲು ನಾನೇನು ಮಾಡಬೇಕೆಂದು ಆತನು ಕೇಳಿದನು. ಆರೂಢರು "ನಿನಗೆ ಗಾಯತ್ರೀ ಮಂತ್ರದ ಉಪದೇಶವಾಗಿದೆ. ನಿತ್ಯವೂ ಇಪ್ಪತ್ತುನಾಲ್ಕುಸಾವಿರ ಗಾಯತ್ರೀ ಮಂತ್ರ ಜಪವನ್ನು ಮಾಡುತ್ತಿರು. ಈ ಪ್ರಕಾರ ನೀನು ಜಪಿಸುತ್ತಿದ್ದರೆ ನಿನಗೆ ಚಿತ್ತಶುದ್ಧಿಯಾಗುವುದು. ಸದ್ಗುರುವೂ ಲಭಿಸುವನು" ಎಂದರು. ಆ ಬ್ರಾಹ್ಮಣನು ಸಿದ್ಧರ ಪಾದಗಳಿಗೆ ವಂದಿಸಿದನು.

ಈ ಪ್ರಕಾರವಾಗಿ ಸಿದ್ಧರು ಭರತಖಂಡವನ್ನೆಲ್ಲ ಸಂಚರಿಸಿ ವಿಜಾಪುರಕ್ಕೆ ಬಂದರು. ಅಲ್ಲಿ ಕೆಲವು ಕಾಲ ಇದ್ದರು. ಹತ್ತಿರ ಬಂದವರಿಗೆ ಆತ್ಮಬೋಧಾಮೃತವನ್ನು ಹಂಚುತ್ತಿದ್ದರು. ಅವರು ಬ್ರಹ್ಮಜ್ಞಾನಿಗಳೆಂಬ ವಾರ್ತೆ ಎಲ್ಲೆಡೆಗೂ ಹರಡಿತು. ಆಸ್ತಿಕರಾದ ಜಿಜ್ಞಾಸುಗಳು ಆರೂಢರ ಬಳಿಗೆ ಬಂದು ತಮ್ಮ ಸಂಶಯಗಳೆಲ್ಲವನ್ನು ಪರಿಹರಿಸಿಕೊಂಡು

ಹೋಗುತ್ತಿದ್ದರು. ಆರೂಢರ ವರ್ತನೆ ಕೆಲವು ವೇಳೆ ಹುಚ್ಚನಂತೆ ಇರುತ್ತಿತ್ತು. ಕಣ್ಣಿದ್ದರೂ ಕಾಣರು, ಕಿವಿಯಿದ್ದರೂ ಕೇಳರು, ಬಾಯಿಯಿದ್ದರೂ ಮಾತನಾಡರು. ಆತ್ಮಾರಾಮರಾಗಿದ್ದ ಅವಧೂತರಿಗೆ ಬಾಹ್ಯದ ಪ್ರಜ್ಞೆಯೇ ಇರುತ್ತಿರಲಿಲ್ಲ. ಯಾದವಾಡದಲ್ಲಿ ಒಂದು ದಿನ ಭಿಕ್ಷೆಗೆ ಹೋಗಿ ಒಬ್ಬರ ಮನೆಯ ಮುಂದೆ ನಿಂತರು. ಮನೆಯ ಗೃಹಿಣಿಯು ಒಂದು ರೊಟ್ಟಿಯನ್ನು ತಂದುಕೊಟ್ಟಳು. ರೊಟ್ಟಿಯ ಮೇಲೆ ಸ್ವಲ್ಪ ಪಲ್ಯವಿತ್ತು. "ರೊಟ್ಟಿಗೆ ಹಚ್ಚುವಷ್ಟು ಪಲ್ಯವಿಲ್ಲ" ಎಂದರು. ಆ ಗೃಹಿಣಿಯು ಅದೇ ಪಲ್ಯವನ್ನು ರೊಟ್ಟಿಗೆ ಪೂರ್ತಿಯಾಗಿ ಹಚ್ಚಿಕೊಟ್ಟಳು. ಆಗ ಸಿದ್ಧರು "ಎಲ್ಲ ಪಲ್ಯವಾಗಿ ಹೋಯಿತು ಮುರಿಯುವುದಕ್ಕೆ ರೊಟ್ಟಿಯೇ ಇಲ್ಲ!" ಎಂದರು. ಇವನು ಹುಚ್ಚನೆಂದು ತಿಳಿದು ಆ ಹೆಂಗಸು ಮನೆಯೊಳಗೆ ಹೋದಳು. ಪಂಚದಶಿಯಲ್ಲಿ ವಿದ್ಯಾರಣ್ಯ ಸ್ವಾಮಿಗಳು ಹೇಳುತ್ತಾರೆ–

ಅಂಧವಜ್ಜಡವಚ್ಚೈವ ಮೂಕವಚ್ಚ ಮಹೀಂ ಚರೇತ್ ॥

"ಜ್ಞಾನಿಯು ಕುರುಡನಂತೆಯೂ ಜಡಮನುಷ್ಯನಂತೆಯೂ ಮೂಕನಂತೆಯೂ ಭೂತಳದಲ್ಲಿ ತಿರುಗುತ್ತಿರುವನು" ಎಂದು.

ಶಾಂತಾ ಮಹಂತೋ ನಿವಸನ್ತಿ ಸಂತಃ
ವಸಂತವಲ್ಲೋಕಹಿತಂ ಚರಂತಃ ।
ಸ್ವಯಂ ತೀರ್ಣಾ ಭೀಮಭವಾರ್ಣವಂ ಜನಾನ್
ಅಹೇತುನಾನ್ಯಾನಪಿ ತಾರಯಂತಃ ॥

"ಶಾಂತರೂ ಮಹಾನುಭಾವಿಗಳೂ ಆದ ಸಂತರು, ತಾವು ಘೋರವಾದ ಈ ಭವಸಾಗರವನ್ನು ದಾಟಿದವರಾಗಿ, ಯಾವ ಫಲಾಪೇಕ್ಷೆಯೂ ಇಲ್ಲದೇ ಇತರರನ್ನೂ ತಾರಿಸುತ್ತ ವಸಂತ ಕಾಲದಂತೆ ಲೋಕಹಿತವನ್ನುಂಟುಮಾಡುತ್ತ ಸುತ್ತುತ್ತಾರೆ."

೭

## "ಪ್ರಾರಬ್ಧಂತ್ವಿಹ ಭುಜ್ಯತಾಮಥ
## ಪರಬ್ರಹ್ಮಾತ್ಮನಾ ಸ್ಥೀಯತಾವ್"

*(ಪ್ರಾರಬ್ಧಕರ್ಮವನ್ನಿಲ್ಲಿ ಭೋಗಿಸಿ ಪರಬ್ರಹ್ಮಸ್ವರೂಪನಾಗಿ ನಿಲ್ಲು.)*

ಶ್ರೀ ಸಿದ್ಧಾರೂಢ ಸ್ವಾಮಿಗಳು ಈ ಪ್ರಕಾರವಾಗಿ ನಾನಾಪ್ರಾಂತಗಳನ್ನು ಪರಿವ್ರಾಜಕರಾಗಿ ಸಂಚರಿಸುತ್ತ ಹುಬ್ಬಳ್ಳಿಗೆ ಬಂದು ಸೇರಿದರು. ಸಂಚಾರಕಾಲದಲ್ಲಿ ಅವರು ಅನುಭವಿಸಿದ ಕಷ್ಟಗಳು ಅಪಾರವಾದವು. ಹಸಿವು ಬಾಯಾರಿಕೆಗಳ ಜೊತೆಗೆ ಇತರ ದೈಹಿಕ ಮಾನಸಿಕ ಕ್ಲೇಶಗಳೂ ಒದಗಿದವು. ಬಡಕಲು ದೇಹ, ತಿರುಕನ ವೇಷ, ಮುನಿಗೆ ಒಪ್ಪುವ ಮೌನ–ಇವು ಸಂಸಾರಬದ್ಧರಾದ ಅಜ್ಞಾನಿ ಲೌಕಿಕರಿಗೆ ಇವರ ವಿಷಯದಲ್ಲಿ ಉಪೇಕ್ಷೆ, ಅಸಡ್ಡೆ, ತಿರಸ್ಕಾರಗಳನ್ನುಂಟು ಮಾಡುತ್ತಿದ್ದವೆಂಬುದು ಆಶ್ಚರ್ಯವಲ್ಲ. ಕೆಲವರು ತಳ್ಳಿದರು. ಮೊಳಕಾಲಿಗೆ ಪೆಟ್ಟಾಗಿ ರಕ್ತ ಸುರಿಯಿತು. ಇವನು ಕಳ್ಳನೆಂದು ಭ್ರಮಿಸಿ ಹೊಡೆದರು. ದೇಹವು ತತ್ತರಿಸಿತು. ಅವಮಾನ ಮಾಡಿದರು. ಮನಸ್ಸಿಗೆ ನೋವಾಯಿತು. ಬಯ್ದರು, ಬುದ್ಧಿಯು ಸ್ವೀಕರಿಸಿತು. ಆದರೆ ಪೆಟ್ಟುಗಳು ಅವಮಾನಾದಿಗಳು ಯಾರಿಗೆ? ಪ್ರಾರಬ್ಧಕರ್ಮಶೇಷದಿಂದ ಬಂದ ಈ ದೇಹಕ್ಕೆ, ಈ ಅಂತಃಕರಣಕ್ಕೆ. ಆರೂಢರ ಆತ್ಮವು ನಿತ್ಯಶುದ್ಧಬುದ್ಧ ಮುಕ್ತವಾಗಿತ್ತು. ದೇಹಮನೋಬುದ್ಧ್ಯಾದಿಗಳು ನಾನಲ್ಲವೆಂದು ಸ್ಥಿತಪ್ರಜ್ಞರಾಗಿದ್ದ ಸಿದ್ಧಾರೂಢರಿಗೆ, ಏನೂ ಆಗಿರಲಿಲ್ಲ. 'ನಾಹಂ ದೇಹೋ ನೇಂದ್ರಿಯಾಣ್ಯಂತರಂಗಂ' ಎಂಬುದು ಅವರ ನಿಶ್ಚಯವಾಗಿತ್ತು. 'ಚಿದಾನಂದರೂಪಃ ಶಿವೋಽಹಂ ಶಿವೋಽಹಂ' ಎಂದು ಸದಾ ಬ್ರಹ್ಮಚಿಂತನೆಯಲ್ಲಿದ್ದವರಿಗೆ ಈ ಮಾಯಾ ಪ್ರಪಂಚದ ಕ್ಲೇಶಗಳು ಹತ್ತಿರ ಸುಳಿಯಬಲ್ಲವೆ? ಪ್ರಾರಬ್ಧವನ್ನನುಭವಿಸುತ್ತ ಪರಬ್ರಹ್ಮಸ್ವರೂಪದಲ್ಲಿಯೇ ನಿಂತಿದ್ದ ಸಿದ್ಧಪುರುಷರವರು.

ಅವರು ಹುಬ್ಬಳ್ಳಿ ಪರಿಸರದ ತೊರವಿಯವರ ಭಾವಿಯ ಬಳಿ ತಂಗಿದರು. ಅಲ್ಲಿದ್ದ ಕೆಲವು ಹುಡುಗರು, ಒಬ್ಬ ಸಾಧುವು ಅಲ್ಲಿಗೆ ಬಂದಿದ್ದಾನೆಂದು ಒಬ್ಬ ವೈಶ್ಯಸಾಹುಕಾರ ಮದಲೇಟಪ್ಪನಿಗೆ ತಿಳಿಸಿದರಂತೆ. ಆತನು ಬಂದು ನೋಡಲಾಗಿ ಆರೂಢರು ಒಬ್ಬ ಮಹಾಪುರುಷರೆಂದು ಅವನಿಗೆ ತೋರಿತು. ಅವರನ್ನು ವ್ಯಾಪಾರಿಯು ತನ್ನ ಮನೆಗೆ ಕರೆದುಕೊಂಡು ಹೋಗಿ ಸ್ನಾನವಮಾಡಿಸಿ ಒಳ್ಳೆಯ ವಸ್ತ್ರವನ್ನು ತಂದುಕೊಟ್ಟು ಊಟ ಮಾಡಿಸಿದನು. ಊಟವಾದ ಮೇಲೆ ಮಲಗಲು ಒಂದು ಹಾಸಿಗೆಯನ್ನೇ ರ್ಪಡಿಸಿ ತನ್ನ ಕಾರ್ಯದ ಮೇಲೆ ಹೊರಗೆ ಹೋದನು. ವಾಪಸ್ಸು ಬಂದು ನೋಡಿದಾಗ ಸಿದ್ಧರೇ ಇಲ್ಲ. ಅವರಿಗೆ ಕೊಟ್ಟಿದ್ದ ಹೊಸ ವಸ್ತ್ರವನ್ನು ಅಲ್ಲಿಯೇ ಬಿಟ್ಟು ಕೌಪೀನಧಾರಿಗಳಾಗಿ ಹೊರಟು ಹೋಗಿದ್ದರು! ವಿರಕ್ತರು ಈ ವಿಷಯ ಸುಖವನ್ನು ಬಯಸುವುದಿಲ್ಲ ಎಂದು ವೈಶ್ಯನು ಸುಮ್ಮನಾದನು. ಈ ಸುದ್ದಿಯು ಗೊತ್ತಾಗಿ ಗುರುಲಿಂಗಶಾಸ್ತ್ರಿ ಎಂಬ ಸದ್ಗೃಹಸ್ಥನು ಕೆಲವು ಭಕ್ತಜನರೊಡನೆ ಸಿದ್ಧಾರೂಢರಲ್ಲಿಗೆ ಬಂದು, ವೇದಾಂತ ವಿಷಯದಲ್ಲಿ ಪ್ರಶ್ನೆಗಳನ್ನು ಹಾಕಿ, ಸಿದ್ಧರಿಂದ ಬಂದ ಉತ್ತರದಿಂದ ಸಂತುಷ್ಟನಾಗುತ್ತಿದ್ದನು. ಹೀಗೆ ಕ್ರಮವಾಗಿ ಸಿದ್ಧರು ಹುಬ್ಬಳ್ಳಿಯಲ್ಲಿ ಪ್ರಸಿದ್ಧಿಗೆ ಬರುತ್ತಿದ್ದರು. ಕ್ಷೀರಸಾಗರ ಬಸವಣ್ಣೆಪ್ಪನ ಮನೆಯಲ್ಲಿ ಯೋಗವಾಸಿಷ್ಠದಲ್ಲಿ ಪ್ರವಚನ ನಡೆಯುತ್ತಿತ್ತು. ಒಂದು ದಿನ ಗುರುಲಿಂಗಶಾಸ್ತ್ರಿಯು ಸಿದ್ಧರನ್ನು ಕುರಿತು "ಮಹಾತ್ಮರೆ, ಒಂದು ಪ್ರಶ್ನೆಯನ್ನು ಕೇಳಿ ತಿಳಿದುಕೊಳ್ಳಬೇಕಾಗಿದೆ. ದೇಹದಲ್ಲಿ ಆತ್ಮನು ಸದಾ ನೆಲೆಸಿದ್ದಾನೆಂದೂ ಎಲ್ಲೆಲ್ಲಿಯೂ ವ್ಯಾಪಿಸಿ ದ್ದಾನೆಂದೂ ಅವನಿಲ್ಲದ ಸ್ಥಳವೇ ಇಲ್ಲವೆಂದೂ ನೀವು ಹೇಳುತ್ತೀರಿ. ಹಾಗಿದ್ದರೆ ನಮಗೇಕೆ ಕಾಣಿಸುವುದಿಲ್ಲ?" ಎಂದು ಕೇಳಿದನು. ಅದಕ್ಕೆ ಆರೂಢರು ಹೀಗೆ ಉತ್ತರಕೊಟ್ಟರು. "ಕಣ್ಣಿಗೆ ಕಾಣಿಸಬೇಕಾದರೆ ಒಂದು ಪದಾರ್ಥದಲ್ಲಿ ರೂಪವಿರಬೇಕು. ಅದಕ್ಕೊಂದು ಆಕೃತಿ ಇರಬೇಕು. ಆತ್ಮನಿಗೆ ಯಾವ ರೂಪಾಕೃತಿಗಳೂ ಇಲ್ಲ. 'ಅಶಬ್ದಮಸ್ಪರ್ಶಮರೂಪ ಮವ್ಯಯಂ' ಎಂದು ಉಪನಿಷತ್ತು ಹೇಳುತ್ತದೆ. ಆತ್ಮನಲ್ಲಿ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಯಾವ ಗುಣವೂ ಇಲ್ಲ. ಆದ್ದರಿಂದ

ಅವನು ಇಂದ್ರಿಯ ಗೋಚರನಲ್ಲ. ಕಣ್ಣಿಗೆ ಮಾತ್ರವಲ್ಲ, ಯಾವ ಇಂದ್ರಿಯಕ್ಕೂ ಅವನು ತಿಳಿದು ಬರುವುದಿಲ್ಲ."

ಗುರುಲಿಂಗಶಾಸ್ತ್ರಿ: ಹಾಗಾದರೆ ಆತ್ಮನು ಇದ್ದಾನೆಂಬುದಕ್ಕೆ ಆಧಾರವೇನು?

ಸಿದ್ಧಾರೂಢರು: ವೇದವೇ ಆಧಾರ. ಉಪನಿಷತ್ತುಗಳಲ್ಲಂತೂ 'ಆತ್ಮಾ ವಾ ಅರೇ ಶ್ರೋತವ್ಯಃ' (ಅರೆ! ಆತ್ಮನನ್ನು ಕುರಿತು ಕೇಳಬೇಕು.) ಮುಂತಾದ ನೂರಾರು ವಾಕ್ಯಗಳು ಆತ್ಮನಿದ್ದಾನೆಂದು ಸ್ಪಷ್ಟವಾಗಿ ಘೋಷಿಸುತ್ತವೆ. ಅಲ್ಲದೆ 'ನಾನು ಇದ್ದೇನೆ' ಎಂದು ಎಲ್ಲರೂ ತಿಳಿದಿದ್ದಾರಷ್ಟೆ. 'ನಾನು ಇಲ್ಲ' ಎಂದು ಯಾವಾತನೂ ಭಾವಿಸುವುದಿಲ್ಲ. ನಾನು ಎಂದರೆ ಯಾರು? ಇದನ್ನು ಶೋಧಿಸುತ್ತ ಹೋದಾಗ ದೇಹೇಂದ್ರಿಯಾದಿಗಳು ಯಾರೂ ನಾನಲ್ಲ. ನಾನು ಇವರೆಲ್ಲರಿಗಿಂತ ಅತಿರಿಕ್ತನಾದವನು ಎಂದು ಗೊತ್ತಾಗುತ್ತದೆ.

ಗುರುಲಿಂಗಶಾಸ್ತ್ರಿ: ಮಾತಿಗೂ ಮನಸ್ಸಿಗೂ ಸಹ ಆತ್ಮನು ಗೋಚರಿಸುವುದಿಲ್ಲ ಎನ್ನುತ್ತಾರೆ. ಇದು ಹೇಗಾದೀತು?

ಸಿದ್ಧಾರೂಢರು: ನಿಜ, 'ಯತೋ ವಾಚೋ ನಿವರ್ತಂತೇ! ಅಪ್ರಾಪ್ಯ ಮನಸಾ ಸಹ' ಎಂದು ಉಪನಿಷತ್ತಿನಲ್ಲಿದೆ. ಆತ್ಮನ ಸ್ವರೂಪವನ್ನು ಶಬ್ದದಿಂದ ಬಣ್ಣಿಸಲಾಗುವುದಿಲ್ಲ. ಮನಸ್ಸಿನಿಂದ ಗ್ರಹಿಸಲಾಗುವುದಿಲ್ಲ–ಎಂದು ಅದರ ಅರ್ಥ. ಏಕೆಂದರೆ, ನಾವು ಆಡುವ ಪ್ರತಿಯೊಂದು ಶಬ್ದವೂ ಆ ಪದಾರ್ಥದಲ್ಲಿರುವ ಜಾತಿಯನ್ನೋ ಗುಣವನ್ನೋ ಕ್ರಿಯೆಯನ್ನೋ ತಿಳಿಸಿ, ಆ ಪದಾರ್ಥದ ಪರಿಚಯ ಮಾಡಿಕೊಡುತ್ತದೆ. ಹೇಗೆಂದರೆ, ಮನುಷ್ಯ, ಮೃಗ, ಮರ–ಎಂಬ ಶಬ್ದಗಳನ್ನು ನೋಡಿರಿ. ಒಬ್ಬ ಮನುಷ್ಯನನ್ನು ತೋರಿಸಿ ಇವನು ಮನುಷ್ಯ

ಎಂದು ಹೇಳಿದರೆ ಯಾವ ಮನುಷ್ಯನನ್ನು ನೋಡಿದರೂ ಮನುಷ್ಯನೆಂದು ಗೊತ್ತಾಗಿಬಿಡುತ್ತದೆ. ಇದು ಹೇಗೆ? ಎಲ್ಲ ಮನುಷ್ಯರಲ್ಲಿ ಮನುಷ್ಯತ್ವವೆಂಬ ಜಾತಿ ಇದೆ. ಮೃಗದಲ್ಲಿ ಮೃಗತ್ವ, ವೃಕ್ಷದಲ್ಲಿ ವೃಕ್ಷತ್ವ ಎಂಬ ಜಾತಿ ಇದೆ. ಇದರಿಂದ ನಮಗೆ ಎಲ್ಲರೂ ಯಾವ ಜಾತಿಗೆ–ಎಂದರೆ–ಮನುಷ್ಯತ್ವಾದಿ ಜಾತಿಗೆ ಸೇರಿದ್ದಾರೆಂದು ತಿಳಿಯುತ್ತದೆ. ಇನ್ನು ಬಿಳುಪು, ಕಪ್ಪು – ಮೊದಲಾದವು ಗುಣವನ್ನು ಹೇಳುತ್ತವೆ. ಉಪಾಧ್ಯಾಯ, ಅಡಿಗೆಯವನು ಮೊದಲಾದ ಶಬ್ದಗಳು ಕ್ರಿಯೆಯನ್ನು ತಿಳಿಸುತ್ತವೆ. ರಾಮ, ಕೃಷ್ಣ, ಶಿವ–ಮುಂತಾದವನ್ನು ಸಂಜ್ಞಾಶಬ್ದಗಳೆನ್ನುತ್ತಾರೆ. ಸಂಜ್ಞೆಯು ಜಾತಿ ಗುಣ ಕ್ರಿಯೆಗಳಲ್ಲಿ ಸೇರುವುದಿಲ್ಲ. ಒಬ್ಬ ಮನುಷ್ಯನನ್ನು ತೋರಿಸಿ ಇವನು ಲಿಂಗಯ್ಯ ಎಂದು ಹೇಳಿದರೆ ಅವನೊಬ್ಬನ ಪರಿಚಯ ಆಗುತ್ತದೆ. ಇನ್ನು ಯಾರ ಗುರುತೂ ಹತ್ತುವುದಿಲ್ಲ. ಆತ್ಮನಲ್ಲಿ ಜಾತಿ, ಗುಣ. ಕ್ರಿಯೆ–ಒಂದೂ ಇಲ್ಲ. ಯಾವ ಶಬ್ದದಿಂದ ಅವನನ್ನು ಪರಿಚಯ ಮಾಡಿಸಿಕೊಡಲು ಸಾಧ್ಯ?

ಗುರುಲಿಂಗಶಾಸ್ತ್ರಿ: ಮನಸ್ಸಿಗೆ ತಿಳಿಯಬಹುದಲ್ಲ?

ಸಿದ್ಧಾರೂಢರು: ಇಲ್ಲ, ಶಬ್ದದಿಂದ ಯಾವುದನ್ನು ಬಣ್ಣಿಸುವುದಕ್ಕಾಗುವುದಿಲ್ಲವೋ ಅದನ್ನು ಮನಸ್ಸೂ ತಿಳಿದುಕೊಳ್ಳಲಾರದು.

ಗುರುಲಿಂಗಶಾಸ್ತ್ರಿ: ಚಿತ್ತ ಶುದ್ಧಿಯಾದರೆ ಆತ್ಮನನ್ನು ತಿಳಿಯಬಹುದು ಎನ್ನುತ್ತಾರೆ. ಚಿತ್ತವೆಂದರೆ ಮನಸ್ಸೇ ಸರಿಯಷ್ಟೆ. ಆತ್ಮನು ಮನಸ್ಸಿಗೆ ಗೋಚರನಾಗದಿದ್ದ ಮೇಲೆ ಯಾವುದಕ್ಕೆ ಗೋಚರ? ಆತ್ಮಜ್ಞಾನವಾಗುವುದು ಹೇಗೆ? ಚಿತ್ತಶುದ್ಧಿಗೂ ಆತ್ಮಜ್ಞಾನಕ್ಕೂ ಏನು ಸಂಬಂಧ?

ಸಿದ್ಧಾರೂಢರು: ಕೇಳಿರಿ. ಆತ್ಮನು ಸ್ವಯಂಪ್ರಕಾಶ. ಸ್ವಯಂಜ್ಯೋತಿ. ಗಡಿಗೆ, ಮನೆ, ಮರಗಳನ್ನು ನೋಡಲು ನಿಮಗೆ ಬೆಳಕು

ಬೇಕು. ಬೆಳಕನ್ನು ನೋಡಲು ಬೆಳಕು ಬೇಕಿಲ್ಲ. ಚಿತ್ತದಲ್ಲಿರುವ ಕೊಳೆ ಕಾಮ, ಕ್ರೋಧಾದಿಗಳು. ಇವು ಹೋದರೆ ಚಿತ್ತಶುದ್ಧಿ. ಅಂತಹ ಚಿತ್ತವು ಗುರುವು ಹೇಳಿದ್ದನ್ನು ತಿಳಿದುಕೊಳ್ಳಬಲ್ಲುದು. ಚಿತ್ತಶುದ್ಧಿಯಾದರೆ ಗುರುಬೋಧೆಯನ್ನು ಕೇಳಿ ತಿಳಿದು ಕೊಳ್ಳುವ ಯೋಗ್ಯತೆ ಬರುತ್ತದೆ. ಅದು ಬಂದಮೇಲೆ ಶ್ರವಣ, ಮನನ, ನಿದಿಧ್ಯಾಸನಗಳಲ್ಲಿ ಆಸಕ್ತಿ ಹುಟ್ಟುತ್ತದೆ. ಹೀಗೆ ನಿರಂತರವಾಗಿ ಸಾಧನೆ ಮಾಡುತ್ತಿದ್ದರೆ ಚಿತ್ತವು ಜೀವಾತ್ಮನನ್ನು ಆತ್ಮನ ಬಳಿಗೆ ಕರೆದೊಯ್ದು ಕೈತೋರಿಸಿಬಿಟ್ಟುಬಿಡುತ್ತದೆ. ಜೀವಾತ್ಮನು 'ಓಹೋ! ನಾನೇ ಅವನು' ಎಂದುಕೊಳ್ಳುತ್ತಾನೆ. ಅದೇ ಆತ್ಮಜ್ಞಾನ.

ಗುರುಲಿಂಗಶಾಸ್ತ್ರಿಗೆ ಸಿದ್ಧರ ಬೋಧೆ ಮಹತ್ತ್ವದ ಪರಿಣಾಮವನ್ನು ಬೀರಿತು. "ಈ ಭಿಕ್ಷುಕ ಸಾಮಾನ್ಯಮನುಷ್ಯನಲ್ಲ. ಇವನು ಜ್ಞಾನಿಯೇ ಹೌದು" ಎಂದು ನಿಶ್ಚಯವಾಯಿತು. ಸಿದ್ಧಾರೂಢರ ಕೀರ್ತಿ ದಿನೇ ದಿನೇ ಹುಬ್ಬಳ್ಳಿಯಲ್ಲಿ ಹರಡುತ್ತಿತ್ತು. ಅವರು ಲಿಂಗಾಯತರೆಂಬುದು ಹೇಗೋ ಜನಕ್ಕೆ ತಿಳಿಯಿತು. ಆದರೆ ಆರೂಢರು ಲಿಂಗವನ್ನು ಧರಿಸಿರಲಿಲ್ಲ. ತಮ್ಮ ಗುರುಗಳಾದ ಗಜದಂಡಸ್ವಾಮಿಗಳು ಆತ್ಮಸ್ವರೂಪವನ್ನು ನಿರ್ಣಯಿಸಿ ಬೋಧಿಸಿದಾಗ, ಜಾತಿಗೋತ್ರಗಳೊಂದೂ ಇಲ್ಲದ ಆತ್ಮನಿಗೆ ಲಿಂಗಧಾರಣೆ ಹಾಸ್ಯಾಸ್ಪದವೆಂದು ಅವರೆದುರಿಗೆ ತೆಗೆದು ಒಪ್ಪಿಸಿದರು. "ಯೋಗಿನಾಂ ಹೃದಯೇ ಹರಿಃ" ಎಂಬ ಋಷಿವಾಕ್ಯಕ್ಕೆ ಅನುಗುಣವಾಗಿ ಹೃದಯದಲ್ಲಿಯೇ ಅಂತರ್ಯಾಮಿಯಾಗಿ ಶಿವನು ನೆಲೆಸಿರುವಾಗ ಈ ಬಾಹ್ಯಾಡಂಬರದಿಂದೇನು? ಎಂಬುದು ಅವರ ಆಶಯವಾಗಿತ್ತು. ಆದರೆ ಅಜ್ಞರಾದ ಜನರಿಗೆ ಪ್ರಾಜ್ಞರ ಆಶಯವೆಲ್ಲಿ ತಿಳಿಯುತ್ತದೆ? ಲಿಂಗವನ್ನು ತೆಗೆದ ಮೇಲೆ ಅವನು ಭವಿಯೆಂದೂ ತಿರಸ್ಕಾರಕ್ಕೆ ಅರ್ಹನೆಂದೂ ಬಹಳ ಜನ ಭಾವಿಸಿದರು. ಇನ್ನೂ ಜಾತ್ಯಂಧರಾದ ಮೂರ್ಖರು, ಇದೇ ಕಾರಣದಿಂದ ಆರೂಢರನ್ನು ಹೊಡೆದು ಚಿತ್ರಹಿಂಸೆಗಳನ್ನು ಕೊಟ್ಟದ್ದುಂಟು. ಬಹುಶಃ ಹುಬ್ಬಳ್ಳಿಯಲ್ಲಿ ಅವರಿಗಾದ ಹಿಂಸೆ, ಅವಮಾನಗಳು ಭರತಖಂಡದ

ಯಾವ ಸ್ಥಳದಲ್ಲಿಯೂ ಆಗಿರಲಿಲ್ಲ. ಆ ಊರಿನಲ್ಲಿ ಅಷ್ಟು ಕಷ್ಟಗಳೊದಗಿದರೂ ಹುಬ್ಬಳ್ಳಿಯನ್ನು ಬಿಟ್ಟುಹೋಗಲು ಸಿದ್ಧರು ಮನಸ್ಸು ಮಾಡಲಿಲ್ಲ. ಅದಕ್ಕೆ ಕಾರಣಗಳನ್ನು ಊಹಿಸಬಹುದು–

೧. ಆರೂಢರು ತಮ್ಮ ದೇಹದಲ್ಲಿ ಅಭಿಮಾನವನ್ನು ತೊರೆದದ್ದರಿಂದ ಮಾನಾವಮಾನಗಳೂ ಹಿಂಸೆಗಳೂ ಅವರ ಗಮನಕ್ಕೇ ಬರಲಿಲ್ಲ. ಅವನ್ನು ಅವರು ಲಕ್ಷಿಸಲಿಲ್ಲ.

೨. ಈ ಮೂಲಕ ಪ್ರಾರಬ್ಧಕರ್ಮವು ಸವೆಯುತ್ತದೆ. ಆದಷ್ಟು ಬೇಗ ಈ ಜನ್ಮಾಂತರಕರ್ಮಶೇಷವು ನಾಶವಾಗಲಿ ಎಂದು ಅಭಿಪ್ರಾಯ ವಿರಬಹುದು.

೩. ಬಹಳ ವರ್ಷಗಳವರೆಗೆ ದೂರದೇಶಗಳಲ್ಲಿ ಸುತ್ತಿದ್ದಾಗಿದೆ. ಈ ಸುತ್ತಾಟ ಸಾಕು. ಶಿಷ್ಯವೃಂದವು ದೊರಕಿದರೆ ಅವರಿಗೆ ಮಾರ್ಗದರ್ಶನ ಮಾಡುತ್ತ ಶಿಷ್ಯರ ಉದ್ಧಾರಕ್ಕಾಗಿ ಪ್ರಯತ್ನಿಸೋಣಎಂದು ಭಾವಿಸಿರಬಹುದು.

೪. ಈ ಊರಿನಲ್ಲಿ ಸಜ್ಜನರೂ ಹಲವರಿದ್ದಾರೆ. ಅವರ ಹಿತಕ್ಕಾಗಿ ಇಲ್ಲಿಯೇ ಇದ್ದುಬಿಡೋಣ ಎಂಬ ಅಪೇಕ್ಷೆ. ಲೋಕಸಂಗ್ರಹವೇ ಅವರ ಪರಮೋದ್ದೇಶವಾಗಿತ್ತು.

ಆರೂಢರು ಹುಬ್ಬಳ್ಳಿಗೆ ಬಂದಾಗ ಅವರ ವಯಸ್ಸು ಸುಮಾರು ನಲವತ್ತು ವರ್ಷಗಳಾಗಿರಬಹುದು. ಇದನ್ನು ಆರೂಢರೇ ಒಮ್ಮೆ ಹೇಳಿದ್ದಾರೆ. ಹುಬ್ಬಳ್ಳಿಗೆ ಬಂದು ಸ್ವಲ್ಪಕಾಲವಾದ ಮೇಲೆ ಹತ್ತಿರದಲ್ಲೇ ಇದ್ದ ಡುಮಗೇರಿ ಎಂಬ ಸ್ಥಳಕ್ಕೆ ಬಂದರು. ಅಲ್ಲಿ ಚಿದ್ಘನಾನಂದ ಸ್ವಾಮಿಗಳೆಂಬ ಬ್ರಾಹ್ಮಣ ಸಂನ್ಯಾಸಿಗಳ ಸಮಾಧಿ ಇತ್ತು. ಬೇವಿನಮರದ ಒಂದು ಕಟ್ಟೆ ಇತ್ತು. ಅದೇ ಸಿದ್ಧಾರೂಢರ ವಾಸಸ್ಥಾನವಾಯಿತು. ಸುತ್ತಲೂ

ಮರಗಳು ಬೆಳೆದು ಕಾಡಿನಂತೆ ಪೊದೆಬಳ್ಳಿಗಳು ಹಬ್ಬಿಕೊಂಡಿದ್ದವು. ಊರೊಳಗೆ ಹೋಗಿ ಭಿಕ್ಷಾವೃತ್ತಿಯಿಂದ ಹಸಿವನ್ನು ನೀಗಿಸಿಕೊಳ್ಳುತ್ತಿದ್ದರು. ಭಕ್ತಜನರು ಅಲ್ಲಿಗೂ ಬರಲಾರಂಭಿಸಿದರು. ಕಾಲಕ್ರಮದಲ್ಲಿ ಈ ಸಿದ್ಧಪುರುಷರ ಮಹಿಮೆಯಿಂದ ಒಂದು ಕಟ್ಟಡದ ನಿರ್ಮಾಣವಾಯಿತು. ಜಿಜ್ಞಾಸುಗಳಾಗಿ ಸಿದ್ಧರ ಬಳಿಗೆ ಬರುತ್ತಿದ್ದ ಭಕ್ತಜನರಲ್ಲಿ ಬ್ರಾಹ್ಮಣರೂ ಪಾರ್ಸಿಗಳೂ ಜೈನರೂ ಲಿಂಗಾಯತರೂ ಇತರ ಮತದವರೂ ಇದ್ದರು. ಅವರೆಲ್ಲ ಸೇರಿ ನಿರ್ಮಿಸಿದ ಕಟ್ಟಡವು ಈಗ ಶ್ರೀಸಿದ್ಧಾರೂಢಮಠವೆಂದು ವಿಖ್ಯಾತವಾಗಿದೆ.

ಈ ಸಿದ್ಧಪುರುಷನಿಗೆ ಸಾಕಷ್ಟು ಅಡ್ಡಿಆತಂಕಗಳು ಒದಗಿದವು. ಅಸೂಯಾ ಪರರಾದ ಕೆಲವು ಅಜ್ಞಜನರಿಂದಲೂ, ಲಿಂಗವನ್ನು ತೆಗೆದುಹಾಕಿದ ಭವಿಯೆಂದು ಭಾವಿಸಿದ ಮತಾಂಧರಿಂದಲೂ, ಒದಗಿದ ಕಿರುಕುಳ ಅಪಾರವಾದದ್ದು. ಆದರೇನು? ಮಂಜು ಮುಸುಕಿದರೆ ಸೂರ್ಯನು ಮೇಲೇರದಿರುವನೆ? ನರಿಗಳು ಕೂಗುತ್ತಿದ್ದರೆ ಶುಕ್ಲಪಕ್ಷದ ಚಂದ್ರನು ವರ್ಧಿಸದೆ ಇರುತ್ತಾನೆಯೆ? ನೀರನ್ನು ಬಾಚಿತೆಗೆದರೆ ಸಮುದ್ರವು ಒಣಗುತ್ತದೆಯೆ? ಬೇಡ ಬೇಡವೆಂದರೆ ಅಶ್ವತ್ಥವೃಕ್ಷವು ನಭೋಗಾಮಿಯಾಗಿ ಬೆಳೆಯದೆ ಇದ್ದೀತೆ? ಪ್ರಾಣಿಗಳು ಎದುರಾಗಿ ಬಂದು ಕೂಗಿದರೆ ಗಜರಾಜನು ತನ್ನ ದಾರಿಯನ್ನು ಬಿಟ್ಟು ವಿಚಲಿತನಾದಾನೆ? ಹರಿಯಬೇಡ! ಹರಿಯಬೇಡ! ಎಂದು ಸಾರಿದರೆ ಗಂಗಾನದಿಯು ಸಮುದ್ರಗಾಮಿಯಾಗದೆ ನಿಂತೀತೆ? ಶ್ರೀ ಸಿದ್ಧಾರೂಢರು ಆತ್ಮಜ್ಞಾನಿಗಳೆಂಬ ಕೀರ್ತಿ ಸರ್ವತ್ರ ಪ್ರಸರಿಸಿತು. ಯಾವ ಬೀದಿಯಲ್ಲಿ ತಿರುಪೆಬೇಡುತ್ತ ತಿರುಗುತ್ತಿದ್ದರೋ ಆ ಬೀದಿಯಲ್ಲಿ ಚಿನ್ನದ ಕಿರೀಟವನ್ನು ಧರಿಸಿದ ಆರೂಢರನ್ನು ಹೊತ್ತ ರಥವು ಚರಿಸಿತು.

ಈಗಿರುವ ಸಿದ್ಧಾರೂಢಮಠದ ಸ್ಥಳದಲ್ಲಿ ಮೊದಲು ಬರಿಯ ಚಪ್ಪರವಿತ್ತು. ಚಪ್ಪರದಲ್ಲಿಯೇ ಆರೂಢರು ಪ್ರವಚನ ನಡೆಸುತ್ತಿದ್ದರು. ಅವರ ಪ್ರವಚನವು ಜನರನ್ನು ಆಕರ್ಷಿಸತೊಡಗಿತು. ಶ್ರೋತೃಗಳ ಸಂಖ್ಯೆ ಹತ್ತು ಇದ್ದದ್ದು ನೂರಾಗಿ, ನೂರು ಸಾವಿರವಾಗಿ, ಸಾವಿರವು

ಹತ್ತುಸಾವಿರವಾಗಿ ಬೆಳೆಯಿತು. ಹುಬ್ಬಳ್ಳಿಯ ಹೊರಗಿರುವ ಹಳ್ಳಿಗಳಿಂದಲೂ ಬೇರೆ ಪಟ್ಟಣಗಳಿಂದಲೂ ಭಕ್ತ ಜನರು ಬರಲಾರಂಭಿಸಿದರು. ಉಪನ್ಯಾಸದ ಚಪ್ಪರ ಮಠವಾಗಿ ಬೆಳೆಯಿತು. ಬಂದ ಜನರಿಗಾಗಿ, ಬಡಬಗ್ಗರಿಗಾಗಿ ಭೋಜನದ ವ್ಯವಸ್ಥೆ ಏರ್ಪಟ್ಟಿತು. ಮಠವು ಮಾತ್ರವಲ್ಲ, ಹುಬ್ಬಳ್ಳಿ ಪಟ್ಟಣವೂ ಬೆಳೆದು ಪ್ರಸಿದ್ಧವಾಯಿತು.

ಗೌರೀಹುಣ್ಣಿಮೆಯ ದಿನ ಗೌರೀದೇವಿಯನ್ನು ರಥದಲ್ಲಿ ಕುಳ್ಳಿರಿಸಿದ ರಥೋತ್ಸವ ಹುಬ್ಬಳ್ಳಿಯಲ್ಲಿ ನಡೆಯಿತು. ಅದೇನೋ ಕಾರಣದಿಂದ ಒಂದು ಸಲ ಸಮಾಜದಲ್ಲಿ ಜಗಳ ಹುಟ್ಟಿತು. ಕಡೆಗೆ ಸಿದ್ಧಾರೂಢರನ್ನೇ ರಥದಲ್ಲಿ ಕುಳ್ಳಿರಿಸಿ ರಥವನ್ನೆಳೆಯಬೇಕೆಂದು ತೀರ್ಮಾನಿಸಿದರು. ಭಕ್ತರು ಬಂದು ಆರೂಢರನ್ನು ಒಪ್ಪಿಸಿ, ರಥದಲ್ಲಿ ಕುಳ್ಳಿರಿಸಿ, ರಥೋತ್ಸವ ಮಾಡಿದರು. ಅಲ್ಲಿಂದ ಈ ರಥೋತ್ಸವ ಹುಬ್ಬಳ್ಳಿಯ ಜಾತ್ರೆ ಎಂದು ಪ್ರಸಿದ್ಧವಾಗಿ ಪ್ರತಿವರ್ಷ ನಡೆಯತೊಡಗಿತು. ಜಾತ್ರೆಗೆ ಅಸಂಖ್ಯಾತ ಜನರು ಬಂದು ನೆರೆಯತೊಡಗಿದರು. ಹುಬ್ಬಳ್ಳಿ ಬೆಳೆದದ್ದು, ಎಲ್ಲೆಲ್ಲಿಯೂ ಪ್ರಸಿದ್ಧಿ ಪಡೆದದ್ದು, ಸಿದ್ಧಾರೂಢರ ಪ್ರಭಾವದಿಂದ. ಹುಬ್ಬಳ್ಳಿಯ ಸಿದ್ಧಪುರುಷ ಭಾರತದ ಸಿದ್ಧಪುರುಷನಾದ.

> ಯದಾ ಯದಾ ಹಿ ಧರ್ಮಸ್ಯ
> ಗ್ಲಾನಿರ್ಭವತಿ ಭಾರತ ।
> ಅಭ್ಯುತ್ಥಾನಮಧರ್ಮಸ್ಯ
> ತದಾತ್ಮಾನಂ ಸೃಜಾಮ್ಯಹಮ್ ॥
>
> "ಅರ್ಜುನ, ಯಾವಾಗ ಧರ್ಮಕ್ಕೆ ಕುಂದುಂಟಾಗಿ,
> ಅಧರ್ಮವು ಹೆಡೆ ಎತ್ತಿನಿಲ್ಲುತ್ತದೆಯೋ ಆಗ ನಾನು
> ಅವತರಿಸಿ ಬರುತ್ತೇನೆ.

## ೮

### ನ ರತ್ನಮನ್ವಿಷ್ಯತಿ ಮೃಗ್ಯತೇ ಹಿ ತತ್

*(ಜನರು ರತ್ನವನ್ನು ಹಿಂಬಾಲಿಸುವುವರು, ರತ್ನವು ಜನರನ್ನಲ್ಲ.)*

ಸಿದ್ಧಾರೂಢರ ಅಭಿಮಾನಿ ವರ್ಗವು ಅಧಿಕವಾದಂತೆ ಮಠವೂ ಬೆಳೆಯಿತು. ಪ್ರತಿದಿನ ಆರೂಢರ ಉಪನ್ಯಾಸವನ್ನು ಕೇಳಲು ಸಾವಿರಾರು ಮಂದಿ ಬರತೊಡಗಿದರು. ಶ್ರೋತೃವರ್ಗದಲ್ಲಿ ವಿದ್ವಾಂಸರಿದ್ದರು. ಬುದ್ಧಿಶಾಲಿಗಳಾದ ಪೌರರಿದ್ದರು. ಜ್ಞಾನಪಿಪಾಸುಗಳಿದ್ದರು. ಹಾಗೆಯೇ ಮೂಢಭಕ್ತರೂ ಇದ್ದರು, ಅವರಿಗೆ ಜ್ಞಾನದ ಬಯಕೆ ಇರಲಿಲ್ಲ. ಅವರಿಗೆ ಬೇಕಾದದ್ದು ಲೌಕಿಕ ಪ್ರಯೋಜನ. ಈ ಪರಿಸ್ಥಿತಿ ಎಲ್ಲ ಮಠ ಸಂಸ್ಥೆಗಳಲ್ಲಿಯೂ ಸಹಜವಾದದ್ದು. ಇರಲಿ.

*ಕಬೀರದಾಸರು*

ಒಂದು ದಿನ ಉಪನ್ಯಾಸದ ಸಮಯದಲ್ಲಿ ಒಬ್ಬ ಮುಸಲ್ಮಾನ ತರುಣನು ಬಂದು ಆರೂಢರ ಪಾದಗಳಿಗೆ ನಮಸ್ಕರಿಸಿದನು. 'ನೀನು ಯಾರು?' ಎಂದು ಕೇಳಿದಾಗ "ಸ್ವಾಮಿ, ನಾನು ಯಾರೆಂಬುದು ಗೊತ್ತಿಲ್ಲ. ಅದನ್ನು ತಿಳಿಯುವುದಕ್ಕಾಗಿಯೇ ನಿಮ್ಮ ಬಳಿಗೆ ಬಂದು ಶರಣಾಗಿದ್ದೇನೆ. ಅನೇಕ ಬೇರೆ ಬೇರೆ ಮಠಗಳಿಗೆ ಹೋಗಿದ್ದೇನೆ. ನಾನು ಮುಸಲ್ಮಾನನೆಂದು ತಿಳಿದು ಯಾರೂ ಸೇರಿಸಿಕೊಳ್ಳಲಿಲ್ಲ. ನಾನು ಜಿಜ್ಞಾಸುವಾಗಿ ಬಂದಿದ್ದೇನೆ. ಆತ್ಮಜ್ಞಾನವನ್ನು ಪಡೆಯಬೇಕೆಂಬ ಹಂಬಲ ಬೆಳೆದಿದೆ. ನನಗೆ ಆಶ್ರಯವನ್ನು ಕೊಟ್ಟು ನನ್ನ ಉದ್ಧಾರವನ್ನು ಮಾಡಬೇಕು" ಎಂದು ನಿವೇದಿಸಿದನು. ಆರೂಢ ಸ್ವಾಮಿಗಳು ಮನಸ್ಸಿನಲ್ಲಿ "ಈತನಿಗೆ ಆತ್ಮಭೋಧದ ಬಯಕೆ ತೀವ್ರವಾಗಿರುವಂತೆ ಕಾಣುತ್ತದೆ. ನೋಡೋಣ" ಎಂದುಕೊಂಡು "ಆಗಲಿ, ಇರು" ಎಂದು ನುಡಿದರು. ಮಠದಲ್ಲಿರುವಂತೆ ವ್ಯವಸ್ಥೆ ಮಾಡಿದರು. ಆತನ ಶುದ್ಧವಾದ ಅಂತಃಕರಣ, ಗುರುಭಕ್ತಿ, ಪರಮಾರ್ಥವನ್ನರಿಯಬೇಕೆಂಬ ಹಂಬಲ ಇವೆಲ್ಲವನ್ನೂ ಕಂಡು ಸಂತುಷ್ಟರಾದ ಸಿದ್ಧರು ಆತನಿಗೆ 'ಕಬೀರದಾಸ' ಎಂದು ನಾಮಕರಣ ಮಾಡಿದರು.

ಆ ಮುಸ್ಲಿಂ ಯುವಕನು ಸಂಸ್ಕೃತವನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದನು. ಸಂಗೀತದಲ್ಲಿ ಪರಿಶ್ರಮವಿತ್ತು. ಆತನ ಮೊದಲ ಹೆಸರು ಸಯ್ಯದ್ ಅಮಿನ್. ಬಳ್ಳಾರಿ ಕಡೆಯಿಂದ ಬಂದವನು. ಹೈದರಾಬಾದಿನ ನವಾಬನಿಗೆ ಸಂಬಂಧಿಯಂತೆ. ಹತ್ತು ಬೆರಳುಗಳಲ್ಲಿಯೂ ಚಿನ್ನದ ಉಂಗುರ ಗಳಿದ್ದವು. ರಾಜಮನೆತನದವನಾದ್ದರಿಂದ ಯಾವ ಹಣದ ಕೊರತೆಯೂ ಇರಲಿಲ್ಲ. ಅಂಥವನಿಗೆ ಭಾರತೀಯರ ಅಧ್ಯಾತ್ಮ ಶಾಸ್ತ್ರದಲ್ಲಿ ಆಸಕ್ತಿ ಹುಟ್ಟಿ ಜೀವನದಲ್ಲಿ ವೈರಾಗ್ಯ ಉಂಟಾದದ್ದು ಆಶ್ಚರ್ಯದ ಸಂಗತಿಯೇ ಸರಿ. ಶ್ರೀರಾಮ ಭಕ್ತರಾಗಿದ್ದ ಇನ್ನೊಬ್ಬ ಪ್ರಾಚೀನ ಕಬೀರದಾಸರಿದ್ದರು. ಅವರು ಇವರಲ್ಲ.

ಕ್ರಮೇಣ ಕಬೀರದಾಸರಿಗೆ ಮಠದಲ್ಲಿ ಗೌರವಸ್ಥಾನ ದೊರಕಿತು. ಅವರು ಸಿದ್ಧಾರೂಢರ ಪಟ್ಟಶಿಷ್ಯರೆನಿಸಿದರು. ಆರೂಢರು ಎಲ್ಲಿಗೆ ಹೋದರೂ ಅಲ್ಲಿ ಕಬೀರರಿರಬೇಕು. ಅವರಿಲ್ಲದೆ ಏನೂ ನಡೆಯುವುದಿಲ್ಲ ಎಂಬಂತಾಯಿತು. ಅವರು ಯಾವ ಅಧಿಕಾರಿಗಳೂ ಆಗಿರಲಿಲ್ಲ. ಗುರು ಸೇವೆಯೇ ಪರಗತಿಯೆಂದು ನಂಬಿಕೊಂಡಿದ್ದ ಪರಮಭಕ್ತರಾಗಿದ್ದರು. ಆರೂಢರ ಕೃಪಾಹಸ್ತವು ಸದಾ ಅವರ ಮೇಲಿತ್ತು. ಆರೂಢರ ದರ್ಶನಕ್ಕೆ ಬರತಕ್ಕವರ ಸಂಖ್ಯೆ ಅಧಿಕವಾಯಿತು. ದರ್ಶನವನ್ನು ನಿಯಂತ್ರಿಸಬೇಕಾಗಿ ಬಂದಾಗ ನಿಯಂತ್ರಣದ ಅಧಿಕಾರವು ಕಬೀರರಿಗೆ ಬಂದಿತು. ಬಂದವ ರೊಡನೆ ಮಾತಾಡಿ, ಅವರಿಗೆ ಸಿದ್ಧರ ದರ್ಶನವು ಆವಶ್ಯಕವೆನಿಸಿದಾಗ ಮಾತ್ರ ಅವರನ್ನು ಕಬೀರರು ದರ್ಶನಕ್ಕೆ ಬಿಡುತ್ತಿದ್ದರು.

ಒಮ್ಮೆ ಒಬ್ಬನು ಬಹಳ ಠೀವಿಯಿಂದ ಬಂದು ಆರೂಢರನ್ನು ಕಾಣಬೇಕಾಗಿದೆಯೆಂದು ಹೇಳಿದನು. ನಾದ, ಬಿಂದು, ಕಲೆ–ಇದರ ವಿಷಯ ವಾಗಿ ಆರೂಢರು ಏನು ಬಲ್ಲರೆಂಬುದನ್ನು ತಿಳಿದುಕೊಳ್ಳಬೇಕಾಗಿದೆ ಎಂದನಂತೆ. ಕಬೀರರು ರಪ್ಪನೆ ಅವನ ಕೆನ್ನೆಗೆ ಬಿಗಿದರು! ಅವನು ಹಾ! ಎಂದು ಕೂಗಿದನು. ಕಣ್ಣಲ್ಲಿ ನೀರು ಸುರಿಯಿತು. "ಏನು ಸ್ವಾಮಿ, ಸಿದ್ಧಾರೂಢರನ್ನು ಕಂಡು ಈ ಪ್ರಶ್ನೆಗಳಿಗೆ ಉತ್ತರವೇನೆಂದು ಕೇಳಬೇಕೆಂದು

ಬಂದರೆ ನೀವು ಕೆನ್ನೆಯ ಮೇಲೆ ಹೊಡೆಯಬಹುದೆ?" ಎಂದು ಆತನು ಕೇಳಿದಾಗ, ಕಬೀರರ ಉತ್ತರ ಹೀಗಿತ್ತು: " ಹಾ! ಎಂದು ಕೂಗಿದೆಯಲ್ಲ, ಅದೇ ನಾದ, ಸುರಿದ ಕಣ್ಣೀರು ಬಿಂದು. ಕೆನ್ನೆಯ ಮೇಲೆ ಮೂಡಿದ ಬಾಸುಂಡೆಯೇ ಕಲೆ! ನಿನಗೆ ಏನು ಗೊತ್ತಿದೆಯೆಂದು ಗುರುಗಳನ್ನು ಪರೀಕ್ಷಿಸಲು ಬಂದೆ? ಹುಲ್ಲು ಹೊರೆ ಕೊಳ್ಳಲು ಯೋಗ್ಯತೆ ಇಲ್ಲದವನು, ಚಿನ್ನ, ರತ್ನಗಳ ಖರೀದಿಗೆ ಹೋಗಬಾರದು" ಎಂದರು.

ಒಂದು ಸಲ ಒಬ್ಬ ಮಾಧ್ವಪಂಡಿತನು ಬಂದು ಸಿದ್ಧಾರೂಢರನ್ನು ಕುರಿತು "ನೀವು ಬ್ರಹ್ಮ ಬ್ರಹ್ಮ-ಎಂದು ಹೇಳುತ್ತೀರಿ. ಅದು ನಿರ್ಗುಣ, ನಿಷ್ಕ್ರಿಯ-ಎಂದು ತಿಳಿಸುತ್ತೀರಿ. ಅಂಥ ವಸ್ತು ಇರಲು ಸಾಧ್ಯವೆ? ಅದು ಹೇಗಿರುತ್ತದೆ?" ಎಂದು ಕೇಳಿದನಂತೆ. ಆಗ ಕಬೀರರು ಸ್ನಾನ ಮಾಡುತ್ತಿದ್ದರು. ಸಿದ್ಧರು 'ಕಬೀರ' ಎಂದು ಗಟ್ಟಿಯಾಗಿ ಕರೆದರು. ಕೂಡಲೆ ಕಬೀರರು ಸ್ನಾನದ ಚೆಂಬನ್ನೂ ಎಸೆದು ಬತ್ತಲೆಯಾಗಿ ಓಡಿ ಬಂದು ನಿಂತರು! ಆರೂಢರು ಮಾಧ್ವಪಂಡಿತನಿಗೆ "ನಾನು ಹೇಳುವ ಬ್ರಹ್ಮ ಹೀಗಿರುತ್ತಾನೆ, ನೋಡು!" ಎಂದರಂತೆ. ತಮ್ಮ ಹೆಗಲಿನ ಮೇಲಿನ ಬಟ್ಟೆಯನ್ನು ಕಬೀರನ ಕಡೆಗೆ ಎಸೆದು "ಮೈ ಒರಸಿಕೋ, ಹೋಗು" ಎಂದರು.

ಬಹಳ ಜನರಿಗೆ ಕಬೀರರ ಮೇಲೆ ಸಹನೆ ಇರಲಿಲ್ಲ. 'ಇವನು ಮುಸಲ್ಮಾನನಾಗಿದ್ದು ಮಠದಲ್ಲಿ ಪ್ರಭಾವಶಾಲಿಯಾಗಿ ಮೆರೆಯುತ್ತಿದ್ದಾನೆ. ಒಳ್ಳೆಯ ಬಟ್ಟೆ ಚಿನ್ನದ ಉಂಗುರಗಳನ್ನು ಹಾಕಿಕೊಂಡು ಠೀವಿಯಿಂದ ತಿರುಗಾಡುತ್ತಾನೆ' ಎಂದು ಹೊಟ್ಟೆಕಿಚ್ಚುಪಡುತ್ತಲೇ ಇದ್ದರು. ಎಷ್ಟೋ ಸಲ ಕಬೀರರ ಮೇಲೆ ಚಾಡಿ ಹೇಳಿದರು. ಏನೂ ಪರಿಣಾಮವಾಗಲಿಲ್ಲ. ಸಿದ್ಧಾರೂಢರು ಕಬೀರರನ್ನು ಒಂದೇ ಬಗೆಯ ವಾತ್ಸಲ್ಯದಿಂದ ನೋಡುತ್ತಿದ್ದರು. ಒಂದು ದಿನ ಹುಬ್ಬಳ್ಳಿಯ ನಾಲ್ಕಾರು ಪೌರರು ಬಂದು ಸಿದ್ಧಾರೂಢರಿಗೆ ಹೇಳಿದರು- "ಈ ಕಬೀರ ಬಹಳ ಅಹಂಕಾರಿ.

ರಾಜವೈಭವದಲ್ಲಿ ಮೆರೆಯುತ್ತಿದ್ದಾನೆ. ನೀವಾದರೋ ವಿರಕ್ತರು, ಮೈಮೇಲೆ ಒಂದು ಸರಿಯಾದ ಬಟ್ಟೆಯನ್ನೂ ಹೊದೆಯುವುದಿಲ್ಲ, ಲಂಗೋಟಿ ಹಾಕಿಕೊಂಡು ಇರುತ್ತೀರಿ. ಕಬೀರನು ಈ ವಿರಕ್ತ ಮಠದಲ್ಲಿರಲು ಯೋಗ್ಯನಲ್ಲ. ಇವನನ್ನು ಹೊರಕ್ಕೆ ಹಾಕಿರಿ" ಎಂದರು. ಅವರಿಗೆ ಆರೂಢರು ಬುದ್ಧಿಕಲಿಸಬೇಕೆಂದು ಚಿಂತಿಸಿ "ಕಬೀರ" ಎಂದು ಕರೆದರು. ಒಡನೆಯೇ ಅವರು ಬಂದು ನಿಂತರು. ಸಿದ್ಧರು ತಮ್ಮ ಹೆಗಲ ಮೇಲಿದ್ದ ಬಟ್ಟೆಯನ್ನು ಅವರಿಗೆ ಕೊಟ್ಟು "ಕಬೀರ, ಈ ಬಟ್ಟೆಯನ್ನುಟ್ಟು ಮಠದಿಂದ ಹೊರಟುಹೋಗು" ಎಂದರು. ಎರಡನೆಯ ಮಾತೇ ಇಲ್ಲದೆ ಕಬೀರದಾಸರು ತಮ್ಮ ಮೈಮೇಲಿದ್ದ ಬಟ್ಟೆಯೆಲ್ಲವನ್ನೂ ತೆಗೆದಿಟ್ಟು ಉಂಗುರಗಳನ್ನು ಕಳಚಿಟ್ಟು, ಸಿದ್ಧರು ಕೊಟ್ಟ ವಸ್ತ್ರವನ್ನುಟ್ಟು ಸಿದ್ಧರಿಗೊಮ್ಮೆ ನಮಸ್ಕರಿಸಿ, ಹೊರಟೇ ಬಿಟ್ಟರು! ಇದು ಗೊತ್ತಾಗಿ ಮಠದಲ್ಲಿ ಹಾಹಾಕಾರವೆದ್ದಿತು. ಭಕ್ತಜನರು ಹುಬ್ಬಳ್ಳಿ ಪೇಟೆಯಲ್ಲಿ ಓಡುತ್ತ ಬಂದರು. ಯಾರಿಗೂ ಏನೂ ಸರಿಯಾಗಿ ತಿಳಿದಿರಲಿಲ್ಲ. ಕೆಲವರು ಹೊಸಬಟ್ಟೆಯನ್ನು ತಂದು ಉಡಿಸಿದರು. ಚಿನ್ನದ ಸರವನ್ನು ಕೊರಳಿಗೆ ಹಾಕಿದರು. ಸಿದ್ಧರು ವಾಪಸ್ಸು ಕರೆದಂತಾಯಿತು. ಗುರುವಾಣಿ ಕೇಳಿಸಿತು. ಪುನಃ ವಾಪಸ್ಸು ಮಠಕ್ಕೆ ಬಂದು ಸಿದ್ಧರಿಗೆ ವಂದಿಸಿದರು. ಆಗಲೂ ಅಸೂಯಾಪರರಿಗೆ ಸಮಾಧಾನವಾಗಲಿಲ್ಲ. ಒಂಟಿ ಬಟ್ಟೆಯಲ್ಲಿ ಮಠವನ್ನು ಬಿಟ್ಟು ಹೋದವನು, ಈಗ ರಾಜವೇಷದಲ್ಲಿ ಹಿಂದಿರುಗಿ ಬಂದನೆಂದು ದೂರಿದರು. ಆಗ ಸಿದ್ಧರು ಹೀಗೆಂದರು: "ಅಪ್ಪಾ, ಅವನು ರಾಜವಂಶದವನು. ಅವನಿಗೆ ಆ ವೇಷ ಬೇಕೆನಿಸುತ್ತದೆ. ನನಗೆ ಅದು ಬೇಡ. ಉಡಲೊಂದು ಬಟ್ಟೆ, ಹೊದೆಯಲೊಂದು ಬಟ್ಟೆ ಇದ್ದರೆ ಸಾಕು. ಅಷ್ಟರಿಂದಲೇ ನನಗೆ ತೃಪ್ತಿಯಾಗುತ್ತದೆ. ಹಿಂದೆ ಬರೇ ಲಂಗೋಟಿಯಾಗಿತ್ತು. ಈಗ ನಿಮಗಾಗಿ ಒಂದು ಬಟ್ಟೆಯನ್ನು ಸುತ್ತಿಕೊಳ್ಳುತ್ತೇನೆ. ಶ್ರೀಕೃಷ್ಣ ಭೋಗಿಯಾಗಿದ್ದ. ಶುಕಮುನಿ ತ್ಯಾಗಿಯಾಗಿದ್ದ. ಜನಕರಾಜ, ಶ್ರೀರಾಮ–ಇಬ್ಬರೂ ರಾಜರಾಗಿದ್ದರು. ವಸಿಷ್ಠಮುನಿ ಕರ್ಮನಿಷ್ಠನಾಗಿದ್ದ. ಇವರೆಲ್ಲರೂ ಜ್ಞಾನಿಗಳೇ. ಬಹಿರಂಗವನ್ನೇಕೆ ನೋಡುತ್ತೀರಿ? ಕಬೀರನ ಅಂತರಂಗವನ್ನು

ನೋಡಿ ಅದು ಕನ್ನಡಿಯಂತೆ ಸ್ವಚ್ಛವಾಗಿದೆ."

ಒಂದು ಸಲ ಕಬೀರರ ಸಂಬಂಧಿಗಳು ಹುಬ್ಬಳ್ಳಿಗೆ ಬಂದು ಕಬೀರರನ್ನು ಕಂಡರು. "ಲಕ್ಷಾಂತರ ರೂಪಾಯಿಗಳ ಆಸ್ತಿ ವ್ಯವಹಾರ ಹಾಗೆಯೇ ಉಳಿದಿದೆ. ಊರಿಗೆ ಬಂದು ಅದನ್ನು ಮುಗಿಸಿಕೊಂಡು ಹೋಗಿರಿ" ಎಂದು ಕಬೀರರಿಗೆ ಹೇಳಿದರು. ಕಬೀರರು ಸಿದ್ಧಾರೂಢರ ಹತ್ತಿರ ಹೋಗಿ ಈಗ ನಾನೇನು ಮಾಡಲೆಂದು ಕೇಳಿದರು. ಆರೂಢರು "ಕಬೀರ, ಎಲ್ಲ ಸಂಪತ್ತನ್ನು ವಾಂತಿ ಮಾಡಿ ಬಂದಿದ್ದೀಯೆ. ಅದನ್ನೇಕೆ ಮತ್ತೆ ಬಾಯಲ್ಲಿಟ್ಟುಕೊಳ್ಳುತ್ತೀಯೆ" ಎಂದರಂತೆ. ಕಬೀರರು ಊರಿನ ಕಡೆಗೆ ಸುಳಿಯಲಿಲ್ಲ. ಗುರುಗಳಲ್ಲಿ ಅಷ್ಟು ನಿಷ್ಠೆ ಕಬೀರರಿಗಿತ್ತು. ಅವರು ಭಕ್ತಜನರಿಗೆ "ಅಯ್ಯಾ ಪುಣ್ಯಾತ್ಮರೆ, ಅಪ್ಪನ (ಆರೂಢರ) ಬಾಯಿಯಿಂದ ಮುತ್ತು, ವಜ್ರ, ವೈಢೂರ್ಯಗಳು ಸುರಿಯುತ್ತವೆ. ಅವನ್ನು ತುಂಬಿ ಗಂಟು ಕಟ್ಟಿಕೊಳ್ಳಿರಯ್ಯ! ಇಂಥ ಕಾಲ ಇನ್ನೊಂದು ಬರಲಾರದು" ಎಂದು ಹೇಳುತ್ತಿದ್ದರು.

ಕಬೀರರ ಆರೋಗ್ಯ ಕೆಟ್ಟಿತು. ಅವರಿಗೆ ಅಂತ್ಯಕಾಲ ಸಮೀಪಿಸಿತ್ತು. ಯಾವ ಚಿಕಿತ್ಸೆಯಿಂದಲೂ ಗುಣವಾಗಲಿಲ್ಲ. ಅವರ ತಂಗಿ ಮೊದಲಾದ ಬಂಧುಗಳು ತಮ್ಮೂರಿಗೆ ಕರೆದೊಯ್ಯಲು ಬಂದರು. ಕಬೀರರು ಭಸ್ಮಧರಿಸಿ ರುದ್ರಾಕ್ಷಮಾಲೆ ಹಾಕಿಕೊಂಡಿದ್ದರು. ಇವರನ್ನು ನೋಡಿ ಬಂಧುಗಳು ಆಶ್ಚರ್ಯದಲ್ಲಿ ಮುಳುಗಿ ಹೋದರು. ತಮ್ಮೂರಿಗೆ ಬರಲು ಒಪ್ಪಲಿಲ್ಲ. ಬಂಧುಗಳು ಆರೂಢರನ್ನು ಕಂಡು ಕಬೀರರನ್ನು ಕಳಿಸಿಕೊಡಿರೆಂದು ಕೇಳಿದರು. ಆರೂಢರು " ಅವನಿಗೆ ಇಲ್ಲಿ ಬಾ ಎಂದು ನಾನೇನೂ ಕರೆದಿಲ್ಲ. ಅಥನಾಗಿ ಬಂದಿದ್ದಾನೆ. ಹೋಗಲಿಕ್ಕೆ ಅಡ್ಡಿ ಏನು? ಬಂದರೆ ಕರೆದುಕೊಂಡು ಹೋಗಿರಿ" ಎಂದು ಹೇಳಿದರು. ಕಬೀರರು ಬರಲಿಲ್ಲ. ಅವರು ವಾಪಸ್ಸು ಹೋದರು.

೧೯೧೫ ನೆಯ ಇಸವಿ ಡಿಸೆಂಬರ್ ೧ ನೇ ತಾರೀಖು ಕಬೀರರು

ಮರ್ತ್ಯದೇಹವನ್ನು ತ್ಯಜಿಸಿದರು. ಮಠದ ಹಿಂಭಾಗದಲ್ಲಿ ಆ ಪುಣ್ಯಾತ್ಮರ ಸಮಾಧಿಯಾಯಿತು. ಸಿದ್ಧಾರೂಢರು ಈ ಭಕ್ತಶಿರೋಮಣಿಯ ತಲೆಯ ಮೇಲೆ ತಮ್ಮ ವರದ ಹಸ್ತವನ್ನಿಟ್ಟು " ಕಬೀರ, ನಾನು ಈ ಮಠವನ್ನು ಕಟ್ಟಿ ತಪ್ಪು ಮಾಡಿದೆ. ಲೌಕಿಕ ವ್ಯವಹಾರದಲ್ಲಿ ನಾನು ಸಿಕ್ಕಿಕೊಳ್ಳಬಾರದಾಗಿತ್ತು. ಜನರನ್ನು ಪರಮಾರ್ಥದ ಕಡೆಗೆ ತಿರುಗಿಸಿ ಅವರಿಗೆ ದಾರಿತೋರಿಸೋಣ. ಶಿವಪಾದವನ್ನು ಸೇರಿಕೊಳ್ಳಲು ಯೋಗ್ಯತೆಯನ್ನಿತ್ತು, ಭವಬಂಧನದಿಂದ ಪಾರು ಮಾಡೋಣ ಎಂದು ಬಯಸಿದೆ. ಸಂಸಾರಕ್ಕೆ ಹೆದರಿ ಹೋದವನು ಮತ್ತೆ ದೊಡ್ಡ ಸಂಸಾರವನ್ನೇ ಕೊರಳಿಗೆ ಕಟ್ಟಿಕೊಂಡೆ, ನಿನ್ನಂಥ ಕೆಲವರ ಹಸಿವಿಗೆ ಅನ್ನವನ್ನು ನೀಡಿದ್ದೇನೆ" ಎಂದು ಹೇಳಿ ಗಳಗಳನೆ ಅತ್ತರು.

ಆರೂಢರು ಅತ್ತಿದ್ದನ್ನು ನೋಡಿದ ಒಬ್ಬ ಭಕ್ತನು ಮತ್ತೊಂದು ಸಮಯದಲ್ಲಿ ಆ ವಿಷಯವನ್ನು ತೆಗೆದು "ಕಬೀರನು ದೇಹ ಬಿಟ್ಟಾಗ ನೀವು ಕಣ್ಣೀರು ಹಾಕಿದಿರಿ. ಜ್ಞಾನಿಯಾದವರು ಅಳುತ್ತಾರೆಯೆ? ಅವರಿಗೆ ಸುಖದುಃಖಗಳಿವೆಯೆ?" ಎಂದು ಆರೂಢರಿಗೆ ಪ್ರಶ್ನೆ ಹಾಕಿದನು. ಆರೂಢರು ಹೀಗೆಂದರು: "ಅಪ್ಪಾ, ಈ ದೇಹ ಇರುವವರೆಗೆ ದೇಹಧರ್ಮ ಪೂರ್ತಿಯಾಗಿ ತಪ್ಪುವುದಿಲ್ಲ. ಹಸಿವು, ಬಾಯಾರಿಕೆ, ನಿದ್ರೆ–ಮೊದಲಾದ್ದನ್ನು ಜ್ಞಾನಿಯೂ ಈ ದೇಹದಲ್ಲಿ ಕಾಣುತ್ತಾನೆ. ಕೆಟ್ಟ ವಿಷಯವಾದರೆ ಮನಸ್ಸನ್ನು ಪೂರ್ತಿಯಾಗಿ ನಿಗ್ರಹಿಸುತ್ತಾನೆ. ಅದನ್ನು ಯಥೇಚ್ಛವಾಗಿ ಬಿಡುವುದಿಲ್ಲ. ಕೆಟ್ಟ ವಿಷಯವಾಗದಿದ್ದರೆ ಸುಮ್ಮನಾಗಿ ಬಿಡುತ್ತಾನೆ. ಹತೋಟಿಗೆ ಯತ್ನಿಸುವುದಿಲ್ಲ. ಕಬೀರನಂಥ ಭಕ್ತನಿಗಾಗಿ ಯಾರ ಕಣ್ಣೀರು ಹರಿಯದೆ ಇದ್ದೀತು?" ಎಂದರು.

*ಶಿಶುನಾಳ ಶರೀಫರು*

ಸಿದ್ಧಾರೂಢರ ದರ್ಶನಕ್ಕಾಗಿ ಶಿಶುನಾಳದ ಕಡೆಯಿಂದ ಒಂದು ತಂಡ ಹೊರಟು ಬಂದಿತು. ಆ ತಂಡದವರು ಪ್ರಸಿದ್ಧರಾದ ಷರೀಫರನ್ನೂ ಜೊತೆಗೆ ಕರೆತಂದರು. ಷರೀಫರು ಪ್ರಾಜ್ಞರೆಂದೂ ಜನಪದ ಕವಿಯೆಂದೂ

ಪ್ರಖ್ಯಾತರಾಗಿದ್ದರು. ಅಲ್ಲದೆ ಸ್ವಯಂ ವಿಚಾರಶೀಲರೂ ದಾರ್ಶನಿಕರೂ ಆಗಿದ್ದರು. ಅವರೆಲ್ಲರೂ ಹುಬ್ಬಳ್ಳಿಗೆ ಬಂದ ಮೇಲೆ ಷರೀಫರು, "ಮಹಾತ್ಮರ ದರ್ಶನಕ್ಕೆ ರಿಕ್ತಹಸ್ತರಾಗಿ ಹೋಗಬಾರದು. ಎರಡು ತೆಂಗಿನಕಾಯಿಗಳನ್ನು ತನ್ನಿರಿ" ಎಂದು ತಮ್ಮವರಿಗೆ ತಿಳಿಸಿ ತಾವು ಮಠದ ಕಡೆಗೆ ಹೋದರು. ಸಿದ್ಧಾರೂಢರು ವಾಸಿಸುತ್ತಿದ್ದ ಕೋಣೆಯ ಎದುರು ಇದ್ದ ಹೂದೋಟದಲ್ಲಿ ಒಬ್ಬ ಶಿಷ್ಯನು ಪೂಜೆಗಾಗಿ ಹೂಗಳನ್ನು ಬಿಡಿಸಿಕೊಳ್ಳುತ್ತಿದ್ದನು. ಷರೀಫರೂ ಹೂಗಳನ್ನು ಬಿಡಿಸುತ್ತ ಮೂಸಿ ನೋಡಿ ಕೆಳಗೆ ಎಸೆಯತೊಡಗಿದರು. ಮೂಸಿದ ಹೂವನ್ನು ಪೂಜೆಗೆ ಬಳಸಬಾರದು. ಇದನ್ನು ನೋಡಿ ಮಠದ ಶಿಷ್ಯನು "ಷರೀಫ ಸಾಹೇಬರೆ, ಏಕೆ ಹೀಗೆ ಮೂಸಿ ಎಸೆಯುತ್ತಿದ್ದೀರಿ? ಹೂಗಳೆಲ್ಲ ವ್ಯರ್ಥವಾಗುತ್ತಿವೆ. ಇವು ಸ್ವಾಮಿಗಳ ಪೂಜೆಗೆ ಬೇಕು" ಎಂದನು. ಷರೀಫರು ಬ್ರಹ್ಮವು ನಿರ್ಗುಣವೆಂದೂ ಮಾತಿಗೆ ಮೀರಿದ್ದೆಂದೂ ನಿಮ್ಮ ಸಿದ್ಧಾರೂಢರು ಹೇಳುತ್ತಾರೆ. ಅಂಥ ದೇವರಿಗೆ ಪೂಜೆ ಯಾವುದು? ಸರ್ವವನ್ನು ಬಿಟ್ಟ ಸಂನ್ಯಾಸಿಗಳಿಗೇ ಹೂವಿನ ಮೇಲೆ ಇಷ್ಟು ಮೋಹ ಇರುವುದಾದರೆ, ನಮ್ಮಂಥ ಸಂಸಾರಿಗಳಿಗೆ ಇನ್ನೆಷ್ಟಿರಬೇಡ?" ಎಂದರು.

ಷರೀಫರಿಗೂ ಮಠದ ಶಿಷ್ಯನಿಗೂ ನಡೆದ ಈ ಸಂವಾದವು ಸಿದ್ಧಾರೂಢರಿಗೆ ತಿಳಿಯಿತು. ಅಂದಿನ ಉಪನ್ಯಾಸಕ್ಕೆ ಇದೇ ವಿಷಯವಾಯಿತು. ಸಭೆಯಲ್ಲಿ ಷರೀಫ್ ಸಾಹೇಬರು ಉಪಸ್ಥಿತರಿದ್ದರು. ಆರೂಢರು ಮಾಡಿದ ವಿಶ್ಲೇಷಣೆ ಈ ಪ್ರಕಾರವಾಗಿತ್ತು: ಪರಬ್ರಹ್ಮವು ನಿರ್ಗುಣ, ನಿಷ್ಕ್ರಿಯ, ನಿಷ್ಕಲ, ಶಾಂತವಾದದ್ದು. ಚಿದಾನಂದ ಸ್ವರೂಪವೇ ಅದು. ಅದು ಯಾವಾಗಲೂ ಯಾವ ಬದಲಾವಣೆ ಇಲ್ಲದೆಯೂ ಇದ್ದೇ ಇರುತ್ತದೆಯಾದ್ದರಿಂದ ಸತ್ ಆಗಿದೆ. ಆದ್ದರಿಂದ ಸಚ್ಚಿದಾನಂದ ಎನ್ನುತ್ತಾರೆ. ಅದು ತನ್ನ ಮಾಯಾಶಕ್ತಿಯಿಂದ ಸಗುಣವಾಗಿ ಈ ಜಗತ್ತನ್ನು ನಿರ್ಮಿಸಿತು. ಮಾಯಾಶಕ್ತಿಗೆ ಅಸಾಧ್ಯವಾದದ್ದು ಯಾವುದೂ ಇಲ್ಲ. ಸಗುಣನಾದ ಈಶ್ವರನಲ್ಲಿರುವ ಸಗುಣತ್ವ ಎಂಬುದು ಕಲ್ಪಿತ. ಸತ್ಯವಲ್ಲ. ಸಗುಣವಾದ

ಕಲ್ಪಿತ ಜಗತ್ತಿನಲ್ಲಿ ಎಲ್ಲ ಬಗೆಯ ದ್ವೈತವೂ ಕಾಣಿಸಿಕೊಳ್ಳುತ್ತದೆ. ಪೂಜಕ, ಪೂಜ್ಯ, ಪೂಜೆ-ಇತ್ಯಾದಿ ತ್ರಿಪುಟಿ ದ್ವೈತ ಪ್ರಪಂಚದಲ್ಲಿ ಇದ್ದೇ ಇದೆ. ಯಾವ ಕ್ರಿಯೆಯನ್ನು ತೆಗೆದುಕೊಂಡರೂ ತ್ರಿಪುಟಿ ಇದ್ದೇ ಇರುತ್ತದೆ. ಊಟ ಮಾಡುವುದು ಒಂದು ಕ್ರಿಯೆ. ಅದು ನಡೆಯಬೇಕಾದರೆ ಊಟಮಾಡತಕ್ಕವನಿರಬೇಕು. ಊಟಕ್ಕೆ ಬೇಕಾದ ಅನ್ನ-ಎಂದರೆ ಊಟಮಾಡಲ್ಪಡುವ ವಸ್ತು ಇರಬೇಕು. ಆಗ ಮೂರು ಪುಟಗಳು-ಮೂರು ಅಂಶಗಳು ಇವೆಯೆಂದಾಯಿತು. ಭೋಜನ ಕ್ರಿಯೆ, ಭೋಕ್ತಾ = ಊಟ ಮಾಡತಕ್ಕವನು, ಭೋಜ್ಯ = ತಿನ್ನಲ್ಪಡುವ ಅನ್ನ. ಕ್ರಿಯೆ ಇದ್ದೊಡನೆ ದ್ವೈತ ಬಂದು ಬಿಡುವುದರಿಂದ ಬ್ರಹ್ಮವು ಅದ್ವೈತವಾಗದೇ ಹೋಗುತ್ತದೆ. ಆದ್ದರಿಂದಲೇ ಅದು ನಿಷ್ಕ್ರಿಯ ಎಂದು ಹೇಳಿದ್ದಾರೆ. ಲೋಕದಲ್ಲಿ ಕ್ರಿಯೆ ಇದೆಯಲ್ಲ-ಎಂದರೆ, ಹೌದು. ಇಲ್ಲ ಎಂದು ಯಾರು ಹೇಳಿದರು? ಆದರೆ ಅದ್ವೈತದಲ್ಲಿ ದ್ವೈತ ಬಂದದ್ದು ಹೇಗೆ? ಮಾಯಾಕಲ್ಪಿತವಾದ್ದರಿಂದ ದ್ವೈತ ಬಂದಿತು. ಈ ಅದ್ವೈತ ಬುದ್ಧಿ ಥಟ್ಟನೆ ಬರುವುದಿಲ್ಲ. ಸಾಧನೆ ಮಾಡಬೇಕು. ಗುರುಪೂಜೆ ಮಾಡಬೇಕು. ಗುರುವನ್ನೂ ಒಲಿಸಿಕೊಳ್ಳಬೇಕು. ಗುರುವೂ ದ್ವೈತಬುದ್ಧಿಯಿಂದ ಉಪದೇಶಕ್ಕೆ ಇಳಿಯಬೇಕು. ಉಪದೇಶವೆನ್ನುವುದೂ ಒಂದು ಕ್ರಿಯೆ. ದ್ವೈತದಲ್ಲಿ ನಿಂತು ಅದ್ವೈತನಾಗಲು ಯತ್ನಿಸಬೇಕು. ಆಗ ಹೂವೂ ಇರುತ್ತದೆ, ಷರೀಫ ಸಾಹೇಬರೂ ಇರುತ್ತಾರೆ, ಶಿಷ್ಯನೂ ಇರುತ್ತಾನೆ. ಹೂವಿನಿಂದ ಗುರುಪೂಜೆಯನ್ನೂ ಮಾಡಬಹುದು. ಗುರುವು ಸಾಕ್ಷಿಯಾಗಿ ನಿಂತು ಈ ತ್ರಿಪುಟಿಯನ್ನು ನೋಡುತ್ತ ಇರುತ್ತಾನೆ" ಎಂದರು. ಷರೀಫರು ಬುದ್ಧಿಶಾಲಿಗಳು. ಆರೂಢರು ಕೊಟ್ಟ ಉತ್ತರದಿಂದ ತೃಪ್ತಿಯಾಯಿತು. ಅವರು ಆಶುಕವಿಗಳಾದ್ದರಿಂದ ಒಡನೆಯೇ ಆರೂಢರ ಮೇಲೆ ಕವಿತೆಯೊಂದನ್ನು ರಚಿಸಿ "ಸಾಧು ನೋಡೆಲೋ! ಪರಮ ಸಾಧು ನೋಡೆಲೋ" ಎಂದು ಹಾಡಿದರು. ಸಭೆಯಲ್ಲಿದ್ದವರಿಗೆ ಆನಂದವಾಯಿತು.

*ಲೋಕಮಾನ್ಯತಿಲಕರು*

ಲೋಕಮಾನ್ಯ ಬಾಲಗಂಗಾಧರ ತಿಲಕರು ವಿಖ್ಯಾತದಾರ್ಶನಿಕರೆಂದೂ ರಾಷ್ಟ್ರಭಕ್ತರೆಂದೂ ಸುಪ್ರಸಿದ್ಧರಾದವರು. ಭಾರತೀಯದರ್ಶನಗಳನ್ನೂ ಪಾಶ್ಚಾತ್ಯದರ್ಶನಗಳನ್ನೂ ಆಳವಾಗಿ ಅಭ್ಯಾಸಮಾಡಿದವರು. ಸ್ವಾತಂತ್ರ್ಯ ಚಳವಳಿಯ ನಿಮಿತ್ತವಾಗಿ ಬ್ರಿಟಿಷರು ಅವರನ್ನು ಮಂಡಾಲೇ ಜೈಲಿನಲ್ಲಿ ಆರುವರ್ಷಗಳ ಕಾಲ ನಿರ್ಬಂಧದಲ್ಲಿಟ್ಟಿದ್ದರು. ಆ ಸಮಯದಲ್ಲಿ ಅವರು ಭಗವದ್ಗೀತೆಯ ಮೇಲೆ 'ಗೀತಾರಹಸ್ಯ' ಎಂಬ ಕೃತಿಯನ್ನು ರಚಿಸಿದರು. ಅದನ್ನೋದಿದರೆ ತಿಲಕರ ಪಾಂಡಿತ್ಯವು ಎಷ್ಟು ವಿಶಾಲವೂ ಗಂಭೀರವೂ ಆಗಿತ್ತೆಂದು ಗೊತ್ತಾಗುತ್ತದೆ. ಅವರು ಅದ್ವೈತಸಿದ್ಧಾಂತವನ್ನೇ ಒಪ್ಪಿಕೊಂಡಿದ್ದರು. ಆದರೆ ಶ್ರೀಶಂಕರಾಚಾರ್ಯರು ಗೀತಾಭಾಷ್ಯದಲ್ಲಿ ಪ್ರತಿಪಾದಿಸಿದ ಸಂನ್ಯಾಸಮಾರ್ಗವನ್ನು ಒಪ್ಪಲಿಲ್ಲ. ಜ್ಞಾನಿಯೂ ಸಹ ಲೋಕಸಂಗ್ರಹಕ್ಕಾಗಿ ಕರ್ಮವನ್ನು ಮಾಡುತ್ತಲೇ ಇರಬೇಕೆಂದು ಶ್ರೀಕೃಷ್ಣನು ಗೀತೆಯಲ್ಲಿ ಉಪದೇಶಿಸಿದ್ದಾನೆಂಬುದು ಅವರ ನಿಲುವು. 'ಕರ್ಮಣ್ಯೇವಾಧಿಕಾರಸ್ತೇ', 'ಕುರು ಕರ್ಮೈವ ತಸ್ಮಾತ್ತ್ವಂ'– ('ನಿನಗೆ ಕರ್ಮಮಾಡುವುದರಲ್ಲಿಯೇ ಅಧಿಕಾರ.' 'ಆದ್ದರಿಂದ ನೀನು ಕರ್ಮವನ್ನೇ ಮಾಡು.') ಇತ್ಯಾದಿ ವಚನಗಳನ್ನು ಗಟ್ಟಿಯಾಗಿ ಹಿಡಿದು, ಜ್ಞಾನಿಯೂ ಕರ್ಮವನ್ನು ಶಾಸ್ತ್ರೋಕ್ತವಿಧಾನದಲ್ಲಿ ಮಾಡುತ್ತಿರಬೇಕೆಂಬುದೇ ಗೀತೆಯ ಸಿದ್ಧಾಂತವೆಂದು ಗೀತಾರಹಸ್ಯದಲ್ಲಿ ತಿಲಕರು ವಾದಿಸಿದ್ದಾರೆ. ಸಂನ್ಯಾಸ ಮಾರ್ಗವು ತಪ್ಪೆಂದು ಅವರ ಹೇಳಿಕೆಯಲ್ಲ. ಜ್ಞಾನಿಗೆ ಸಂನ್ಯಾಸ, ಕರ್ಮನಿಷ್ಠೆ–ಎಂಬ ಎರಡು ಸ್ವತಂತ್ರಮಾರ್ಗಗಳಿವೆಯೆಂದೂ, ಗೀತೆಯು ಹೇಳುವುದು ಮಾತ್ರ ಕರ್ಮನಿಷ್ಠೆಯೆಂದೂ ಅವರ ವಾದದ ತಿರುಳು.

ಈ ವಾದವನ್ನು ಸಾಂಪ್ರದಾಯಿಕರಾದ ವಿದ್ವಾಂಸರು ಒಪ್ಪಲಿಲ್ಲ. ಮಹಾರಾಷ್ಟ್ರದ ಒಬ್ಬ ಪಂಡಿತನು ಈ ವಿಷಯದಲ್ಲಿ ಸಿದ್ಧಾರೂಢರ ಅಭಿಪ್ರಾಯವೇನೆಂದು ತಿಳಿಯಲು ಹುಬ್ಬಳ್ಳಿಗೆ ಬಂದು ಸಿದ್ಧಾರೂಢರನ್ನು

ಸಂದರ್ಶಿಸಿ, ಗೀತಾರಹಸ್ಯದಲ್ಲಿದ್ದ ತಿಲಕರ ಪ್ರತಿಪಾದನೆಯನ್ನು ಆರೂಢರ ಮುಂದಿಟ್ಟನು. ಸಿದ್ಧಾರೂಢರು ಲೋಕಮಾನ್ಯತಿಲಕರ ಹೇಳಿಕೆಯೆಲ್ಲವನ್ನೂ ಪರಿಶೀಲಿಸಿ ತಮ್ಮ ನಿರ್ಣಯುವನ್ನು ಹೀಗೆ ಹೇಳಿದರು: " ತಿಲಕರ ವಾದವು ಕೋರ್ಟಿನಲ್ಲಿ ಮಾಡುವ ವಕೀಲರ ವಾದ. ಅದು ಪಾಂಡಿತ್ಯವನ್ನು ಮೆರೆಸುವುದು ಹೌದು. ಆದರೆ ವಸ್ತುಸ್ಥಿತಿ ಅದಲ್ಲ. ಜ್ಞಾನಿಗೆ ಯಾವ ಕರ್ಮವೂ ಇಲ್ಲ. ತಿಲಕರು ಗುರುಮುಖದಿಂದ ಅಧ್ಯಯನ ಮಾಡಿದವರಲ್ಲ" ಎಂದು. ಆರೂಢರ ಹೇಳಿಕೆ ಬಹುಶಃ ವಾರ್ತಾಪತ್ರಿಕೆಗಳಲ್ಲಿ ಪ್ರಕಟವಾಗಿರಬೇಕು. ಅಂತೂ ಈ ವಿಷಯವು ಲೋಕಮಾನ್ಯರ ಕಿವಿಗೆ ಮುಟ್ಟಿತು. "ಸಿದ್ಧಾರೂಢರು ಹಾಗೆ ಹೇಳಿದರೆ? ಅದರ ಸತ್ಯಾಸತ್ಯತೆಯನ್ನು ಸ್ವತಃ ತಿಳಿಯಬೇಕು" ಎಂದು ನಿಶ್ಚಯಿಸಿ ಹುಬ್ಬಳ್ಳಿಗೆ ಬರಬೇಕೆಂದು ನಿಶ್ಚಯಿಸಿದರು. ಇದರಿಂದ ಆರೂಢರ ಪ್ರಸಿದ್ಧಿ ಎಲ್ಲಿಯವರೆಗೆ ಹಬ್ಬಿತ್ತು ಎಂದು ಊಹಿಸಬಹುದು.

ತಿಲಕರು ಹುಬ್ಬಳ್ಳಿಗೆ ಬರುತ್ತಾರೆಂದರೆ ಅದು ಬಹಳ ದೊಡ್ಡ ಸುದ್ದಿ. ರಾಷ್ಟ್ರಾಭಿಮಾನಿಗಳು ಅವರ ಉಪನ್ಯಾಸವನ್ನೇರ್ಪಡಿಸಿದರು. ಆಡಳಿತ ನಡೆಸುತ್ತಿದ್ದ ಇಂಗ್ಲೀಷ್ ಸರ್ಕಾರವು 'ಹುಬ್ಬಳ್ಳಿ ಪೌರಸಭೆಯ ಸರಹದ್ದಿನಲ್ಲಿ ಉಪನ್ಯಾಸ ಮಾಡಕೂಡದು' ಎಂದು ತಿಲಕರಿಗೆ ನೋಟೀಸ್ ಜಾರಿಮಾಡಿತು. ಉಪನ್ಯಾಸವನ್ನು ಹುಬ್ಬಳ್ಳಿ ಪೌರಸಭೆಯ ಹೊರಗಡೆ ನಡೆಸಬೇಕೆಂದು ಸಂಘಟಕರು ಗೊತ್ತುಮಾಡಿದರು. ಸಭೆಯ ಅಧ್ಯಕ್ಷತೆಯನ್ನು ಯಾರು ವಹಿಸಬೇಕು? ಹುಬ್ಬಳ್ಳಿಯಲ್ಲಿ ತಕ್ಕ ಯೋಗ್ಯತೆಯಿದ್ದವರೇನೋ ಇದ್ದರು. ಸರ್ಕಾರದ ವಿರೋಧವನ್ನು ಕಟ್ಟಿಕೊಳ್ಳುವುದು ಬೇಡವೆಂದೋ ಏನೋ ಯಾರೂ ಒಪ್ಪಿಕೊಳ್ಳಲಿಲ್ಲ. ಕೆಲವರು ಸಿದ್ಧಾರೂಢರ ಬಳಿಗೆ ಬಂದು ಸಭಾಧ್ಯಕ್ಷತೆಯನ್ನು ವಹಿಸಬೇಕೆಂದು ಕೇಳಿಕೊಂಡರು. ಕೂಡಲೇ ಅವರು ಒಪ್ಪಿಕೊಂಡು ಹೀಗೆಂದರು: "ಇದಕ್ಕೆ ಅಂಜಬೇಕಾದ್ದೇನೂ ಇಲ್ಲ. ನನಗೆ ಯಾರ ಹೆದರಿಕೆಯೂ ಇಲ್ಲ. ರಾಷ್ಟ್ರಕ್ಕಾಗಿ ಹೋರಾಟ ನಡೆಸುವುದು ಈಗ ಪ್ರತಿಯೊಬ್ಬ ಭಾರತೀಯನ ಕರ್ತವ್ಯ. ನಾನು ಭಾರತೀಯ. ಅಂತರಂಗ ಶತ್ರುಗಳಾದ ಕಾಮ ಕ್ರೋಧಾದಿಗಳನ್ನು

ಗೆಲ್ಲಬೇಕು. ಬಹಿರಂಗ ಶತ್ರುಗಳಾದ ಪರಕೀಯರನ್ನೂ ಎದುರಿಸಬೇಕು. ಈ ದೇಶಕ್ಕೆ ಸ್ವಾತಂತ್ರ್ಯವಿಲ್ಲದೆ ಹೋದರೆ ನಮ್ಮ ಭಾರತೀಯ ಸಂಸ್ಕೃತಿ ಉಳಿಯಲಾರದು." ಸಿದ್ಧಾರೂಢರು ಎಷ್ಟು ವಿಶಾಲದೃಷ್ಟಿಯನ್ನು ತಳೆದಿದ್ದರೆಂಬುದು ಇದರಿಂದ ಗೊತ್ತಾಗುತ್ತದೆ.

ಆರೂಢರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಅನಂತರ ತಿಲಕರು ಸಿದ್ಧಾರೂಢರೊಡನೆ ಮಠಕ್ಕೆ ಆಗಮಿಸಿದರು. ತಿಲಕರು ತಮ್ಮ ಆಗಮನದ ಉದ್ದೇಶವನ್ನು ತಿಳಿಸಿದ ಮೇಲೆ ಅವರಿಬ್ಬರಿಗೂ ದೀರ್ಘಕಾಲ ಸಂಭಾಷಣೆ ನಡೆಯಿತೆಂದು ಗೊತ್ತಾಗುತ್ತದೆ. ಆರೂಢರಿಗೆ ಮರಾಠಿ ಚೆನ್ನಾಗಿ ಬರುತ್ತಿದ್ದುದರಿಂದ ಭಾಷೆಯೇನೂ ಅಡ್ಡವಾಗಲಿಲ್ಲ. ಹಿಂದೆ ಮಹಾರಾಷ್ಟ್ರದ ಪಂಡಿತನಿಗೆ ಹೇಳಿದ ಮಾತನ್ನೇ ಸ್ವಲ್ಪ ವಿಸ್ತರಿಸಿ ಆರೂಢರು ಹೀಗೆ ತಿಳಿಸಿದರು: "ಮುಕ್ತಿಗೆ ಎರಡು ಮಾರ್ಗಗಳಿಲ್ಲ. ಇರತಕ್ಕದ್ದು ಒಂದೇ ಮಾರ್ಗ. 'ಜ್ಞಾನಾದೇವ ತು ಕೈವಲ್ಯಂ' ಆತ್ಮಜ್ಞಾನದಿಂದಲೇ ಕೈವಲ್ಯ. ಕರ್ಮದಿಂದಲ್ಲ."

'ಚಿತ್ತಸ್ಯ ಶುದ್ಧಯೇ ಕರ್ಮ ನ ತು ವಸ್ತೂಪಲಬ್ಧಯೇ' ಚಿತ್ತಶುದ್ಧಿಗಾಗಿ ಕರ್ಮವನ್ನು ಮಾಡುತ್ತಿರಬೇಕು, ಬ್ರಹ್ಮವಸ್ತುವಿನ ಪ್ರಾಪ್ತಿಗಾಗಿ ಅಲ್ಲ-ಎಂದು ಬಲ್ಲವರು ಹೇಳಿದ್ದಾರೆ. ಇದನ್ನು ನೀವೂ ಒಪ್ಪುತ್ತೀರಿ. ಆದರೆ ಬ್ರಹ್ಮಜ್ಞಾನವಾದ ಮೇಲೆ ಕರ್ಮವನ್ನು ಮಾಡಬೇಕೋ ಅಥವಾ ಬಿಡಬೇಕೋ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವನ್ನು ತಳೆದಿದ್ದೀರಿ. ಎಲ್ಲರೂ ಸಂನ್ಯಾಸಿಗಳಾಗಬೇಕಾಗಿಲ್ಲ ಎನ್ನುವುದನ್ನು ನಾವೂ ಒಪ್ಪುತ್ತೇವೆ. ಶಂಕರಾಚಾರ್ಯರೂ ಹಾಗೆ ಹೇಳಿಲ್ಲ. ಸಂನ್ಯಾಸಿಯಾದರೆ ಶಮದಮಾದಿ ಸಾಧನೆಗೆ ತುಂಬ ಅನುಕೂಲವಾಗುತ್ತದೆಯೆಂದು ಅವರು ಸಂನ್ಯಾಸಕ್ಕೆ ಒತ್ತುಕೊಟ್ಟಿದ್ದಾರೆ. ಬ್ರಹ್ಮಜ್ಞಾನವಾದ ಮೇಲೆ ತ್ರಿಪುಟಿ ಅಳಿದುಹೋಗುತ್ತದೆ. ಸರ್ವವೂ ಆತ್ಮಸ್ವರೂಪವಾಗಿಯೇ ಕಾಣುತ್ತವೆ. ನಾನು ಕರ್ತ ಎಂಬ ಭಾವನೆಯೇ ತೊಡೆದು ಹೋಗುತ್ತದೆ. ಕೃತಕೃತ್ಯನಾದವನಿಗೆ ಮತ್ತೆ ಮಾಡಬೇಕಾದ್ದೇನಿದೆ? ಏತಕ್ಕಾಗಿ ಮಾಡಬೇಕು? ಲೋಕಸಂಗ್ರಹಕ್ಕಾಗಿ

ಎಂದು ನೀವು ಹೇಳುತ್ತೀರಿ. ಜ್ಞಾನಿಯ ದೃಷ್ಟಿಯಲ್ಲಿ ಲೋಕವೆಂಬುದೇ ಇರುವುದಿಲ್ಲ. ಜನಕರಾಜ ಮೊದಲಾದವರು ಜ್ಞಾನಿಗಳಾದರೂ ಕರ್ಮವನ್ನು ಮಾಡುತ್ತಿದ್ದರೆಂಬುದು ದಿಟ. ಆದರೆ ಜನಕರಾಜನ ದೃಷ್ಟಿಯಲ್ಲಿ ಅದು ಕರ್ಮವೇ ಅಲ್ಲ. ತಾನೇ ಬ್ರಹ್ಮವಾಗಿ ಜ್ಞಾನಿಯು ನಿಂತಾಗ ಅವನಿಗೆ ವಿಧಿನಿಷೇಧಗಳೇ ಇಲ್ಲ. ಪರಬ್ರಹ್ಮಕ್ಕೆ 'ಮಾಡು' ಎಂದು ಹೇಳತಕ್ಕವನು ಯಾರು? 'ಮಾಡಬೇಡ' ಎಂದು ಹೇಳತಕ್ಕವನು ಯಾರು? 'ಕರ್ಮಣ್ಯೇವಾಧಿಕಾರಸ್ತೇ' 'ಕುರುಕರ್ಮೈವತಸ್ಮಾತ್ ತ್ವಂ' ಎಂದು ಗೀತೆಯಲ್ಲಿ ಹೇಳಿರುವುದು ಅರ್ಜುನನಿಗಾಗಿ. ಅವನು ಆತ್ಮಜ್ಞಾನಿಯಲ್ಲ. ಆತ್ಮಜ್ಞಾನಿಯಲ್ಲದವನು ಚಿತ್ತಶುದ್ಧಿಗಾಗಿ ಕರ್ಮವನ್ನು ಮಾಡಲೇಬೇಕು. ಕರ್ಮ, ಭಕ್ತಿ ಇವು ಜ್ಞಾನಕ್ಕೆ ಸಾಧನಗಳು. ಅಜ್ಞಾನಾದ ಅರ್ಜುನನಿಗೆ ಹೇಳಿದ ಮಾತನ್ನು ನೀವು ಸಾರ್ವತ್ರಿಕವಾಗಿ ಎಲ್ಲರಿಗೂ ಅನ್ವಯಿಸಿ ಹೇಳುತ್ತಿದ್ದೀರಿ. ನೀವು ತಪ್ಪು ಮಾಡಿರುವುದು ಇಲ್ಲಿಯೇ. ಶಂಕರಾಚಾರ್ಯರು ದೇಶವನ್ನೆಲ್ಲ ತಿರುಗಿದರು. ಭಾಷ್ಯವೇ ಮೊದಲಾದ ಗ್ರಂಥಗಳನ್ನು ಬರೆದರು. ಅದೆಲ್ಲ ಜನರ ದೃಷ್ಟಿಯಲ್ಲಿ ಕರ್ಮವೇ. ಹೀಗಿರುವಾಗ ಅವರು ಸಂನ್ಯಾಸಮಾರ್ಗೀಯರಾದ್ದರಿಂದ ಗೀತೆಗೆ ತಮ್ಮ ವಿಚಾರವನ್ನಷ್ಟೇ ತುರುಕಿದರೆಂದು ಹೇಗೆ ಹೇಳುತ್ತೀರಿ? ಶ್ರೀಕೃಷ್ಣನು ಯೋಗಿಯಾಗಿದ್ದ. ಶುಕಮುನಿಯು ತ್ಯಾಗಿ, ಬೈರಾಗಿಯಾಗಿದ್ದ. ಶ್ರೀರಾಮಚಂದ್ರ ಮತ್ತು ಜನಕರು ರಾಜರಾಗಿದ್ದರು. ವಸಿಷ್ಠರು ಕರ್ಮನಿಷ್ಠರಾಗಿದ್ದರು. ಇವರೆಲ್ಲರೂ ಜ್ಞಾನಿಗಳೇ ಸರಿ. ಆದ್ದರಿಂದ ಜ್ಞಾನಿಯು ಜ್ಞಾನಮಾರ್ಗದಲ್ಲಿಯೇ ಇರುತ್ತಾನೆ. ಜ್ಞಾನಿಯು ಮಾಡುವ ಕರ್ಮ ಕರ್ಮವೇ ಅಲ್ಲ ಎಂಬುದು ಒಟ್ಟು ತಾತ್ಪರ್ಯ. ನೀವು ಪುಸ್ತಕಗಳನ್ನೋದಿ, ತರ್ಕದಿಂದ ವೇದಾಂತವನ್ನು ನಿರ್ಣಯಿಸಲು ಹೊರಟಿದ್ದೀರಿ. ತಿಲಕರೆ, ಸಂಪ್ರದಾಯಕ್ರಮದಿಂದ ನೀವು ಓದಿದವರಲ್ಲ. ಸರಿಯಾದ ಆತ್ಮಜ್ಞಾನವು ಗುರುಮುಖದಿಂದಲೇ ಪ್ರಾಪ್ತವಾಗುತ್ತದೆ. 'ಆಚಾರ್ಯವಾನ್ ಪುರುಷೋ ವೇದ' ಎಂದಲ್ಲವೆ ಉಪನಿಷತ್ತು ಹೇಳಿದೆ?" ಎಂದರು. ಇಂತಹ ಸತ್ಯನಿಷ್ಠೆಯನ್ನು ಧೈರ್ಯದಿಂದ ಪ್ರಕಟಿಸುವ

ಸಾಮರ್ಥ್ಯವು ಆತ್ಮಜ್ಞಾನಿಗಲ್ಲದೆ ಇನ್ನೊಬ್ಬರಿಗಿರಲಾರದು. ಅನಂತರ ತಿಲಕರು ಯಾವ ಅಭಿಪ್ರಾಯವನ್ನು ತಳೆದರೋ ಅದು ನಮಗೆ ತಿಳಿದು ಬಂದಿಲ್ಲ. ಸಿದ್ಧಾರೂಢರು ಜ್ಞಾನಿಗಳೇ ಹೌದೆಂದು ಮುಕ್ತಕಂಠದಿಂದ ಪ್ರಶಂಸೆಮಾಡಿ ತಿಲಕರು ಹೊರಟು ಹೋದರು. ಸ್ವಾಮಿ ವಿವೇಕಾನಂದರೂ, ಹೃಷೀಕೇಶದ ಶಿವಾನಂದರೂ ಆರೂಢರ ಕೀರ್ತಿಯಿಂದ ಆಕರ್ಷಿತರಾಗಿ ಬಂದು ಅವರ ದರ್ಶನವನ್ನು ಪಡೆದರು. ಆರೂಢರ ದರ್ಶನಕ್ಕೆ ರಾಜ ಮಹಾರಾಜರುಗಳೂ ಬರುತ್ತಿದ್ದರು. ವೀರಶೈವಮಠಾಧ್ಯಕ್ಷರೂ ವಿಖ್ಯಾತರೂ ಆದ ಅನೇಕ ಸ್ವಾಮಿಗಳೂ ಆಗಮಿಸುತ್ತಿದ್ದರು. ಜಿಜ್ಞಾಸುಗಳಾದ ಬ್ರಾಹ್ಮಣಪಂಡಿತರೂ ಪಾರ್ಸಿಜನರೂ, ಜೈನಮತೀಯರೂ ಇತರರೂ ಬಂದು ತಮ್ಮ ಸಂಶಯಗಳಿಗೆ ಉತ್ತರವನ್ನು ಪಡೆದು ಸಂತೃಪ್ತರಾಗಿ ತೆರಳುತ್ತಿದ್ದರು. ಅಗಡಿ ಶ್ರೀ ಶೇಷಾಚಲ ಸದ್ಗುರುಗಳೂ ಆಗಮಿಸಿದ್ದರು.

*ಗೊಂದಾವಳಿ ಬ್ರಹ್ಮಚೈತನ್ಯರು*

ಸುಂದರವಾದ ಇನ್ನೊಂದು ಘಟನೆಯನ್ನು ಇಲ್ಲಿ ನಿರೂಪಿಸಬೇಕಾಗಿದೆ. ಗೊಂದಾವಳಿ ಬ್ರಹ್ಮ ಚೈತನ್ಯರ ಮಹಿಮೆಯನ್ನು ಯಾರು ಕೇಳಿಲ್ಲ? ಇವರಿಗೆ ಬಾಲ್ಯದಲ್ಲಿ ಗಣಪತಿ ಎಂದು ಹೆಸರಿತ್ತು. ಶ್ರೀರಾಮಭಕ್ತರಾದ ತಂದೆ ತಾಯಿಗಳು ಈತನ ಉಪನಯನದ ವೇಳೆಯಲ್ಲಿ ಶ್ರೀರಾಮನಾಮವನ್ನೂ ಉಪದೇಶಿಸಿದರು. ಬಾಲ್ಯದಿಂದಲೇ ಅಂತರ್ಮುಖನಾಗಿ ಪರಮಾತ್ಮನ ಧ್ಯಾನದಲ್ಲಿ ನಿರತನಾಗುತ್ತಿದ್ದ ಗಣಪತಿ ತನ್ನ ಹದಿನೈದನೆಯ ವಯಸ್ಸಿನಲ್ಲಿ ಮನೆಯನ್ನು ಬಿಟ್ಟು, ಶ್ರೀ ಸಿದ್ಧಾರೂಢರಂತೆ, ಗುರುವನ್ನು ಅನ್ವೇಷಿಸುತ್ತ ಹೊರಟನು. ತುಕಾರಾಮ ಚೈತನ್ಯರೆಂಬ ಮಹಾತ್ಮರನ್ನು ಕಂಡು ಅವರ ಶಿಷ್ಯನಾದನು. ಚೈತನ್ಯರು ಕಠೋರ ರೀತಿಯಲ್ಲಿ ಶಿಷ್ಯನನ್ನು ಪರೀಕ್ಷಿಸಿ, ಒಂದು ದಿನ " ಗಣಪತಿ, ನೀನೇ ಧನ್ಯ. ನೀನು ಶುದ್ಧಚಿತ್ತನಾಗಿರುವೆ. ನಿನ್ನ ಮೇಲೆ ಭಗವಂತನ ಕೃಪೆ ನೆಲೆಸಿದೆ. ಇನ್ನು ನೀನು ಹೊಸದಾಗಿ ಕಲಿಯಬೇಕಾದ್ದೇನಿಲ್ಲ. ನೀನು

ಬ್ರಹ್ಮಚೈತನ್ಯನೆಂದು ವಿಖ್ಯಾತನಾಗು" ಎಂದು ಆಶೀರ್ವದಿಸಿ ಕಳಿಸಿದರು. ಅವರೇ ಸುಪ್ರಸಿದ್ಧರಾದ ಗೊಂದಾವಳಿ ಬ್ರಹ್ಮಚೈತನ್ಯರು. ಅವರು ಒಮ್ಮೆ ಸಿದ್ಧಾರೂಢರ ದರ್ಶನಾರ್ಥವಾಗಿ ಹುಬ್ಬಳ್ಳಿಗೆ ಬಂದು ಮಠದ ಸಮೀಪಕ್ಕೆ ಆಗಮಿಸಿದರು. ಆರೂಢರು ಅವರನ್ನು ಎದುರುಗೊಳ್ಳಲು ಹೋದರು. ಇಬ್ಬರೂ ಪರಸ್ಪರ ಗಾಢವಾಗಿ ಆಲಿಂಗಿಸಿಕೊಂಡರು. ಶ್ರೀ ಸಿದ್ಧಾರೂಢರು ಅವರನ್ನು ಮಠದೊಳಗೆ ಕರೆದುಕೊಂಡು ಹೋಗಿ ತಮ್ಮ ಪೀಠದಲ್ಲಿಯೇ ಕುಳ್ಳಿರಿಸಿಕೊಂಡು ಉಪಚರಿಸಿದರು. ಆಗ ಬ್ರಹ್ಮ ಚೈತನ್ಯರರು ಶ್ರೀಸಿದ್ಧಾರೂಢರನ್ನು ಕುರಿತು "ಮಹಾರಾಜ, ನನ್ನ ಈ ದೇಹವು ಸದಾ 'ರಾಮ, ರಾಮ' ಎಂದು ಜಪಿಸುತ್ತಲೇ ಇರುವುದು. ಮುಮುಕ್ಷುಗಳಿಗೆ ಇದನ್ನೇ ಜಪಿಸುವಂತೆ ನಾನು ಉಪದೇಶಿಸುತ್ತೇನೆ. ಇದು ಯೋಗ್ಯವೋ ಹೇಗೆ? ನಿಮ್ಮ ಅಭಿಪ್ರಾಯವೇನು?" ಎಂದು ಕೇಳಿದರಂತೆ. ಅದಕ್ಕೆ ಸಿದ್ಧಾರೂಢರು ಈ ಜಗತ್ತಿನೊಳಗೆ ನಾಮಜಪಕ್ಕಿಂತ ಯಾವುದೂ ದೊಡ್ಡದಲ್ಲ. ರಾಮನಾಮ ತಾರಕಮಂತ್ರವೆಂದು ಪ್ರಖ್ಯಾತವಾಗಿದೆ. ಶಿವನೂ ಸಹ ರಾಮನಾಮವನ್ನು ಜಪಿಸುತ್ತಾನೆಂದು ಪುರಾಣಗಳಲ್ಲಿದೆ. ಸರ್ವಭೂತಾಂತರ್ಗತನಾದ ಆತ್ಮಾರಾಮನಿಗೆ ರಾಮ ಎಂದು ಹೆಸರು. ಸಂಸಾರದೊಳಗೆ ಸಾರಭೂತವಾದದ್ದು ರಾಮ ಜಪ. ನಾನೂ ಅದನ್ನೇ ಜಪಿಸುತ್ತೇನೆ. ನೀವು ರಾಮ ಜಪವನ್ನು ಉಪದೇಶಿಸುತ್ತಿರುವುದು ಜಗತ್ತಿನ ಉದ್ಧಾರಕ್ಕಾಗಿ. ಇದಕ್ಕಿಂತ ಹೆಚ್ಚಾಗಿ ಸಂತರು ಮಾಡಬೇಕಾದ ಕಾರ್ಯವೇನಿದೆ?" ಎಂದರಂತೆ. ಬ್ರಹ್ಮಚೈತನ್ಯರಿಗೆ ತುಂಬ ಆನಂದವಾಯಿತು. ಮಹಾತ್ಮರ ಮಹಿಮೆಯನ್ನು ಮಹಾತ್ಮರು ಮಾತ್ರ ಅರಿಯಬಲ್ಲರು. ಶ್ರೀಸಿದ್ಧಾರೂಢರು ಜ್ಞಾನೇಶ್ವರರ ಅವತಾರವೆಂದು ಬ್ರಹ್ಮಚೈತನ್ಯರು ಹೇಳುತ್ತಿದ್ದರು. ಬ್ರಹ್ಮಚೈತನ್ಯರು ಸಮರ್ಥರಾಮದಾಸರ ಅವತಾರವೆಂದು ಸಿದ್ಧಾರೂಢರು ನಂಬಿದ್ದರು. ಆರೂಢರು ಶ್ರೀರಾಮನವಮೀ ಪುನರ್ವಸು ನಕ್ಷತ್ರದಲ್ಲಿ ಅವತರಿಸಿದರೆಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಹೀಗೆ ಎಷ್ಟೋ ಜನ ಮಹಾಪುರುಷರು ಸಿದ್ಧಾರೂಢರ ದರ್ಶನಕ್ಕೆ ಬರುತ್ತಿದ್ದರು.

## ೬

## ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾ ಪರಃ

*( ಬ್ರಹ್ಮವೊಂದೇ ಸತ್ಯ. ಜಗತ್ತು ಕಲ್ಪಿತ.*
*ಜೀವಾತ್ಮನು ಬ್ರಹ್ಮನೇ ಸರಿ. ಬೇರೆಯಲ್ಲ.)*

ಅದ್ವೈತ ದರ್ಶನದ ಈ ಸಿದ್ಧಾಂತವು ಪ್ರಸಿದ್ಧವಿದೆ. ಇದರಲ್ಲಿ 'ಬ್ರಹ್ಮಸತ್ಯಂ' ಎಂಬುದು ಸರ್ವರಿಗೂ ಸಂಮತವಾದದ್ದು. ಪರಮಾತ್ಮನು ಸತ್ಯನೂ ನಿತ್ಯನೂ ಆಗಿದ್ದಾನೆಂಬುದರಲ್ಲಿ ಮತಭೇದವೇನೂ ಇಲ್ಲ. 'ಜಗನ್ಮಿಥ್ಯಾ' ಎಂಬುದೇ ವಿವಾದಗ್ರಸ್ತವಾದ ವಿಷಯು. ಇತರ ಯಾವ ದಾರ್ಶನಿಕರೂ ಇದನ್ನೊಪ್ಪುವದಿಲ್ಲ. ಎಂತಹ ಪಂಡಿತನಿಗೂ ಇದನ್ನು ಸಮಂಜಸವಾಗಿ ತಿಳಿಸಿಕೊಡುವುದು ಕಠಿಣವಾಗಿದೆ. ಆರೂಢರು, ಶ್ರೀಶಂಕರಾಚಾರ್ಯರು ಪ್ರತಿಪಾದಿಸಿದ ಕೇವಲಾದ್ವೈತವನ್ನು ಪೂರ್ಣವಾಗಿ ನಂಬಿ ಪ್ರಚುರಪಡಿಸಿದ್ದಾರೆ. ಅದ್ವೈತದ ಮುಖ್ಯಪ್ರತಿಪಾದನೆ ಇರುವುದು ಜಗನ್ಮಿಥ್ಯಾತ್ವದ ದೃಢೀಕರಣದಲ್ಲಿ. ಇದೇ ಸಕಲೋಪನಿಷತ್ತುಗಳ ಮಥಿತಾರ್ಥವಾದರೂ, ಜನರ ಮನಸ್ಸಿಗೆ ನಾಟುವಂತೆ ತಿಳಿಸಿ ಕೊಡುವುದು ಕಷ್ಟಕರವೇ ಹೌದು. ಇದಕ್ಕೆ ಯುಕ್ತಿವಾದವನ್ನು ಸಮೀಚೀನವಾದ ದೃಷ್ಟಾಂತವನ್ನೂ ಅವಲಂಬಿಸಬೇಕಾಗುತ್ತದೆ. ಶ್ರುತಿಸಂಮತವಾದ ವಿಷಯುವನ್ನು ಪ್ರತಿಪಾದಿಸುವ ಯುಕ್ತಿಗಳು ಗ್ರಾಹ್ಯವಾದವುಗಳೇ. ಸಿದ್ಧಾರೂಢರು ಜಗನ್ಮಿಥ್ಯೆಯೆಂಬುದನ್ನು ಹೇಗೆ ತಿಳಿಸಿಕೊಡುತ್ತಿದ್ದರೆಂಬುದನ್ನೀಗ ಪರಿಶೀಲಿಸುವುದು ಆವಶ್ಯಕ. ಆರೂಢರ ಬೋಧೆಯು ನಮ್ಮ ದುರ್ದೈವದಿಂದ ಸರಿಯಾಗಿ ದೊರಕಿಲ್ಲ. ಆದರೆ ಹುಬ್ಬಳ್ಳಿ ಶ್ರೀಸಿದ್ಧಾರೂಢ ಮಠದಿಂದ ೧೯೬೩ನೇ ಇಸವಿಯಲ್ಲಿ ಪ್ರಕಟವಾದ 'ಆರೂಢದರ್ಶನ' ಎಂಬ ಸ್ಮರಣ ಸಂಚಿಕೆಯಲ್ಲಿ ಶ್ರೀದಯಾನಂದ ಸರಸ್ವತೀ ಸ್ವಾಮಿಗಳು "ಶಾಸ್ತ್ರವಿಷಯುದಲ್ಲಿ ಶ್ರೀ ಜಗದ್ಗುರು ಸಿದ್ಧಾರೂಢರ ತರ್ಕದೃಷ್ಟಿ" ಎಂಬ ಒಂದು ಲೇಖನವನ್ನು ಬರೆದಿದ್ದಾರೆ. ಜಗನ್ಮಿಥ್ಯೆಯೆಂಬುದನ್ನು ಆರೂಢರು ಹೇಗೆ ಪ್ರತಿಪಾದಿಸುತ್ತಿದ್ದರೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಮನನೀಯುವಾದ ಆ ಲೇಖನದ ಸಾರವನ್ನು

ಸಂಗ್ರಹಿಸಿ ಬರೆಯುವುದು ಆವಶ್ಯಕವೆನಿಸಿತು. ಇದಕ್ಕಾಗಿ ಆ ಲೇಖಕರಿಗೆ ನಾನು ಕೃತಜ್ಞನಾಗಿದ್ದೇನೆ. ಸಿದ್ಧಾರೂಢರ ಪ್ರತಿಪಾದನೆ ಈ ರೀತಿ ಇದೆ–

ಈ ಜಗತ್ತೆಂಬುದು ಕೇವಲ ಕಲ್ಪಿತವಾದದ್ದು. ಇದು ವಾಸ್ತವದಲ್ಲಿ ಇರುವುದಾಗಿದ್ದರೆ ಎಲ್ಲಿಂದ ಹುಟ್ಟಿತು, ಹೇಗೆ ಹುಟ್ಟಿತು ಎಂದು ಹೇಳಬಹುದಾಗಿತ್ತು. ಇದು ಸತ್ ಅಲ್ಲ, ಪರಮಾರ್ಥದಲ್ಲಿ ಇಲ್ಲವಾದ್ದರಿಂದ. ಅಸತ್ ಕೂಡ ಅಲ್ಲ. ಈಗ ಅನುಭವಕ್ಕೆ ಬರುವುದರಿಂದ. ಇದನ್ನು ಅನಿರ್ವಚನೀಯ ಎನ್ನುತ್ತಾರೆ. ಜಗತ್ತು ಅನುಭವಕ್ಕೆ ಬರತಕ್ಕದ್ದೂ ಸಹ ಅಜ್ಞಾನಿಗಳಿಗೇ ಹೊರತು ಜ್ಞಾನಿಗಳಿಗಲ್ಲ. ಇಲ್ಲಿರತಕ್ಕವರೆಲ್ಲರೂ ಜಗತ್ತನ್ನು ಒಪ್ಪಿಕೊಂಡೇ ವ್ಯವಹಾರ ನಡೆಸುತ್ತಿದ್ದಾರೆ. ಆದ್ದರಿಂದ ಈ ಲೋಕದಲ್ಲಿ ಜ್ಞಾನಿಗಳೇ ಇಲ್ಲವೆನ್ನುವುದೂ ಸರಿಯಲ್ಲ. ಜ್ಞಾನಿಗಳಿದ್ದಾರೆ. ಅವರ ವ್ಯವಹಾರವು ಜಗತ್ತು ಸತ್ಯವೆಂದು ಬುದ್ಧಿಪೂರ್ವಕವಾಗಿ ನಡೆಯುವುದಿಲ್ಲ. ಒಬ್ಬ ಗುಮಾಸ್ತನು ನಮ್ಮ ಅಂಗಡಿ ಎಂದೇ ವ್ಯವಹರಿಸುತ್ತಾನೆ. ಆದರೆ ಅಂಗಡಿ ತನ್ನದಲ್ಲವೆಂದು ಅವನಿಗೆ ಗೊತ್ತಿರುತ್ತದೆ. ಅಂತೆಯೇ ಜ್ಞಾನಿಯೂ ಜಗತ್ತನ್ನು ಮಿಥ್ಯೆಯೆಂದು ತಿಳಿದಿದ್ದರೂ ಲೋಕ ವ್ಯವಹಾರದಂತೆಯೇ ನಡೆದುಕೊಳ್ಳುತ್ತಾನೆ.

ಜಗತ್ತೆಂದರೆ ಯಾವುದು? ನಮ್ಮೆದುರಿಗೆ ಕಾಣುವುದೆಲ್ಲವೂ ಜಗತ್ತು ಎನ್ನಬೇಕು. ಸ್ವಪ್ನದಲ್ಲಿ ಕಾಣುವುದೂ ಜಗತ್ತೆನ್ನಬಹುದಷ್ಟೆ. ಎಚ್ಚರವಾದಾಗ ಆ ಜಗತ್ತು ಇರುವುದೇ ಇಲ್ಲ. ಸ್ವಪ್ನದ ಜಗತ್ತು ಮಿಥ್ಯೆ ಎಂದು ಸರ್ವರ ಅನುಭವದಲ್ಲಿಯೂ ಇದೆ. ಅನುಭವದಲ್ಲಿರುವುದೆಲ್ಲ ಸತ್ಯವೆಂದು ಹೇಳುವುದು ಹೇಗೆ? ಇನ್ನು ನಾಮ, ರೂಪ, ಕ್ರಿಯೆಗಳಿಂದ ಯುಕ್ತವಾಗಿರುವುದು ಜಗತ್ತು ಎನ್ನುವುದಾದರೆ, ನಾಮರೂಪ ಕ್ರಿಯೆಗಳ ಸಮುದಾಯವು (ಅವಯವ)–ಇವು ಪರಸ್ಪರ ಭಿನ್ನವೆ? ಅಭಿನ್ನವೆ? ಎಂಬ ಪ್ರಶ್ನೆ ಹುಟ್ಟುತ್ತದೆ. ಭಿನ್ನವೆಂದು ಹೇಳಿದರೆ ಸಮುದಾಯವಾದ ಜಗತ್ತಿಗೆ ನಾಮ, ರೂಪ, ಕ್ರಿಯೆಗಳನ್ನು ಬಿಟ್ಟು ತನ್ನ ಸ್ವರೂಪವೇ ಇರುವುದಿಲ್ಲ. ಆದ್ದರಿಂದ ಭಿನ್ನವೆಂಬುದು ಸರಿಯಲ್ಲ. ಅಭಿನ್ನವೆಂದರೆ, ಕೇವಲ

ನಾಮದಲ್ಲಿಯೂ ರೂಪದಲ್ಲಿಯೂ ಕ್ರಿಯೆಯಲ್ಲಿಯೂ ಜಗತ್ತೆಂಬ ವ್ಯವಹಾರ ಬರಬೇಕು. ಹಾಗೆ ವ್ಯವಹಾರವಿಲ್ಲ. ಆದ್ದರಿಂದ ಅನಿರ್ವಚನೀಯವೆಂದು ಹೇಳಬೇಕಾಯಿತು. ಅನಿರ್ವಚನೀಯವಾದ್ದರಿಂದ ಜಗತ್ತು ಮಿಥ್ಯೆ.

ಹಾಗಾದರೆ ಬಂಧ, ಮೋಕ್ಷ, ಮೋಕ್ಷವನ್ನು ಪ್ರತಿಪಾದಿಸುವ ವೇದ-ಇವೂ ಮಿಥ್ಯೆಯೆನ್ನಬೇಕಾಗುತ್ತದೆ. ಬ್ರಹ್ಮಾತಿರಿಕ್ತವಾಗಿ ತೋರತಕ್ಕದ್ದೆಲ್ಲವೂ ಸುಳ್ಳೆಂದಲ್ಲವೆ ಒಪ್ಪಿಕೊಂಡಿರುವುದು? ಈ ಪ್ರಶ್ನೆಗೆ ಹೌದು- ಎಂದೇ ಉತ್ತರ. ಆತ್ಮನಿಗೆ ಸಂಸಾರಬಂಧವಾದದ್ದು ಸತ್ಯವೆಂದರೆ ಬಂಧಕ್ಕೆ ನಾಶವೇ ಇಲ್ಲದೆ ಹೋಗುತ್ತದೆ. ಆಗ ಮೋಕ್ಷವೇ ಇಲ್ಲವೆನ್ನಬೇಕಾದೀತು. ಏಕೆಂದರೆ, ಯಾವುದು ಸತ್ಯವೋ ಅದಕ್ಕೆ ನಾಶವಿಲ್ಲ. ನಾಶವಿದ್ದರೆ ಅದು ಸತ್ಯವಲ್ಲ. ಹಾಗೆಯೇ ಮೋಕ್ಷವು ಹೊಸದಾಗಿ ಬರುತ್ತದೆಯೆಂದರೆ ಮೋಕ್ಷ ಹೊಂದಿದವನು ಮತ್ತೆ ಹುಟ್ಟಬೇಕಾದೀತು. ಏಕೆಂದರೆ, ಮೋಕ್ಷವೂ ಅನಿತ್ಯವಾಗಿ ಬಿಡುತ್ತದೆ. ಯಾವುದು ಹುಟ್ಟುತ್ತದೆಯೋ ಅದಕ್ಕೆ ನಾಶವಿರಲೇಬೇಕು. ಆದ್ದರಿಂದ ಬಂಧ ಮೋಕ್ಷಗಳು ಸತ್ಯವಲ್ಲ. ಆತ್ಮನು ಸದಾ ಮುಕ್ತನಾಗಿಯೇ ಇದ್ದಾನೆ. ಅಜ್ಞಾನದಿಂದ ಬದ್ಧನಾಗಿದ್ದೇನೆಂದು ಭ್ರಾಂತನಾಗಿದ್ದಾನೆ. ಈ ಭ್ರಾಂತಿ ಹೋಗುವುದೇ ಮೋಕ್ಷ.

ಮೋಕ್ಷ ಸ್ಥಿತಿಯಲ್ಲಿ ವೇದವೂ ಇಲ್ಲ. ಶಾಸ್ತ್ರವೂ ಇಲ್ಲ. 'ಯತ್ರ ವೇದಾ ಅವೇದಾಃ' ಎಂದು ವೇದವೇ ಹೇಳಿಕೊಂಡಿದೆ. ವೇದವು ಅವೇದವಾಗಿ ಬಿಡುತ್ತದೆ. ಮಿಥ್ಯೆ ಎಂದರ್ಥ. ಆದ್ದರಿಂದ ಬಂಧ, ಮೋಕ್ಷ, ಶಾಸ್ತ್ರ ಇವು ಪರಮಾರ್ಥದಲ್ಲಿ ಮಿಥ್ಯೆಯಾದವು. ಯಾರು ಜಗತ್ತನ್ನೂ ಬಂಧವನ್ನೂ ಸತ್ಯವೆಂದು ಭ್ರಾಂತಿಯಿಂದ ನಂಬಿಕೊಂಡಿದ್ದಾರೋ ಅವರಿಗಾಗಿ ಶಾಸ್ತ್ರವು ಹೊರಟಿದೆ. 'ಯಕ್ಷಾನುರೂಪೋ ಬಲಿಃ' ಎಂಬ ನ್ಯಾಯವಿದೆ. ಯಕ್ಷನ ಸ್ವಭಾವಕ್ಕೆ ತಕ್ಕಂತೆ ಅವನಿಗೆ ಬೇಕಾದ ಬಲಿಯನ್ನು

ಕೊಡಬೇಕು. ಹಾಗೆಯೇ ಅಜ್ಞಾನಿಗೆ ಶಾಸ್ತ್ರವು ಬೇಕಾಗಿದೆ. ಯಾರಿಗೆ "ಬ್ರಹ್ಮಸತ್ಯಂ ಜಗನ್ಮಿಥ್ಯಾ" ಎಂಬುದು ಅನುಭವಕ್ಕೆ ಬಂದಿಲ್ಲವೋ ಅವರೆಲ್ಲರೂ ಭ್ರಾಂತರೇ ಸರಿ."

ಇನ್ನು "ಜೀವೋ ಬ್ರಹ್ಮೈವ ನಾಪರಃ- ಜೀವಾತ್ಮನು ಬ್ರಹ್ಮವೇ ಸರಿ. ಆತನು ಪರಮಾತ್ಮನಿಗಿಂತ ಬೇರೆಯಲ್ಲ" ಎಂಬುದನ್ನು ಆರೂಢರು ಹೇಗೆ ಪ್ರತಿಪಾದಿಸುತ್ತಿದ್ದರೆಂಬುದನ್ನು ನೋಡೋಣ.

"ಜಗತ್ತು ಸತ್ಯವೆಂದು ನಂಬಿಕೊಂಡವರು ಬಹಳ ಮಂದಿ ಇದ್ದಾರೆ. ಅವರಿಗಾಗಿ ಸಾಂಖ್ಯಾದಿ ಶಾಸ್ತ್ರಗಳು ಹೊರಟಿವೆ. ಅವೆಲ್ಲವೂ ದ್ವೈತಶಾಸ್ತ್ರಗಳು. ದ್ವೈತಿಗಳು ಪಂಚಭೇದಗಳನ್ನೊಪ್ಪುತ್ತಾರೆ. ಜೀವಾತ್ಮ-ಪರಮಾತ್ಮ, ಜೀವಾತ್ಮ-ಜಡ, ಜೀವ-ಜೀವ, ಜಡ-ಜಡ, ಪರಮಾತ್ಮ-ಜಡ ಇವುಗಳಿಗೆ ಪರಸ್ಪರ ಭೇದಗಳಿವೆಯೆಂದು ಹೇಳುತ್ತಾರೆ. ಅದ್ವೈತಿಗಳು ಈ ಭೇದವನ್ನು ಒಪ್ಪುವುದಿಲ್ಲ. ಮೇಲ್ನೋಟಕ್ಕೆ ಹೌದೆಂದು ತೋರುವ ಈ ಪಂಚಭೇದಗಳಿಗೂ ಭ್ರಾಂತಿಯೇ ಕಾರಣ. ಭ್ರಾಂತಿಯನ್ನೇ ಅವಿದ್ಯೆಯೆಂದೂ ಅಧ್ಯಾಸವೆಂದೂ ಶಾಸ್ತ್ರಕಾರರು ಬರೆದಿದ್ದಾರೆ. ಚಿತ್ತಶುದ್ಧಿಯಾಗದ ಹೊರತು ಸತ್ಯವು ತಿಳಿಯುವುದಿಲ್ಲ. ಇದ್ದುದನ್ನು ಇದ್ದಂತೆ ತಿಳಿಯಲು ಚಿತ್ತಶುದ್ಧಿ ಇರಬೇಕು. ನಾನು, ನೀನು, ಅವನು-ಎಂದು ತೋರುವ ಜೀವಭೇದವು ಉಪಾಧಿಕೃತವಾದದ್ದು. ಆಕಾಶವು ಒಂದೇ ಆಗಿದ್ದರೂ ಮನೆ, ಮಠ, ಘಟ, ಹರವಿ-ಮೊದಲಾದ ಉಪಾಧಿಗಳಿಂದ ಮನೆ ಮೊದಲಾದ್ದರಲ್ಲಿರುವ ಆಕಾಶವು ಬೇರೆಬೇರೆ ಎಂದು ತೋರುತ್ತದೆ. ಮನೆಯಲ್ಲಿರುವ ಗೃಹಾಕಾಶದಲ್ಲಿ ಪ್ರಾಪಂಚಿಕ ವ್ಯವಹಾರ ನಡೆಯುತ್ತದೆ. ಮಠಾಕಾಶದಲ್ಲಿ ಆಧ್ಯಾತ್ಮಿಕ ವ್ಯವಹಾರ ನಡೆಯುತ್ತದೆ. ಘಟಾಕಾಶದಲ್ಲಿ ನೀರನ್ನು ತುಂಬಿ ತರಲಾಗುತ್ತದೆ. ಹಾಗೆಯೇ ಹುಡುಗ-ಮುದುಕ, ಗಂಡಸು-ಹೆಂಗಸು, ಒಳ್ಳೆಯವನು-ಕೆಟ್ಟವನು ಮುಂತಾದ ಭೇದವು ಶರೀರವೆಂಬ ಉಪಾಧಿಯಿಂದ

ಕಾಣುತ್ತದೆಯೋ ಹೊರತು ಆತ್ಮನು ಬೇರೆಯಾದ್ದರಿಂದಲ್ಲ. ಆಕಾಶದಂತೆ ಆತ್ಮನು ಒಬ್ಬನೇ 'ಆಕಾಶವತ್ ಸರ್ವಗತಶ್ಚ ನಿತ್ಯಃ' ಎಂದು ಶಾಸ್ತ್ರ ವಾಕ್ಯವಿದೆ. ಹೇಗೆ ಉಪಾಧಿಭೇದದಿಂದ ಘಟಾಕಾಶವು ಚಿಕ್ಕದಾಗಿಯೂ ಮಠಾಕಾಶವು ದೊಡ್ಡದಾಗಿಯೂ ಕಾಣುತ್ತದೆಯೋ ಹಾಗೆ ಒಬ್ಬನು ಸುಖಿಯಾಗಿಯೂ ಇನ್ನೊಬ್ಬನು ದುಃಖಿಯಾಗಿಯೂ ಒಬ್ಬನು ರೋಗಿಷ್ಠನಾಗಿಯೂ ಇನ್ನೊಬ್ಬನು ಆರೋಗ್ಯವಂತನಾಗಿಯೂ ನಾನಾಭೇದಗಳು ಕಾಣುತ್ತವೆ. ಅವು ಉಪಾಧಿಗೆ ಸಂಬಂಧಿಸಿದವೇ ಹೊರತು ಆತ್ಮನಿಗಲ್ಲ. ಆದ್ದರಿಂದಲೇ ಒಬ್ಬನು ಮುಕ್ತನಾದರೂ ಇನ್ನೊಬ್ಬನು ಬದ್ಧನಾಗಿಯೇ ಇರುತ್ತಾನೆ. ಒಬ್ಬನು ಮುಕ್ತನಾದರೆ ಎಲ್ಲರೂ ಮುಕ್ತರಾಗಬೇಕಾಗುತ್ತದೆ-ಎಂಬ ಆಪಾದನೆ ತಿರುಳಿಲ್ಲದ್ದು. ಎಲ್ಲರೂ ಮುಕ್ತರೇ; ಬದ್ಧರಿಲ್ಲವೆಂದೇ ಅದ್ವೈತವು ಹೇಳುತ್ತದೆ. ನಾಶವಾಗಬೇಕಾದ್ದು ಬಂಧವಲ್ಲ, ಅಜ್ಞಾನ. ಯಾವ ಜೀವಾತ್ಮನ ಅಂತಃಕರಣವೆಂಬ ಉಪಾಧಿಯು 'ಅಹಂ ಬ್ರಹ್ಮಾಸ್ಮಿ' ಎಂಬ ಶಾಸ್ತ್ರಜ್ಞಾನದಿಂದ ಬಾಧಿತವಾಗಿ ಅಜ್ಞಾನವು ಹೋಗುತ್ತದೆಯೋ ಅವನು ಮುಕ್ತನಾಗುತ್ತಾನೆ. ಇನ್ನುಳಿದವರು ಮುಕ್ತರಾಗುವುದಿಲ್ಲ. ಘಟವನ್ನು ಒಡೆದಾಗ ಘಟಾಕಾಶವು ಮುಕ್ತವಾಯಿತು. ಇನ್ನೊಂದು ಘಟದ ಆಕಾಶವು ಮುಕ್ತವಾಗಲಿಲ್ಲ. ಹೀಗೆಯೇ ಒಬ್ಬನು ಸುಖಿಯಾಗಿದ್ದರೆ ಇನ್ನೊಬ್ಬನು ದುಃಖಿಯಾಗಿರಬಹುದು. ಬಾಧಕವೇನೂ ಇಲ್ಲ.

ಈ ದೃಷ್ಟಾಂತದಿಂದ ಜೀವ-ಜೀವರಿಗೆ ಭೇದವಿಲ್ಲ ಎಂದು ಒಪ್ಪಬಹುದು. ಜೀವಾತ್ಮನಿಗೂ ಪರಮಾತ್ಮನಿಗೂ ಭೇದವಿಲ್ಲವೆನ್ನುವುದು ಹೇಗೆ? ಜೀವಾತ್ಮನು ಕರ್ಮಫಲದಿಂದ ಲಿಪ್ತನಾಗಿರುತ್ತಾನೆ. ಇವನು ಅಜ್ಞಾನಿ. ಪರಮಾತ್ಮನಿಗೆ ಯಾವ ಕರ್ಮದ ಲೇಪವೂ ಇಲ್ಲ. ಅವನು ಸರ್ವಜ್ಞ, ಸರ್ವಶಕ್ತ. ಜೀವಾತ್ಮನು ಅಲ್ಪಜ್ಞ. ಇವನ ಶಕ್ತಿ ತುಂಬ ಅಲ್ಪ ಎಂಬ ಪ್ರಶ್ನೆ ಉಳಿಯುತ್ತದೆ. ಉತ್ತರವೇನೆಂದರೆ, ಜೀವ-ಜೀವರ ಭೇದವು ಹೇಗೆ ಔಪಾಧಿಕವೋ ಹಾಗೆ ಜೀವಾತ್ಮ-ಪರಮಾತ್ಮರ ಭೇದವೂ

ಔಪಾಧಿಕವೇ. ವಾಸ್ತವದಲ್ಲಿ ಪರಮಾತ್ಮನೇ ದೇಹದಲ್ಲಿ ಜೀವಾತ್ಮನೆಂದು ಹೆಸರು ಪಡೆದಿದ್ದಾನೆ. 'ಅನೇನ ಜೀವೇನ ಆತ್ಮನಾ ಅನುಪ್ರವಿಶ್ಯ' 'ತತ್ ಸೃಷ್ಟ್ವಾ ತದೇವಾನುಪ್ರಾವಿಶತ್' ಎಂಬ ಶ್ರುತಿಯು ದೇಹವನ್ನು ಸೃಷ್ಟಿಮಾಡಿ ಪರಮಾತ್ಮನೇ ಜೀವರೂಪದಲ್ಲಿ ಪ್ರವೇಶ ಮಾಡಿದನು ಎಂದು ಸ್ಪಷ್ಟವಾಗಿ ಘೋಷಿಸಿದೆ. ಉಪಾಧಿಯಿಂದಲೇ ಸರ್ವಜ್ಞತ್ವ, ಸರ್ವಶಕ್ತತ್ವಗಳು ಮರೆಯಾಗಿವೆ. ಕರ್ಮದ ಲೇಪವು ಉಪಾಧಿಯಾದ ಅಂತಃಕರಣಕ್ಕೇ ಹೊರತು ಆತ್ಮನಿಗಲ್ಲ. 'ತತ್ ತ್ವಮಸಿ' ಎಂದು ಉದ್ದಾಲಕನು ತನ್ನ ಮಗನಾದ ಶ್ವೇತಕೇತುವಿಗೆ ಒಂಬತ್ತು ಸಲ ಉಪದೇಶಿಸಿದ್ದಾನೆ. ಒಂಬತ್ತು ಸಲ ಏಕೆ ಉಪದೇಶಿಸಿದ? ಇದು ಕಠಿಣ ವಿಷಯವಾದ್ದರಿಂದ ಒಂದು ಸಲ ಹೇಳಿದರೆ ವಿಶ್ವಾಸವು ಮೂಡುವುದಿಲ್ಲವೆಂದು ಒಂಬತ್ತು ಸಲ ಹೇಳಬೇಕಾಯಿತು.

ಇದನ್ನು ಮನದಟ್ಟು ಮಾಡಿಕೊಳ್ಳುವುದು ಕಷ್ಟ. ಏಕೆಂದರೆ, ಅಜ್ಞಾನವು ಬಲವಾಗಿ ನಮ್ಮಲ್ಲಿ ಬೀಡುಬಿಟ್ಟಿದೆ. ಶ್ರವಣ, ಮನನ, ನಿದಿಧ್ಯಾಸನ-ಮುಂತಾದ ಸಾಧನಗಳನ್ನು ಮಾಡುತ್ತ ಬಂದರೆ, ಚಿತ್ತಶುದ್ಧಿಯಾಗುತ್ತದೆ. ಆಗ ಗುರೂಪದೇಶದ ಬಲದಿಂದ ಸತ್ಯವು ತಿಳಿಯುತ್ತದೆ. ಸಾಧನೆ ಬೇಕು. ನಿಷ್ಠೆಬೇಕು. ಅದೇನೂ ಇಲ್ಲದಾಗ ಇಂತಹ ಸಂಶಯಗಳು ತುಂಬಿಕೊಂಡಿರುತ್ತವೆ. ತಸ್ಮಿನ್ ದೃಷ್ಟೇ ಪರಾವರೇ = ಆತ್ಮಸ್ವರೂಪವು ನಿಚ್ಚಳವಾಗಿ ತಿಳಿದಾಗ ಛಿದ್ಯಂತೇ ಸರ್ವಸಂಶಯಾಃ = ಸಕಲ ಸಂದೇಹಗಳೂ ಕತ್ತರಿಸಿ ಬೀಳುತ್ತವೆ. ಅನುಮಾನ ಮೊದಲಾದ ಯುಕ್ತಿಗಳಿಂದಲೂ ವಿದ್ವಾಂಸರು ಜೀವಾತ್ಮ ಪರಮಾತ್ಮರ ಭೇದವನ್ನು ಸಾಧಿಸಿದ್ದಾರೆ.

ಬ್ರಹ್ಮ ಮತ್ತು ಜಡಪ್ರಪಂಚಗಳ ಅಭೇದವೆಂದರೆ ಬ್ರಹ್ಮವೇ ಜಗತ್ತಾಗಿದೆ ಎಂದು ತಿಳಿಯಬಾರದು. ಬ್ರಹ್ಮವು ಏನೂ ಆಗಿಲ್ಲ. ತಪ್ಪು

ತಿಳಿವಳಿಕೆಯಿಂದ ಜಗತ್ತು ತೋರುತ್ತದೆ ಎಂದಿಷ್ಟೇ ಅರ್ಥ. ಬ್ರಹ್ಮವಿಲ್ಲದೆ ಜಗತ್ತಿಲ್ಲ. ಜಗತ್ತಿಗೆ ಅಧಿಷ್ಠಾನವಾದದ್ದು ಬ್ರಹ್ಮ. ಹಗ್ಗವನ್ನು ಹಾವೆಂದು ಭ್ರಮಿಸುವುದುಂಟು. ಇದನ್ನು ರಜ್ಜುಸರ್ಪ ನ್ಯಾಯವೆನ್ನುತ್ತಾರೆ. ಹಗ್ಗವು ಹಾವಾಗಿರುವುದಿಲ್ಲ. ಹಗ್ಗವು ತನ್ನಷ್ಟಕ್ಕೆ ಇರುತ್ತದೆ. ಹಾವು ಮಾತ್ರ ಭ್ರಾಂತಿಯಿಂದ ಕಾಣುತ್ತದೆ. ಹಗ್ಗವನ್ನು ಬಿಟ್ಟು ಹಾವಿಲ್ಲ. ಹಗ್ಗಕ್ಕಿಂತ ಬೇರೆಯಾದ ಹಾವಿಲ್ಲ. ಅಷ್ಟರಿಂದ ಹಗ್ಗಹಾವುಗಳಿಗೆ ಭೇದವಿಲ್ಲ ಎಂಬ ವ್ಯವಹಾರ ಬರಬಹುದು. ಹಗ್ಗವೇನೂ ಹಾವಾಗಿರುವುದಿಲ್ಲ. ಹಾಗೆ ಬ್ರಹ್ಮವು ಜಗತ್ತಾಗಿ ಪರಿಣಮಿಸಿರುವುದಿಲ್ಲ. ಆದ್ದರಿಂದ ಅದ್ವೈತ ಸಿದ್ಧಾಂತವೇ ಸತ್ಯವಾದದ್ದು. ವೇದಶಾಸ್ತ್ರಗಳು ಹಾಗೆಯೇ ಹೇಳಿವೆ. ಆತ್ಮ ಜ್ಞಾನಿಯ ಸಾಕ್ಷಾತ್ ಅನುಭವಕ್ಕೆ ಸಹ ಬರುತ್ತದೆ. ಅನುಭವಕ್ಕೆ ಬಂದಿರುವುದನ್ನು ಅಂಗೀಕರಿಸಲೇಬೇಕು. 'ಏಕಮೇವಾದ್ವಿತೀಯಂ ಬ್ರಹ್ಮ' = ಬ್ರಹ್ಮವೆಂಬ ಒಂದೇ ಒಂದು ಪದಾರ್ಥವಿದೆ. ಎರಡನೆಯದಿಲ್ಲ.

ಈ ಪ್ರಕಾರವಾಗಿ ಸಿದ್ಧರು ತಮ್ಮ ಅನುಭವವನ್ನು ಜಿಜ್ಞಾಸುಗಳಾದ ಶಿಷ್ಯರಿಗೆ ಬಿಡಿಸಿ ಬಿಡಿಸಿ ತಿಳಿಸುತ್ತಿದ್ದರು.

ಶ್ಲೋಕಾರ್ಧೇನ ಪ್ರವಕ್ಷಾಮಿ ।
ಯದುಕ್ತಂ ಗ್ರಂಥ ಕೋಟಿಭಿಃ ॥
ಬ್ರಹ್ಮಸತ್ಯಂ ಜಗನ್ಮಿಥ್ಯಾ ।
ಜೀವೋ ಬ್ರಹ್ಮೈವ ನಾಪರಃ ॥

"ಕೋಟಿಗ್ರಂಥಗಳಲ್ಲಿ ಏನು ಹೇಳಿದೆಯೋ ಅದನ್ನು ಅರ್ಧ ಶ್ಲೋಕದಿಂದ ಹೇಳುತ್ತೇನೆ. ಅದೇನೆಂದರೆ–ಬ್ರಹ್ಮವೊಂದೇ ಸತ್ಯ. ಜಗತ್ತು ಕಲ್ಪಿತ. ಜೀವಾತ್ಮನು ಬ್ರಹ್ಮನೇ ಸರಿ. ಬೇರೆಯಲ್ಲ."

## ೧೦

## ಅರ್ಥಮನರ್ಥಂ ಭಾವಯ ನಿತ್ಯಂ

*('ಹಣವು ಅನರ್ಥಕಾರಿ' ಎಂದು ಸದಾ ತಿಳಿದಿರು.)*

ಸರ್ವರೂ ಅರ್ಥಿಸುವುದರಿಂದ (ಬಯಸುವುದರಿಂದ) ಹಣಕ್ಕೆ ಅರ್ಥವೆಂದು ಹೆಸರು. ಈ ಹಣವು ಅನರ್ಥಕಾರಿಯೆಂಬುದನ್ನು ಲೋಕವು ಎಂದೋ ಕಂಡುಕೊಂಡಿದೆ. ಸಂತರು ಈ ರೀತಿ ಬೋಧಿಸುತ್ತಲೇ ಬಂದಿದ್ದಾರೆ. ಜನರು ಕೇಳುತ್ತಲೇ ಬಂದಿದ್ದಾರೆ! ಒಂದು ಕಿವಿಯಲ್ಲಿ ಕೇಳಿ ಇನ್ನೊಂದು ಕಿವಿಯಿಂದ ಬಿಟ್ಟುಬಿಡುತ್ತಾರೆ! ಹಣದ ವ್ಯಾಮೋಹ ಅಂತಹುದು. ಹಣದಿಂದ ಸುಖವಿದೆಯೆಂಬ ನಂಬಿಕೆ ಜನರಲ್ಲಿ ತೀವ್ರವಾಗಿದೆ. ಇದು ಅನರ್ಥಕಾರಿ ಯಾವಾಗ? ಎಂದರೆ-ಯಾವಾಗ ಅವಶ್ಯಕತೆಗಿಂತ ಅಧಿಕವಾಗಿ ಧನಸಂಗ್ರಹವಾಗುತ್ತದೆಯೋ ಆವಾಗ.

ಶ್ರೀಸಿದ್ಧಾರೂಢರ ಮಹಿಮೆಯನ್ನು ಕೇಳಿದ ಭಕ್ತಾದಿಗಳು ಕಾಣಿಕೆಯಾಗಿ ಶ್ರೀಮಠಕ್ಕೆ ಧನವನ್ನು ಧಾರೆಯೆರೆದರು. ಬೇಕಾದಷ್ಟು ಸ್ಥಿರವಾದ ಆಸ್ತಿಯಾಯಿತು. ಚಿನ್ನ, ಬೆಳ್ಳಿ ಮುಂತಾದ ಚರ ಆಸ್ತಿಯೂ ಯಥೇಚ್ಛವಾಗಿ ಸಂಗ್ರಹವಾಯಿತು. ಅದರಿಂದ ಸಿದ್ಧಾರೂಢರ ಆನಂದವು ಏರಲೂ ಇಲ್ಲ, ಇಳಿಯಲೂ ಇಲ್ಲ. ಅವರು ಒಂದೇ ಬಗೆಯ ಆತ್ಮಾರಾಮ ಸ್ಥಿತಿಯಲ್ಲಿದ್ದರು. ಕಾಡುಮೇಡುಗಳಲ್ಲಿ ಹಸಿವಿನಿಂದ ಅಲೆಯುವಾಗ ಯಾವ ಆತ್ಮಾನಂದವು ತಾನೇತಾನಾಗಿ ಉಕ್ಕಿ ಹರಿಯುತ್ತಿತ್ತೋ ಅದು ಅದೇ ಪರಿಸ್ಥಿತಿಯಲ್ಲಿ ಹಾಗೆಯೇ ಉಕ್ಕಿ ಹರಿಯುತ್ತ ಒಂದೇ ಮಟ್ಟವನ್ನು ಕಾಪಾಡಿಕೊಂಡಿತ್ತು.

ಆರೂಢರು ಹುಬ್ಬಳ್ಳಿಗೆ ಮೊದಲು ಬಂದಾಗ ಉಜ್ಜಣ್ಣನವರ ಭೀಮಪ್ಪ ಎಂಬವನು ಅವರ ಸೇವೆಯನ್ನು ಮಾಡುತ್ತಿದ್ದನು. ಆತನ ಹೆಂಡತಿ ಲಕ್ಷ್ಮವ್ವ. ಇಬ್ಬರೂ ದೈವಭಕ್ತರು. ಆರೂಢರ ಸೇವೆಯನ್ನು

ಭಯಭಕ್ತಿಗಳಿಂದಲೇ ಮಾಡಿದರು. ಆರೂಢರು ಹುಬ್ಬಳ್ಳಿಯಲ್ಲಿ ನೆಲೆಸಲು ಈ ದಂಪತಿಗಳೇ ಕಾರಣರೆಂದು ಹೇಳಿದರೂ ಅಸಂಗತವಲ್ಲ. ಅವರಿಗೆ ಸಂತತಿ ಇರಲಿಲ್ಲ. ಸಿದ್ಧಪ್ಪ ಎಂಬವನನ್ನು ದತ್ತು ತೆಗೆದುಕೊಂಡಿದ್ದರು. ಆತನ ಪತ್ನಿ ಪಾರ್ವತಮ್ಮ. ಈ ಸಿದ್ಧಪ್ಪ ಹಾಗೂ ಪಾರ್ವತಮ್ಮನವರಿಗೆ ಒಂದು ಗಂಡು ಮಗು ಜನಿಸಿತು. ಇದು ಗುರುಗಳ ಅನುಗ್ರಹವೆಂದು ತಿಳಿದು ಆ ಶಿಶುವಿಗೆ ಗುರುನಾಥ ಎಂದು ನಾಮಕರಣ ಮಾಡಿದರು. ಗುರಪ್ಪ ಎಂದು ವ್ಯವಹಾರ ನಾಮವಿತ್ತು. ಆರೂಢರು ಆತನ ಶುಭಲಕ್ಷಣಗಳನ್ನು ಕಂಡು ಅವನಲ್ಲಿ ತುಂಬ ವಾತ್ಸಲ್ಯವನ್ನಿಟ್ಟಿದ್ದರು. ತಮ್ಮ ತರುವಾಯ ಆತನೇ ಮಠದ ಉತ್ತರಾಧಿಕಾರಿಯಾಗಬೇಕೆಂದು ಆಶಿಸಿದ್ದರು. ಹಾಗೆಯೇ ಆಯಿತು. ಶ್ರೀಗುರುನಾಥಾರೂಢರೆಂದು ಅವರು ಪ್ರಖ್ಯಾತರಾದರು.

ಪ್ರಕೃತದಲ್ಲಿ ಹೇಳಬೇಕಾದ್ದೇನೆಂದರೆ–ಆರೂಢರ ಮಠವು ಧನಕನಕ ದ್ರವ್ಯಗಳಿಂದ ತುಂಬಿ ಬೆಳೆಯಿತು. ಎಲ್ಲವೂ ಭಕ್ತಜನರಿಂದ ಬಂದದ್ದೆಂಬುದು ನಿರ್ವಿವಾದ. ಮಠ, ಮಠದ ಆಸ್ತಿ ಎಲ್ಲವೂ ಸಾರ್ವಜನಿಕವಾದದ್ದು. ಹೀಗಿರುವಾಗ ಗುರಪ್ಪನ ತಂದೆಯ ವರ್ಗದವರಿಗೆ ಮಠದ ಆಸ್ತಿಯ ಮೇಲೆ ಕಣ್ಣುಬಿದ್ದಿತು. ಮಠದ ಆಸ್ತಿಯನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳಬೇಕೆಂಬ ದುರ್ಬುದ್ಧಿಯುಂಟಾದದ್ದು ಆಶ್ಚರ್ಯವೆನಿಸಿದರೂ ಅಸಂಭವವಲ್ಲ. 'ಪುತ್ರಾದಪಿ ಧನಭಾಜಾಂ ಭೀತಿಃ = ಹಣವಂತರಿಗೆ ಮಗನಿಂದಲೂ ಭಯವಿದೆ' ಎಂಬ ಮಾತು ಸತ್ಯವಾದದ್ದು. ಮುಂದೆ ಹೇಳುವ ಅನರ್ಥಕ್ಕೆ ಈ ಜನರು ಕಾರಣವೆಂದು ಸಹಜವಾಗಿ ಎಲ್ಲರಿಗೂ ಪ್ರತೀತವಾಗುತ್ತದೆ. ಇದಕ್ಕೆ ಇನ್ನೂ ಒಂದು ಕಾರಣವಿರಬಹುದು. ಮಠಕ್ಕೆ ಬರತಕ್ಕವರು ಹೆಚ್ಚಾಗಿ ಲಿಂಗಾಯತ ರಾದ್ದರಿಂದ ಲಿಂಗಾಯತರ ವಶಕ್ಕೆ ಮಠವು ಹೋಗಬಾರದೆಂದು ಇತರ ಮತೀಯರು ಅಭಿಪ್ರಾಯಪಟ್ಟಿರಬಹುದು. ಹಾಗೆ ಅಭಿಪ್ರಾಯಪಟ್ಟು ಪ್ರಯತ್ನಿಸಿದವರಲ್ಲಿ ಚೊಂಚ ಸಿದ್ಧಯ್ಯ ಎಂಬುವರು ಪ್ರಮುಖರು. ಅವರು

ಲಿಂಗಾಯತರೇ. ಅಂತೂ ಮಠದ ಆಸ್ತಿಯ ವಿಷಯವಾಗಿ ಎರಡು ವಿರುದ್ಧ ಬಣಗಳಾದವು. ಸ್ವಾರ್ಥಮೂಲವಾದ ಒಂದನೆಯ ಬಣ ಕಾರ್ಯ ಪ್ರವೃತ್ತವಾಯಿತು. ಅನಂತರ ಸಾರ್ವಜನಿಕ ಆಸ್ತಿಯಾಗಬೇಕೆಂಬ ಎರಡನೆಯ ಬಣ ಹುಟ್ಟಿಕೊಂಡಿತು.

ವ್ಯಕ್ತಿಗಳು ಯಾರಾದರೂ ಇರಬಹುದು. ನಮಗೆ ಅದು ಪ್ರಕೃತವಲ್ಲ. ಮುಂದೆ ನಡೆದ ಅನರ್ಥದ ಕಥೆಯ ಸಂಕ್ಷೇಪ ಇಷ್ಟು- ಸಿದ್ಧಾರೂಢರಿಂದ ಒಂದು ಮರಣಶಾಸನವನ್ನು (ಮೃತ್ಯುಪತ್ರ-ವಿಲ್) ಬರೆಸಿ ಮಠವೆಲ್ಲವೂ ತಮ್ಮ ಖಾಸಗಿ ಸ್ವತ್ತೆಂದೂ ತಮ್ಮ ಕಾಲಾನಂತರ ಗುರಪ್ಪನವರಿಗೆ ಸಲ್ಲಬೇಕೆಂದೂ, ಅವರು ತಮ್ಮ ಮರ್ಜಿಗೆ ತಕ್ಕಂತೆ ಮಠದ ಆಸ್ತಿಯನ್ನು ವಿನಿಯೋಗ ಮಾಡಬಹುದೆಂದೂ ವ್ಯವಸ್ಥೆಮಾಡಿ, ಆ ಪತ್ರಕ್ಕೆ ಆರೂಢರ ರುಜು ಹಾಕಿಸಲಾಯಿತು. ಸದಾ ಅಂತರ್ಮುಖರಾಗಿರುತ್ತಿದ್ದ ಆ ಮಹಾತ್ಮರಿಗೆ ಸ್ವಾರ್ಥಿಗಳ ಸಂಚು ತಿಳಿಯಲಿಲ್ಲ. ಮಠದ ಇತರ ಕಾಗದಪತ್ರಗಳಿಗೆ ರುಜುಹಾಕುವಂತೆ, ಏನನ್ನೂ ವಿಚಾರಿಸದೆ ಈ ಮರಣ ಶಾಸನಕ್ಕೂ ರುಜುಹಾಕಿದರು. ೧೯೨೪ನೆಯ ಇಸವಿ ಮೇ ೧ನೇ ತಾರೀಖು ಇದರ ನೊಂದಾವಣೆಯೂ ಆಯಿತು. ಇದು ಬಹಳ ರಹಸ್ಯದಲ್ಲಿ ನಡೆಯಿತು. ಎರಡು ವರ್ಷಗಳ ಮೇಲೆ ಈ ಗುಟ್ಟು ಹೇಗೋ ಬಹಿರಂಗವಾಯಿತು. ಆಗ ಚೊಂಚ ಸಿದ್ಧಯ್ಯನವರ ನೇತೃತ್ವದಲ್ಲಿ ಎರಡ ನೆಯ ಬಣದ ನಿರ್ಮಾಣವಾಗಿ ಕೋರ್ಟಿನಲ್ಲಿ ಕೇಸು (ಖಟ್ಲೆ) ದಾಖ ಲಾಯಿತು. "ಈ ಮಠದ ಸರ್ವಸ್ವವೂ ಸಾರ್ವಜನಿಕರಿಂದ ಬಂದದ್ದು. ಇದು ಖಾಸಗಿ ಆಸ್ತಿಯಲ್ಲ. ಗುರಪ್ಪನ ಹೆಸರಿಗೆ ಮಾಡಿರುವ ಮರಣಶಾಸನವು ರದ್ದಾಗಬೇಕು" ಎಂಬುದು ಪ್ರತಿವಾದಿಗಳ ಹೇಳಿಕೆಯಾಗಿತ್ತು.

ಆರೂಢರ ಕೀರ್ತಿ ದೊಡ್ಡದಿದ್ದುದರಿಂದ ನ್ಯಾಯಾಲಯವೇ ಮಠಕ್ಕೆ ಬಂದಿತು. ಸಿದ್ಧರ ಸಾಕ್ಷ್ಯವನ್ನು ತೆಗೆದುಕೊಳ್ಳಲಾಯಿತು. ಕೆಲವರ ಒತ್ತಾಯಕ್ಕೆ ಮಣಿದ ಆರೂಢರು "ಇದೆಲ್ಲವೂ ನನ್ನ ಖಾಸಗಿ ಸ್ವತ್ತು" ಎಂದು ಸಾಕ್ಷ್ಯವನ್ನು ನುಡಿದರಂತೆ. ಇನ್ನೊಂದು ಸಲ ವಕೀಲರ ಪ್ರಶ್ನೆಗೆ ಉತ್ತರಿಸುವಾಗ "ಇದಾವುದೂ ನನ್ನ ಆಸ್ತಿಯಲ್ಲ. ಭಕ್ತಜನರು ಮಾಡಿದ್ದಾರೆ.

ಎಲ್ಲ ಭಕ್ತರಿಗೂ ಇದು ಸೇರಿದ್ದು" ಎಂದು ನುಡಿದರಂತೆ. ಅದು ಹೇಗಾದರೂ ಇರಲಿ. ಬರೆದಿದ್ದ ಮರಣಶಾಸನವನ್ನು ನ್ಯಾಯಾಲಯವು ರದ್ದುಪಡಿಸಿತು.

ಸ್ವಾರ್ಥಿಗಳಾದ ಸಮಯಸಾಧಕರ ಬಣಕ್ಕೆ ನಿರಾಸೆಯಾಯಿತು. "ಗುರುನಾಥಾರೂಢರು ಹೇಗೂ ಉತ್ತರಾಧಿಕಾರಿಗಳೆಂಬುದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಇನ್ನು ಸಿದ್ಧರಿಂದ ನಮಗೆ ಆಗಬೇಕಾದ್ದೇನು? ಈತನು ಬದುಕಿದ್ದರೆ ಆಸ್ತಿಯನ್ನು ಬೇರೆಯವರಿಗೆ ಕೊಟ್ಟುಬಿಡುವ ಸಂಭವವೂ ಇದೆ. ಕಡೆಯ ಪಕ್ಷ ಬೆಳ್ಳಿ ಬಂಗಾರಗಳನ್ನಾದರೂ ಇನ್ನೊಬ್ಬರಿಗೆ ಕೊಡಲು ಸಾಧ್ಯವಿದೆ. ಈ ಭೋಳೆ ಸ್ವಭಾವದ ಮುದುಕನ ಬುದ್ಧಿ ಯಾವ ಹೊತ್ತಿಗೆ ಹೇಗಿರುತ್ತದೆಯೋ ನಂಬುವಂತಿಲ್ಲ" ಎಂಬ ಭಾವನೆ ಬೆಳೆಯಿತು. ನಿರ್ಮಮ ನಿರಹಂಕಾರ ಮೂರ್ತಿಗಳಾದ ಸಿದ್ಧಾರೂಢರಿಗೆ ವಿಷಪ್ರಯೋಗ ಮಾಡುವುದಕ್ಕೆ ಸಹ ಈ ಜನರು ಹೇಸಲಿಲ್ಲ.

ಈ ಹಿಂದೆ, ಎರಡು ಸಲ ವಿಷಪ್ರಯೋಗವಾಗಿತ್ತೆಂದೂ ಸಿದ್ಧರು ತಮ್ಮ ಯೋಗಶಕ್ತಿಯಿಂದ ಅದನ್ನು ನಿಷ್ಫಲಗೊಳಿಸಿದರೆಂದೂ ಹೇಳುತ್ತಾರೆ. ಮೂರನೆಯ ಸಲ ಮತ್ತೆ ಅದೇ ನೀಚಕಾರ್ಯವನ್ನು ಧನಲೋಭಿಗಳಾದ ದುರ್ಬುದ್ಧಿಯವರು ನಡೆಸಿದರು. ಆಗ ಸಿದ್ಧಾರೂಢರು " ನನಗೆ ವಯಸ್ಸಾಗಿದೆ. ದೇಹವು ತುಂಬ ಜೀರ್ಣವಾಗಿದೆ. ನನ್ನ ಬೋಧೆ ಈ ಜನರಿಗೆ ಬೇಡವಾಗಿದೆ. ನಾನು ಜೀವಿಸಿದ್ದು ಈ ಜನರ ಮನಸ್ಸಿನ ತೊಳಲಾಟವನ್ನು ಹೆಚ್ಚಿಸುವುದಾದರೂ ಏಕೆ?" ಎಂದು ಆಲೋಚಿಸಿ. ಈ ಮರ್ತ್ಯ ಕಳೇವರವನ್ನು ತ್ಯಜಿಸಿದರೆಂದು ಹೇಳುತ್ತಾರೆ. ಅದು ಹೇಗಿದ್ದರೂ ಶ್ರೀಕೃಷ್ಣ ಪರಮಾತ್ಮನಿಗೆ ವ್ಯಾಧನ ಬಾಣಪ್ರಯೋಗವು ನಿಮಿತ್ತವಾದಂತೆ ವಿಷಪ್ರಯೋಗವು ಸಿದ್ಧಾರೂಢರ ದೇಹತ್ಯಾಗಕ್ಕೆ ಕೇವಲ ನಿಮಿತ್ತವಾಯಿತು. ಶಾಲಿವಾಹನಶಕ ೧೮೫೧ ಶುಕ್ಲನಾಮಸಂವತ್ಸರದ ಶ್ರಾವಣ ಬಹುಳ ಪಾಡ್ಯ (ತಾ. ೨೧-೦೮-೧೯೨೯) ಬ್ರಾಹ್ಮ ಮುಹೂರ್ತದಲ್ಲಿ ಶ್ರೀಸಿದ್ಧಾರೂಢ ಸದ್ಗುರುಗಳ ಪುಣ್ಯಾವತಾರವು ಪೂರ್ಣವಾಯಿತು.

ಸಿದ್ಧರು ಜನ್ಮತಃ ಸಿದ್ಧಪುರುಷರಾಗಿಯೇ ಜನಿಸಿದರು. ಜನ್ಮಾಂತರದ ಕರ್ಮಶೇಷದಿಂದ ಈ ಜನ್ಮವನ್ನೆತ್ತಬೇಕಾಯಿತು. ಶಮ, ದಮ, ವೈರಾಗ್ಯ-ಮೊದಲಾದ ಮಹಾಗುಣಗಳು ಗಾಢಪ್ರಯತ್ನಗಳಿಗೂ ನಿಲುಕದಂತಹವು. ಅವು ಸ್ವತಃಸಿದ್ಧವಾಗಿ ಅವರಲ್ಲಿ ನೆಲೆಸಿದುದಕ್ಕೆ ಕರ್ಮವಾದಿಗಳಾದ ನಾವು ಹಿಂದಿನ ಜನ್ಮಗಳಲ್ಲಾದ ಸಾಧನೆಗಳನ್ನೇ ಒಪ್ಪಬೇಕಾಗುತ್ತದೆ. ಭಕ್ತಿಭಾವವು ನೆಲೆಸುವುದು ಅಷ್ಟು ದೊಡ್ಡದಾಗಿ ಕಾಣಿಸುವುದಿಲ್ಲ. ಅದ್ವೈತಭಾವವು ಮಾತ್ರ ಮನುಷ್ಯ ಕಲ್ಪನೆಗೆ ಮೀರಿದ್ದು. ಶಾಸ್ತ್ರಾಚಾರ್ಯೋಪದೇಶಗಳ ಫಲವಾಗಿಯೇ ಲಭಿಸತಕ್ಕದ್ದು. ಶ್ರೀಗಜದಂಡ ಸ್ವಾಮಿಗಳ ಶಿಷ್ಯತ್ವವನ್ನು ವಹಿಸುವುದಕ್ಕೆ ಮೊದಲೇ ಸಿದ್ಧರಿಗೆ ಅದ್ವೈತಭಾವದಲ್ಲಿ ಶ್ರದ್ಧೆ ಪ್ರಬಲವಾಗಿ ಬೇರೂರಿತ್ತು. ಗುರುಶಿಷ್ಯ ಸಂಪ್ರದಾಯವನ್ನು ಪಾಲಿಸುವುದಕ್ಕಾಗಿ ಸಿದ್ಧರು ಅವರ ಶಿಷ್ಯರಾಗಿದ್ದರಲ್ಲದೆ ಬೇರೆ ಕಾರಣವೇನೂ ಇರಲಿಲ್ಲ. ನಿಜಗುಣಶಿವಯೋಗಿಗಳ ಗ್ರಂಥಗಳನ್ನೂ ಅವರು ಅಭ್ಯಾಸಮಾಡಿರಬೇಕು. ಅವರ ಉಪನ್ಯಾಸಗಳಲ್ಲಿ ಆ ಗ್ರಂಥಗಳನ್ನು ವಿಶೇಷವಾಗಿ ಉಲ್ಲೇಖಿಸುತ್ತಿದ್ದರು ಹಾಗೂ ಬೋಧಿಸುತ್ತಿದ್ದರು. ಅವರು ಹುಬ್ಬಳ್ಳಿಯಲ್ಲಿ ನೆಲೆಸುವುದಕ್ಕೆ ಶಿಷ್ಯರ ತರಬೇತಿಯೇ ಉದ್ದೇಶವಾಗಿರಬೇಕು. ಅನೇಕರು ಅವರ ಉಪದೇಶಗಳಿಂದ ಕೃತಕೃತ್ಯರಾದರೆಂದು ತಿಳಿದುಬರುತ್ತದೆ. ವಿವರವು ನಮಗೆ ಪೂರ್ತಿಯಾಗಿ ದೊರಕುವುದಿಲ್ಲ. ಅವರಲ್ಲಿ ಪವಾಡಗಳನ್ನೆಸಗುವ ಸಾಮರ್ಥ್ಯವಿತ್ತೆಂಬುದನ್ನು ಯಾರೂ ಅಲ್ಲಗಳೆಯಲಾರರು. ಆದರೆ ಅವರ ಮಾಹಾತ್ಮ್ಯವು ಪವಾಡಗಳಿಂದ ಸಿದ್ಧವಾಗಬೇಕಾಗಿಲ್ಲ. ಐಂದ್ರಜಾಲಿಕನೂ ಪವಾಡಗಳನ್ನು ಮಾಡಿ ತೋರಿಸುತ್ತಾನೆ. ಅಷ್ಟರಿಂದ ಅವನು ಮಹಾತ್ಮನಾಗಲಾರ. ಸಿದ್ಧರ ಉಪದೇಶ, ಉಪದೇಶಕ್ಕೆ ತಕ್ಕಂತಹ ಸದ್ವರ್ತನಗಳು ಅವರ ಮಹಾತ್ಮ್ಯವನ್ನು ಎತ್ತರಿಸಿ ಹಿಡಿದವು.

ಮಠಕ್ಕೆ ಬಂದು ಮುಸುಕುತ್ತಿದ್ದ ಜನಗಳಲ್ಲಿ ಬಹಳ ಜನ

ಜ್ಞಾನಾಕಾಂಕ್ಷಿಗಳಾಗಿರಲಿಲ್ಲ. ಅವರಿಗೆ ಪವಾಡ ಬೇಕಾಗಿತ್ತು. ತೃಪ್ತಿಯಾಗುವಷ್ಟು ಊಟ ಉಪಚಾರಗಳು ಬೇಕಾಗಿದ್ದವು. ಹೆಚ್ಚಾಗಿ ಐಹಿಕಸುಖಕ್ಕಾಗಿ ಹಂಬಲಿಸತಕ್ಕ ಜನರೇ ನಾನಾ ಪ್ರಾರ್ಥನೆಗಳನ್ನು ಸಾಧಿಸಿಕೊಳ್ಳುವುದಕ್ಕಾಗಿ ಮಠಕ್ಕೆ ಬರುತ್ತಿದ್ದರು. ಜಿಜ್ಞಾಸುಗಳಾಗಿ ಬರುತ್ತಿದ್ದ ಪುಣ್ಯಾತ್ಮರ ಸಂಖ್ಯೆ ಬಹಳ ಕಡಿಮೆ. ಅಂತೂ ಅವರಲ್ಲಿ ಕೆಲವರು ಆರೂಢರ ಉಪದೇಶದಿಂದ ಧನ್ಯರಾದರು.

ಈ ಬಗೆಯ ಯೋಗಾರೂಢಪುರುಷರಿಗೆ ಲೌಕಿಕ ವ್ಯವಹಾರದಲ್ಲಿ ಆಸಕ್ತಿ ಇರುವುದಿಲ್ಲ. ಮಠಕ್ಕೆ ಆಯ-ವ್ಯಯಗಳು ಅಧಿಕವಾದಾಗ ಕಾರ್ಯನಿರ್ವಾಹದಕ್ಷನಾದ ವ್ಯವಸ್ಥಾಪಕನು ಇಲ್ಲದೇ ಹೋದರೆ ಪರಿಸ್ಥಿತಿ ಏನಾದೀತೆಂಬುದಕ್ಕೆ ಆರೂಢಮಠದಲ್ಲಿ ನಡೆದ ದುರ್ವ್ಯವಹಾರವೇ ಸಾಕ್ಷಿ. ಸಿದ್ಧಾರೂಢರ ತರುವಾಯ ಪೀಠಾಧ್ಯಕ್ಷರಾದ ಶ್ರೀ ಗುರುನಾಥಾರೂಢರು ತಮ್ಮ ಗುರುಗಳಿಂದ ದೀಕ್ಷೋಪದೇಶಗಳನ್ನು ಪಡೆದು, ಆರೂಢರ ಪ್ರಿಯಶಿಷ್ಯರೆಂಬ ಹೆಸರನ್ನು ಸಾರ್ಥಕಗೊಳಿಸಿದರು. ಅವರು ಸಂಪೂರ್ಣ ಮೌನವ್ರತಧಾರಿಗಳಾದ್ದರಿಂದ ವಿಶೇಷವಾದ ಬದಲಾವಣೆಯನ್ನು ಮಠದಲ್ಲಿ ತಂದು ಅದನ್ನು ಉಚ್ಚಶಿಖರಕ್ಕೆ ಏರಿಸಲು ಸಾಧ್ಯವಾಗಲಿಲ್ಲವೆಂದು ತೋರುತ್ತದೆ. ಈಗ ಸಿದ್ಧಾರೂಢಮಠವು ಧರ್ಮದರ್ಶಿಗಳ ಮಂಡಲಿ (ಟ್ರಸ್ಟ್)ಯ ವಶದಲ್ಲಿದೆ. ಭವಿಷ್ಯತ್ತನ್ನು ಯಾರು ಬಲ್ಲರು ? ಆರೂಢರ ಕೃಪೆಯಿಂದ ಅದು ಉನ್ನತಸ್ಥಿತಿಯನ್ನೇರಿ ಸಿದ್ಧಾರೂಢ ಸಂಪ್ರದಾಯವನ್ನು ಯಶಸ್ವಿಯಾಗಿ ಮುಂದುವರಿಸಲೆಂದು ಭಕ್ತಜನರ ಬೇಡಿಕೆಯಾಗಿದೆ.

ಸಿದ್ಧಾರೂಢ ನಮಸ್ತೇಽಸ್ತು ಸ್ಥಿತಪ್ರಜ್ಞಾಯ ತೇ ನಮಃ ।<br>
ಜ್ಞಾನಾಯ ಜ್ಞಾನಸಿದ್ಧಾಯ ಜ್ಞಾನಗಮ್ಯಾಯ ತೇ ನಮಃ ॥

* * * * *

## ಗ್ರಂಥಋಣ


ಶ್ರೀಸಿದ್ಧಾರೂಢ ಕಥಾಮೃತ — ಶ್ರೀ ಶಿವರಾಮಚಂದ್ರಗಿರಿ

ಶ್ರೀಸಿದ್ಧಾರೂಢಭಾರತೀಚರಿತ್ರಕಲ್ಪದ್ರುಮ — ಶ್ರೀ ಬೆಳ್ಳಿಗಟ್ಟಿ ಬಸವಂತಾಚಾರ್ಯ

ಬಯಲ ಅತಿಥಿ — ಶ್ರೀಮತಿ ಶಾಂತಲಾ ಯಡ್ರಾವಿ


ಶ್ರೀಸಿದ್ಧಾರೂಢಸ್ವಾಮಿಗಳು — ಡಾ॥ ಮಲ್ಲಿಕಾರ್ಜುನ ಸಿಂದಗಿ

ನಡೆದು ತೋರಿದ ವಿಶ್ವಯೋಗಿ — ಎಸ್. ಪ್ರಭುಲಿಂಗ (ಸಿದ್ಧಾರೂಢ ತನಯ)

ಆರೂಢದರ್ಶನ (ಸ್ಮರಣ ಸಂಚಿಕೆ ೧೯೯೩) - ಶ್ರೀಸಿದ್ಧಾರೂಢಮಠ, ಹುಬ್ಬಳ್ಳಿ.

ಕೈವಲ್ಯಪದ್ಧತಿ — ಶ್ರೀ ಮನ್ನಿಜಗುಣಶಿವಯೋಗಿಗಳು


ॐ



ವಿದ್ವಾನ್ ಎನ್. ರಂಗನಾಥಶರ್ಮಾರದು ೮೦ ರ ಹರೆತನ. "ಸಂಸ್ಕೃತ-ಕನ್ನಡ ಭಾಷೆಗಳಲ್ಲಿ ಘನಿಷ್ಠವಾದ ಪಾಂಡಿತ್ಯ, ವ್ಯಾಕರಣಾದಿಶಾಸ್ತ್ರಗಳಲ್ಲಿ ವಿಶೇಷ ಪರಿಣತೆ, ಸರಳಸಜ್ಜನಿಕೆ, ಹಳೆತಲೆಮಾರಿನ ನುರಿತ ವಿದ್ವಾಂಸರ ಪೈಕಿ ಅಪರೂಪದ ವ್ಯಕ್ತಿತ್ವ, ಪಾಂಡಿತ್ಯದಷ್ಟೇ ಎತ್ತರದ ನಿಲುವು, ಕುಗ್ಗದ ಉತ್ಸಾಹ-ನಿಲ್ಲದ ಸಾಹಿತ್ಯಸೇವೆ" ಇವು ಶರ್ಮರ ವೈಶಿಷ್ಟ್ಯಗಳು.

ಬೆಂಗಳೂರಿನ ಸರ್ಕಾರಿ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣ ಪ್ರಾಧ್ಯಾಪಕರಾಗಿಯೂ, ಕನ್ನಡ ಸಾಹಿತ್ಯ ಪರಿಷತ್ ನಲ್ಲಿ ಹಳಗನ್ನಡ ಕಾವ್ಯಗಳ ಅನುವಾದಕ ಮಂಡಲಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ ಶ್ರೀ ಶರ್ಮರಿಗೆ, ಸಂಸ್ಕೃತದಿಂದ ಕನ್ನಡವು ಶ್ರೀಮಂತವಾಗಬೇಕೆಂಬ ಹಂಬಲ. ರಾಮಾಯಣಾದಿ ಸುಮಾರು ೪೫, ಅನುವಾದ ಹಾಗೂ ಸ್ವತಂತ್ರ ಗ್ರಂಥಗಳನ್ನು ರಚಿಸಿದ ಶರ್ಮರ ಬರಹಶೈಲಿ ರೋಚಕ, ಹೃದಯಕ್ಕೆ ನಾಟುವಂಥದ್ದು. ಅದು ಡಿ.ವಿ.ಜಿ. ಯವರ ಮನಸೂರೆಗೊಂಡಿದೆ.

ಶರ್ಮರಿಗೆ ಹಲವು ಪ್ರಶಸ್ತಿ-ಸಮ್ಮಾನಗಳು ಸಂದಿದ್ದು, ಅವುಗಳಲ್ಲಿ ಕರ್ನಾಟಕ ಸರ್ಕಾರದ, ಸಂಸ್ಕೃತ ಪಂಡಿತರಿಗೆ ಮೀಸಲಾದ *ರಾಜ್ಯ ಪ್ರಶಸ್ತಿ*, ಸಾಹಿತ್ಯಕ್ಕೆ ಮೀಸಲಾದ *ರಾಜ್ಯೋತ್ಸವ ಪ್ರಶಸ್ತಿ*, ಭಾರತ ಸರ್ಕಾರದ, ಸಂಸ್ಕೃತಾಧ್ಯಾಪಕರಿಗೆ ಮೀಸಲಾದ *ರಾಷ್ಟ್ರ ಪ್ರಶಸ್ತಿ*, ಸಂಸ್ಕೃತ ವಿದ್ವಾಂಸರಿಗೆ ಮೀಸಲಾದ *ರಾಷ್ಟ್ರಪತಿ ಪ್ರಶಸ್ತಿಗಳು* ಪ್ರಮುಖವಾದವುಗಳು. ೧೯೯೪ ರಲ್ಲಿ ಅವರಿಗೆ, ಅವರಭಿಮಾನಿಗಳಿಂದ ಅಭಿನಂದನ ಗ್ರಂಥಗಳೂ ಸಂದಿವೆ.